ಕೊಡಗು ಜಿಲ್ಲೆಯಲ್ಲಿ ದೇವಸ್ಥಾನಗಳಿಗೆ ಅನುದಾನ.

2780 (3804)

ಶ್ರೀ ಡಿ.ಎಸ್.ಮಾದಪ್ಪ (ಮಡಕೇರಿ): ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ದತ್ತಿ ನಿಧಿ ವ್ಯವಸ್ಥಾಪನಾ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವ ದೇವಾಲಯ ಎಷ್ಟು?

ಆ) ಈ ದೇವಾಲಯಗಳಿಗೆ ಸೇರಿರುವ ಆಸ್ತಿ ಪಾಸ್ತಿಗಳ ಮೊಬಲಗೆಷ್ಟು, ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಕಳೆದ 4 ವರ್ಷಗಳಲ್ಲಿ ಸರ್ಕಾರ ಬಿಡುಗಡೆ ಮಾಡಿದ ಅನುದಾನ ಎಷ್ಟು?

ಶ್ರೀ ಬಿ.ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):

1) ಕೊಡಗು ಜಿಲ್ಲೆಯಲ್ಲಿ 7 ದೇವಾಲಯಗಳು, ಕೊಡಗು ದೇವಾಲಯದ ನಿಧಿ ಸಮಿತಿಯ ಉಸ್ತುವಾರಿಯಲ್ಲಿರುತ್ತದೆ.

2) ಈ ದೇವಾಲಯಗಳಿಗೆ ಸೇರಿರುವ ಆಸ್ತಿಪಾಸ್ತಿಗಳ ಒಟ್ಟು ಮೊಬಲಗು ರೂ.4.00 ಕೋಟಿ, ಕಳೆದ 4 ವರ್ಷಗಳಲ್ಲಿ ದೇವಾಲಯಗಳ ಜೀರ್ಣೋದ್ಧಾರಕ್ಕೆ ಸರ್ಕಾರವು ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಿದೆ.

ಕ್ರ. ಸಂ.	ದೇವಾಲಯದ ಹೆಸರು ಮತ್ತು ಆದೇಶ	ಮಂಜೂರಾದ ಮೊತ್ತ
1	ಪಾಡಿ ಶ್ರೀ ಹಿಗ್ಗುತಪ್ಪ ದೇವಾಲಯದ ಆದೇಶ ಸಂ.ಸಿನ್‌ಆರ್: ಸಿಆರ್: 235: 95-96 ದಿ: 4-5-96	ರೂ. 50,000
2	ಭಾಗಮಂಡಲ ತಲಕಾವೇರಿ ದೇವಾಲಯ ಆದೇಶ ಸಂ.ಸಿಎನ್‌ಆರ್: ಸಿಆರ್: 235: 95-96 ದಿನಾಂಕ: 4-5-96	ರೂ. 50,000
3	ತಲಕಾವೇರಿ ಭಾಗಮಂಡಲದ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ (ವಾರ್ತಾ ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಇಲಾಖೆ) ಸರ್ಕಾರಿ ಆದೇಶ ವಾಪ್ರಯು 340:97 ದಿನಾಂಕ: 21-3-98	ರೂ. 50,00,000

ಕೊಡಗು ಜಿಲ್ಲೆಯಲ್ಲಿ ಆಶ್ರಯ ಯೋಜನೆಯಲ್ಲಿ ಅವ್ಯವಹಾರ.

2781: (3802)

ಶ್ರೀ ಡಿ.ಎಸ್.ಮಾದಪ್ಪ (ಮಡಿಕೇರಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ 1992-93, 1993-94 ಮತ್ತು 1994-95ರಲ್ಲಿ ಆಶ್ರಯ, ಅಂಬೇಡ್ಕರ್ ಮತ್ತು ಇಂದಿರಾ ಆವಾಜ್ ಯೋಜನೆಯಡಿ ನಿರ್ಮಿಸಲಾದ ಮನೆಗಳು ಎಷ್ಟು?

ಆ) ಈ ಮೇಲಿನ ಅವಧಿಯಲ್ಲಿ ಮೇಲಿನ ಯೋಜನೆಯಡಿ ನಡೆದಿರುವ ಅವ್ಯವಹಾರಗಳು ಸರಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಅಪರಾಧಿಗಳ ವಿರುದ್ಧ ಸರಕಾರ ಇನ್ನೂ ಕ್ರಮ ಕೈಗೊಳ್ಳದಿರಲು ಕಾರಣವೇನು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):

ಅ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಆ) ಬಂದಿದೆ.

ಇ) ಈ ಯೋಜನೆಯಡಿ ನಡೆದಿರುವ ಅವ್ಯವಹಾರಕ್ಕೆ ಜವಾಬ್ದಾರರಾದ ಅಧಿಕಾರಿಗಳ ವಿರುದ್ಧ ದೋಷಾರೋಪಣ ಪಟ್ಟಿಯನ್ನು ತಯಾರಿಸಿ ವಿವರಣೆ ಕೇಳಿದ್ದು, ಅವರಿಂದ ಪಡೆದ ಉತ್ತರಗಳ ಪರಿಶೀಲನೆ ನಡೆಸಿ ತನಿಖೆ ನಡೆಸಲಾಗುತ್ತಿದ್ದು, ಇಲಾಖಾ ವಿಚಾರಣೆ ಪ್ರಗತಿಯಲ್ಲಿರುತ್ತದೆ.

ವಿಧಾನಸಭಾ ಸದಸ್ಯರಾದ ಶ್ರೀ ಡಿ.ಎಸ್.ಮಾದಪ್ಪರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ.3802ಕ್ಕೆ ಅನುಬಂಧ

ಕ್ರಮ ಸಂಖ್ಯೆ	ವರ್ಷ	ಆಶ್ರಯ ಯೋಜನೆ - ಗ್ರಾಮೀಣ		ಆಶ್ರಯ ಯೋಜನೆ - ನಗರ	
		ಗುರಿ	ಸಾಧನೆ	ಗುರಿ	ಸಾಧನೆ
1.	1992-93	ಯಾವುದೇ ಗುರಿಯಿರುವುದಿಲ್ಲ		ಯಾವುದೇ ಗುರಿಯಿರುವುದಿಲ್ಲ	
2.	1993-94	1427	1200	43	43
3.	1994-95	848 (ಬಾಕಿ 796 ಮನೆಗಳ ಗುರಿಯನ್ನು ಜಿಲ್ಲಾ ಪಂಚಾಯತ್‌ಗೆ ವರ್ಗಾಯಿಸಿದೆ)	52	ಯಾವುದೇ ಗುರಿಯಿರುವುದಿಲ್ಲ	

ಅಂಬೇಡ್ಕರ್ ಯೋಜನೆ - ಗ್ರಾಮೀಣ		ಅಂಬೇಡ್ಕರ್ ಯೋಜನೆ - ನಗರ	
ಗುರಿ	ಸಾಧನೆ	ಗುರಿ	ಸಾಧನೆ
ಯಾವುದೇ ಗುರಿಯಿರುವುದಿಲ್ಲ		ಯಾವುದೇ ಗುರಿಯಿರುವುದಿಲ್ಲ	
324	263	50	50
183	100	ಯಾವುದೇ ಗುರಿಯಿರುವುದಿಲ್ಲ	

ಬೈಲಹೊಂಗಲ ಬಸ್ ನಿಲ್ದಾಣದ ಡಾಂಬರೀಕರಣ ಮಾಡುವುದು ಹಾಗೂ ಸ್ವಚ್ಛತೆ ಕಾಪಾಡುವುದು.

2783: (3762)

ಶ್ರೀ ಮಹಾಂತೇಶ ಎಸ್.ಕೌಜಲಗಿ (ಬೈಲಹೊಂಗಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಬಸ್ ಸ್ಟ್ಯಾಂಡಿನಲ್ಲಿ ತಗ್ಗುಗಳು ಬಿದ್ದಿದ್ದು ಕೂಡಲೇ ಇಲ್ಲಿ ಡಾಂಬರೀಕರಣ ಮಾಡುವುದು ಅವಶ್ಯವಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬೈಲಹೊಂಗಲ ಬಸ್‌ಸ್ಟ್ಯಾಂಡು ಚಿಕ್ಕದಾಗಿದ್ದು ಕವರ್ ಅಕಮೋಡೇಶನ್ ಬಸ್‌ಸ್ಟ್ಯಾಂಡಿನಲ್ಲಿ ನೀರು ಬರದಂತೆ ಮಾಡುವ ಬಗ್ಗೆ ಕೈಗೊಳ್ಳಲಿರುವ ಕ್ರಮಗಳೇನು;

ಇ) ಈ ಬಸ್‌ಸ್ಟ್ಯಾಂಡಿನಲ್ಲಿರುವ ಮೂತ್ರಾಲಯ ಮತ್ತು ಶೌಚಾಲಯವನ್ನು ನವೀಕರಿಸಲು ಮತ್ತು ಬಸ್ ಸ್ಟ್ಯಾಂಡ್‌ನ್ನು ಸ್ವಚ್ಛವಾಗಿಟ್ಟುಕೊಳ್ಳಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಹೌದು.

ಆ) ಕವರ್ಡ್ ಅಕಮೊಡೇಶನ್ ಕೆಲಸ ಪ್ರಾರಂಭಿಸಿದೆ. ಆವರಣದ ನೀರು ಬಸ್ ಸ್ಟ್ಯಾಂಡ್ ಒಳಗೆ ಬರದಂತೆ ಪ್ಲಿಂತ್ ಎತ್ತರವನ್ನು ಹೆಚ್ಚಿಸಲು ಯೋಜಿಸಲಾಗಿದೆ.

ಇ) ಸದರಿ ಬಸ್ ಸ್ಟ್ಯಾಂಡ್‌ನಲ್ಲಿ ಒಂದು ಹೆಚ್ಚುವರಿ ಶೌಚಾಲಯವನ್ನು ನಿರ್ಮಿಸಿದ್ದು, ಹಳೆಯ ಶೌಚಾಲಯವನ್ನು ಸಹ ನವೀಕರಿಸಲಾಗಿದೆ; ಹಾಗೂ ಬಸ್ ಸ್ಟ್ಯಾಂಡ್ ಸ್ವಚ್ಛವಾಗಿಡಲು ಕ್ರಮ ಕೈಗೊಳ್ಳಲಾಗುವುದು.

ಸಾರಿಗೆ ಸಂಸ್ಥೆಯ ಹೊಸ ವಿಭಾಗಗಳು.

2784: (3763)

ಶ್ರೀ ಮಹಾಂತೇಶ ಎಸ್.ಕೌಜಲಗಿ (ಬೈಲಹೊಂಗಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದಾಗಿ ಎಷ್ಟು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವಿಭಾಗಗಳನ್ನು ತೆರೆಯಲಾಗಿದೆ. ಅವು ಯಾವುವು; ಮತ್ತು ಇನ್ನೂ ಎಷ್ಟು ಹೊಸ ವಿಭಾಗಗಳನ್ನು ತೆರೆಯಲು ಉದ್ದೇಶಿಸಲಾಗಿದೆ.

ಆ) ಈ ಹೊಸ ವಿಭಾಗಗಳನ್ನು ಪ್ರಾರಂಭಿಸಿರುವುದರಿಂದ ಯಾವ ಯಾವ ವಿಭಾಗಗಳಿಗೆ ಎಷ್ಟು ಎಷ್ಟು ಲಾಭ- ಹಾನಿಗಳುಂಟಾಗಿರುವುವು?

ಇ) ಹಾನಿಯಾಗಿರುವ ವಿಭಾಗಗಳನ್ನು ಸುಧಾರಿಸಲು ಸರಕಾರ ಕ್ರಮ ಕೈಗೊಳ್ಳುವರೇ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) 1990-91ರ ನಂತರ 5 ವಿಭಾಗಗಳನ್ನು (ಬೆಂಗಳೂರುನಗರ ಸಾರಿಗೆ ಹೊರತು ಪಡಿಸಿ) ಪ್ರಾರಂಭಿಸಲಾಗಿದೆ.

1) ಬೆಂಗಳೂರು (ಗ್ರಾಮಾಂತರ) ವಿಭಾಗ

2) ದಾವಣಗೆರೆ

3) ಗದಗ

4) ಬಾಗಲಕೋಟೆ

5) ಬೀದರ್

ಹೊಸದಾಗಿ ಇನ್ನೂ 5 ವಿಭಾಗಗಳನ್ನು ತೆರೆಯಲು ಉದ್ದೇಶಿಸಲಾಗಿದೆ.

ಆ) ಈ ಹೊಸ ವಿಭಾಗಗಳ ಲಾಭ: ನಷ್ಟದ ವಿವರಗಳನ್ನು 1990-91ರಿಂದ 1997-98ರವರೆಗೆ ಅನುಬಂಧದಲ್ಲಿ ಕೊಡಲಾಗಿದೆ.

ಇ) ಹಾನಿಯಾಗಿರುವ ವಿಭಾಗಗಳನ್ನು ಸರಿಪಡಿಸಲು ಈ ಕೆಳಕಂಡ ಕ್ರಮಗಳನ್ನು ಸಂಸ್ಥೆಯು ತೆಗೆದುಕೊಳ್ಳಲಾಗುತ್ತಿದೆ.

1) ಮಾರ್ಗಗಳ ಕಾರ್ಯಾಚರಣೆಯನ್ನು ಪುನರ್‌ರಚಿಸುವ ಮೂಲಕ ಆದಾಯವನ್ನು ಹೆಚ್ಚಿಸುವಿಕೆ.

2) ಸೋರಿಕೆಯನ್ನು ತಡೆಗಟ್ಟಲು ವಾಹನ ತನಿಖೆಯನ್ನು ಚುರುಕುಗೊಳಿಸುವಿಕೆ.

3) ಪ್ರತಿ ಕಿ.ಮೀ.ಗೆ ತಗಲುವ ಇಂಧನ, ಟೈರುಗಳ ಬಳಕೆ, ವಾಹನ ಬಳಕೆ,

ಚಾಲಕ ಮತ್ತು ನಿರ್ವಾಹಕರ ಬಳಕೆ ಮುಂತಾದ ಭೌತಿಕ ಕಾರ್ಯಾಚರಣೆಯಲ್ಲಿ ಸುಧಾರಣೆ.

ಸದಸ್ಯರಾದ ಶ್ರೀ ಮಹಾಂತೇಶ ಎಸ್.ಕೌಜಲಗಿ ರವರ ವಿಧಾನಸಭಾ ಚುಕ್ಕೆ ಗುರುತಿಲ್ಲದ ಪ್ರಶ್ನೆ 3763ಕ್ಕೆ ಅನುಬಂಧ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ

ವಿಭಾಗಗಳ ಲಾಭ : ನಷ್ಟದ ವಿವರಗಳು ಸಾರಿಗೆ ಆದಾಯದ ಮೇಲೆ

(ಲಕ್ಷ ರೂ.ಗಳಲ್ಲಿ)

ವರ್ಷ	ಬೆಂಗಳೂರು (ಗ್ರಾಮಾಂತರ)	ದಾವಣಗೆರೆ	ಗದಗ	ಬಾಗಲಕೋಟೆ	ಬೀದರ್
1990-91	-35.29	-17.19	-52.60	-43.45	-197.98
1991-92	-123.90	-111.72	-117.13	-56.77	-280.99
1992-93	-40.27	-174.79	-244.45	-172.22	-290.76
1993-94	-146.68	-417.25	-415.97	-312.39	-418.87
1994-95	-266.88	-268.77	-348.77	-185.21	-469.34
1995-96	-22.83	-227.19	-303.02	-56.39	-487.69
1996-97	-132.70	-306.58	-378.64	-370.02	-606.61
1997-98	+257.88	-57.91	-212.86	-153.70	-420.26

ಜಮೀನು ನಿವೇಶನ ಅಥವಾ ಮನೆಗಳ ನೋಂದಾವಣಿ ಮೌಲ್ಯ

2787 (3843)

ಶ್ರೀ ವಿ.ಮುನಿಯಪ್ಪ (ಶಿಡ್ಲಘಟ್ಟ): ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಮೀನು ನಿವೇಶನ ಅಥವಾ ಮನೆಗಳ ನೋಂದಾವಣೆ ಸಮಯದಲ್ಲಿ ರಾಜ್ಯ ಸರ್ಕಾರವು ನಿಗದಿಪಡಿಸಿರುವ ಆಸ್ತಿಯ ಮೌಲ್ಯವು ಹೆಚ್ಚಾಗಿರುವ ಬಗ್ಗೆ ಮರು ಪರಿಶೀಲನೆ ಮಾಡಲು ಸರ್ಕಾರವು ಒಂದು ಅಧ್ಯಯನ ಸಮಿತಿಯನ್ನು ನೇಮಕ ಮಾಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಆ ಸಮಿತಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಬಿ.ಸೋಮಶೇಖರ್ (ಕಂದಾಯ ಮಂತ್ರಿಗಳು)

ಅ) ಹೌದು

ಆ) ಸಮಿತಿಗಳು ವರದಿಯನ್ನು ಇನ್ನು ಸಲ್ಲಿಸಿರುವುದಿಲ್ಲ.

ಇ) ಶೀಘ್ರವಾಗಿ ವರದಿ ಸಲ್ಲಿಸಲು ಸಮಿತಿಗಳಿಗೆ ಸೂಚಿಸಿದೆ.

ರಾಜ್ಯದಲ್ಲಿ ಆಶ್ರಯ ಯೋಜನೆಯ ಸಾಧನೆ.

2788: (3846)

ಶ್ರೀ ವಿ.ಮುನಿಯಪ್ಪ (ಶಿಡ್ಲಘಟ್ಟ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1996-97, 1997-98 ಮತ್ತು 1998-99ನೇ ಸಾಲುಗಳ ಆಶ್ರಯ ಯೋಜನೆಯಲ್ಲಿ ರಾಜ್ಯದ ಗುರಿ ಹಾಗೂ ಭೌತಿಕ ಸಾಧನೆಯೇನು?

ಆ) ಈ ಮೇಲ್ಕಂಡ 3 ವರ್ಷಗಳಲ್ಲೂ ಗುರಿ ಸಾಧಿಸಲಾಗಿದೆಯೇ?

ಇ) ಇಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):

ಅ) ವರ್ಷ	ಭೌತಿಕ ಗುರಿ	ಸಾಧನೆ	
96-97	131735	43423	
97-98	117603	33046	
98-99	124232	18497★	ಸೆಪ್ಟೆಂಬರ್ ಅಂತ್ಯದವರೆಗೆ

★ಹಿಂದಿನ ವರ್ಷಗಳಲ್ಲಿ ಬಾಕಿ ಉಳಿದ ಗುರಿ ಹೊಸ ವರ್ಷದ ಗುರಿಯೊಂದಿಗೆ ಸೇರಿರುತ್ತದೆ.

ಆ) ಮೇಲ್ಕಂಡ 3 ವರ್ಷಗಳಲ್ಲಿ ಪೂರ್ಣ ಗುರಿಯನ್ನು ಸಾಧಿಸಲಾಗಿಲ್ಲ.

ಇ) 1) ಹುಡ್ಕೋ ಸಂಸ್ಥೆಯಿಂದ ಪೂರ್ಣ ಸಾಲದ ಮಂಜೂರಾತಿಯಲ್ಲಿ ವಿಳಂಬವಾಗಿರುವುದು.

2) 1997-98ನೇ ಸಾಲಿನಲ್ಲಿ ಹೊಸದಾಗಿ ರಚಿಸಲಾದ ವಸತಿ ಸಮಿತಿಗಳು, ಫಲಾನುಭವಿಗಳನ್ನು ಆಯ್ಕೆ ಮಾಡುವುದರಲ್ಲಿ ವಿಳಂಬವಾಗಿರುವುದು.

3) 1998-99ನೇ ಸಾಲಿನಲ್ಲಿ ಅತಿವೃಷ್ಟಿಯಾಗಿರುವುದರಿಂದ.

ತಿಪಟೂರು ಕೃಷಿ ಮಾರುಕಟ್ಟೆ ಸಮಿತಿಯ ಅಭಿವೃದ್ಧಿ ಹಣ ಬಿಡುಗಡೆ.

2790: (3825)

ಶ್ರೀ ಬಿ.ನಂಜಾಮರಿ (ತಿಪಟೂರು): ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ತಿಪಟೂರು ತಾಲ್ಲೂಕು ಕೃಷಿ ಮಾರುಕಟ್ಟೆ ಸಮಿತಿಯಿಂದ ಪ್ರತಿ ವರ್ಷ 15.00 ಲಕ್ಷ ರೂಪಾಯಿಗಳನ್ನು ಗ್ರಾಮಾಂತರ ಪ್ರದೇಶದ ರಸ್ತೆಗಳ ಅಭಿವೃದ್ಧಿಗೋಸ್ಕರ ಸರ್ಕಾರದಿಂದ ಮಂಜೂರಾತಿ ನೀಡಿದ್ದು ಅದರಲ್ಲಿ ಎರಡು ವರ್ಷದ ಅಭಿವೃದ್ಧಿ ಹಣ ಬಿಡುಗಡೆ ಮಾಡಿದ್ದು ಉಳಿದ ಹಣವನ್ನು ಬಿಡುಗಡೆ ಮಾಡದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಹಣ ಬಿಡುಗಡೆ ಮಾಡಲಾಗುವುದು.

ಶ್ರೀ ಹೆಚ್.ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಬಂದಿದೆ

ಆ) 1995-96 ಮತ್ತು 96-97ನೇ ಸಾಲಿನಲ್ಲಿ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿಗಾಗಿ ಹಣ ಬಿಡುಗಡೆ ಮಾಡಲಾಗಿದೆ. ನಂತರದ ಸಾಲಿನಲ್ಲಿ ಗ್ರಾಮೀಣ ಸಂಪರ್ಕ ರಸ್ತೆ ಕಾಮಗಾರಿಗಳ ಅಭಿವೃದ್ಧಿ ಬಗ್ಗೆ ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ. 1997-98ನೇ ಸಾಲಿನ ಗ್ರಾಮೀಣ ಸಂಪರ್ಕ ರಸ್ತೆಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಅಭಿವೃದ್ಧಿಪಡಿಸುವುದೇ ಅಥವಾ ಈ ರಸ್ತೆಗಳನ್ನು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಕ್ಕೆ ಪುನಃ ವರ್ಗಾಯಿಸುವುದೇ ಎಂಬ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ. ತೀರ್ಮಾನ ತೆಗೆದುಕೊಂಡ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ತಿಪಟೂರು ಗ್ರಾಮಾಂತರ ಪ್ರದೇಶದಲ್ಲಿ ಭಾರಿ ಮಳೆಯಿಂದ ಹಾನಿಗೊಳಗಾದವರಿಗೆ ಪರಿಹಾರ ಕ್ರಮಗಳು.

2791: (3826)

ಶ್ರೀ ಬಿ.ನಂಜಾಮರಿ (ತಿಪಟೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಿಪಟೂರು ಗ್ರಾಮಾಂತರ ಪ್ರದೇಶದಲ್ಲಿ ಮಳೆಯ ಅತಿವೃಷ್ಟಿಯಿಂದ ಎಷ್ಟು ಮನೆಗಳು ಕುಸಿದಿದೆ, ಇದರಿಂದ ಮೃತಪಟ್ಟ ಜನರ, ಜಾನುವಾರುಗಳ ಸಂಖ್ಯೆ ಎಷ್ಟು?

ಆ) ಆ ಬಗ್ಗೆ ಇಲ್ಲಿಯವರೆಗೂ ಸರ್ಕಾರದಿಂದ ಕೈಗೊಂಡ ಪರಿಹಾರ ಕ್ರಮಗಳೇನು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ಇತ್ತೀಚಿನ ಭಾರೀ ಮಳೆಯಿಂದ ತಿಪಟೂರು ಗ್ರಾಮಾಂತರ ಪ್ರದೇಶದಲ್ಲಿ 116 ಮನೆಗಳು ಭಾಗಶಃ ಹಾನಿಗೊಳಗಾಗಿದ್ದು, ಒಂದು ಹಸು, ಮಾತ್ರ ಸತ್ತಿರುತ್ತದೆ. ಆದರೆ ಯಾವುದೇ ಮಾನವ ಜೀವ ಹಾನಿಯಾಗಿರುವ ಬಗ್ಗೆ ವರದಿಯಾಗಿರುವುದಿಲ್ಲ.

ಆ) ಮನೆ ಕುಸಿತದಿಂದ ಸಂತ್ರಸ್ಥರಾದ ಜನರಲ್ಲಿ ಒಟ್ಟು 91 ಜನರಿಗೆ ರೂ. 90,400-00ಗಳ ಪರಿಹಾರವನ್ನು ನೀಡಲಾಗಿದ್ದು, ಉಳಿದ 25 ಜನ ಸಂತ್ರಸ್ಥರಿಗೆ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಒಣಭೂಮಿ ಅಭಿವೃದ್ಧಿ ಮಂಡಳಿ.

2792: (3849)

ಶ್ರೀ ಪಿ.ಹೆಚ್.ಪೂಜಾರ್ (ಬಾಗಲಕೋಟೆ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಒಣಭೂಮಿ ಅಭಿವೃದ್ಧಿ ಮಂಡಳಿಯವರು ನಕಲಿ ಕಂಪನಿಗಳ ಹೆಸರಿನಲ್ಲಿ ನಕಲಿ ಬಿಲ್ಲುಗಳನ್ನು ಸೃಷ್ಟಿಸಿ ಕೋಟ್ಯಾಂತರ ರೂಪಾಯಿ ಹಣವನ್ನು ಲೂಟಿ ಮಾಡಿರುವ ಪ್ರಕರಣ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದಲ್ಲಿ ರಾಜ್ಯದಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಈ ಪ್ರಕರಣಗಳು ನಡೆದಿವೆ, ವಿವರ ನೀಡುವುದು.

ಇ) ಎಷ್ಟು ಪ್ರಮಾಣದ ಅವ್ಯವಹಾರ ನಡೆದಿದೆ ವಿವರ ನೀಡುವುದು.

ಈ) ತಪ್ಪಿತಸ್ಥರ ವಿರುದ್ಧ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):

ಅ) ಒಣ ಭೂಮಿ ಅಭಿವೃದ್ಧಿ ಮಂಡಳಿಯಲ್ಲಿ ಕಂಪನಿಗಳಲ್ಲಿ ವ್ಯವಹರಿಸುವಂಥ ಕಾರ್ಯಕ್ರಮಗಳೇನು ಇಲ್ಲದಿರುವುದರಿಂದ ಅಂತಹ ಯಾವ ಅವ್ಯವಹಾರಗಳು ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಉಡುಪಿ ಜಿಲ್ಲೆಯಲ್ಲಿ ಪ್ರಕೃತಿ ವಿಕೋಪದಿಂದ ಆದ ನಷ್ಟ ಮತ್ತು ಪರಿಹಾರ

2799: (3791)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಲ್ಲಿ ಪ್ರಕೃತಿ ವಿಕೋಪದಿಂದ ಆದ ಹಾನಿ ಎಷ್ಟು?

ಆ) ವಿತರಿಸಲಾದ ಪರಿಹಾರ ಎಷ್ಟು? (ಪ್ರಕರಣವಾರು ವಿವರಣೆ ತಿಳಿಸುವುದು)

ಇ) ಇನ್ನೂ ಕೊಡಬೇಕಾದ ಪರಿಹಾರ ಎಷ್ಟು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ಉಡುಪಿ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಲ್ಲಿ ಪ್ರಕೃತಿ ವಿಕೋಪದಿಂದ ಸುಮಾರು ರೂ. 1432.29 ಲಕ್ಷಗಳ ಹಾನಿ ಸಂಭವಿಸಿರುವುದಾಗಿ ಅಂದಾಜಿಸಲಾಗಿದೆ.

ಆ) ರೂ. 75.87 ಲಕ್ಷಗಳನ್ನು ಈ ಬಾಬ್ತಿಗಾಗಿ ವಿತರಿಸಿದ್ದು, ವಿವರ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

		ಸಂಖ್ಯೆ	ಮೊತ್ತ
1)	ಮಾನವ ಜೀವ ಹಾನಿ	16	14.00
2)	ಜಾನುವಾರ ಹಾನಿ	10	0.23
3)	ನೀರಾವರಿ ಬಾವಿ	1	0.01
4)	ಪಂಪುಸೆಟ್ ಮತ್ತು ಪಂಪ್‌ಶೆಡ್ ಹಾನಿ	1	0.03
5)	ವಾಸದ ಮನೆ ಭಾಗಶಃ ಹಾನಿ	295	3.35
6)	ಸಂಪೂರ್ಣ ಹಾನಿ	27	1.01
7)	ಬೆಂಕಿಯಿಂದ ವಾಸದ ಮನೆ ಪೂರ್ಣ ಹಾನಿ	27	1.57
8)	ಭಾಗಶಃ ಹಾನಿ	8	0.23
9)	ಜಾನುವಾರು ಕೊಟ್ಟಿಗೆ ಮತ್ತು ಇತರೆ ಹಾನಿ	57	1.06
10)	ತೋಟಗಾರಿಕೆ ಬೆಳೆ ಹಾನಿ	6	0.05
11)	ಕೃಷಿ ಬೆಳೆ ಹಾನಿ	-	13.00

12) ಸಾರ್ವಜನಿಕ ಕಟ್ಟಡ ಹಾಗೂ ರಸ್ತೆ ದುರಸ್ತಿ ಬಗ್ಗೆ	-	40.83
ಒಟ್ಟು	447	75.87

ಇ) ರೂ.87.63 ಲಕ್ಷ ಪರಿಹಾರ ನೀಡಲು ಬಾಕಿ ಇದ್ದು, ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಜಯನಗರ ಬಸ್ ನಿಲ್ದಾಣದಲ್ಲಿ ಬಹುಮಹಡಿ ಕಟ್ಟಡ ನಿರ್ಮಾಣ.

2802: (3750)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಯನಗರ ಬಸ್ ನಿಲ್ದಾಣದ ಕಟ್ಟಡ ಹಳೆಯದಾಗಿದ್ದು, ಹೆಚ್ಚಿನ ಸ್ಥಳಾವಕಾಶವಿಲ್ಲದೆ ಇರುವುದರಿಂದ ಇದನ್ನು ಒಡೆದು ಹೊಸದಾಗಿ ಬಹುಮಹಡಿ ಕಟ್ಟಡ ನಿರ್ಮಿಸಲು ಸರ್ಕಾರ ಆಲೋಚಿಸಿದೆಯೇ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಇಲ್ಲಾ

ಗುಳ್ಳೇದ ಗುಡ್ಡ ಕ್ಷೇತ್ರದಲ್ಲಿ ಅತಿವೃಷ್ಟಿಯಿಂದ ಆಗಿರುವ ಬೆಳೆಹಾನಿ

2806: (3754)

ಶ್ರೀ ರಾಜಶೇಖರ ವಿ.ಶೀಲವಂತ (ಗುಳ್ಳೇದಗುಡ್ಡ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳ್ಳೆದ ಗುಡ್ಡ ಮತಕ್ಷೇತ್ರದಲ್ಲಿ ಕಳೆದ ಮೂರು ತಿಂಗಳುಗಳಲ್ಲಿ ಅತಿವೃಷ್ಟಿಯಿಂದ ಆಗಿರುವ ಬೆಳೆ ಹಾನಿ ಎಷ್ಟು?

ಆ) ಬೆಳೆಯನ್ನು ಕಳೆದುಕೊಂಡ ರೈತನ ಕುಟುಂಬಕ್ಕೆ ಪರಿಹಾರ ಧನ ನೀಡುವ ಉದ್ದೇಶ ಸರ್ಕಾರಕ್ಕಿದಯೇ?

ಇ) ಹಾಗಿದ್ದಲ್ಲಿ ಯಾವ ಆಧಾರದ ಮೇಲೆ ಎಷ್ಟು ಹಣ ನೀಡಲಾಗುತ್ತಿದೆ?

ಈ) ಹಾಗಿಲ್ಲದಿದ್ದಲ್ಲಿ ಬೆಳೆಹಾನಿಯಿಂದ ಕಂಗಾಲಾದ ರೈತನ ಕುಟುಂಬವನ್ನು ಸರ್ಕಾರ ಯಾವ ರೀತಿ ಸಂತೈಸುತ್ತದೆ.

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ಅತಿವೃಷ್ಟಿಯಿಂದ ಗುಳೇದ ಗುಡ್ಡ ಮತಕ್ಷೇತ್ರದಲ್ಲಿ ರೂ.224.54 ಲಕ್ಷಗಳ ಮೌಲ್ಯದ ಕೃಷಿ ಬೆಳೆ ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ.

ಆ, ಇ ಮತ್ತು ಈ) ನಿಯಮಾವಳಿಗಳ ಪ್ರಕಾರ ರೂ.18,000 ಕ್ಕಿಂತ ವಾರ್ಷಿಕ ವರಮಾನ ಕಡಿಮೆ ಇದ್ದ ರೈತನ ಬೆಳೆ ಹಾನಿಗೆ ಪ್ರತಿ ಹೆಕ್ಟೇರ್‌ಗೆ ರೂ 500-00 ರಂತೆ ಗರಿಷ್ಠ ರೂ 2000 ಗಳ ಪರಿಹಾರ ನೀಡಲು ಅವಕಾಶವಿರುತ್ತದೆ.

ಗುಳ್ಳೇದಗುಡ್ಡ ಬಸ್ ನಿಲ್ದಾಣದ ಡಾಂಬರೀಕರಣ

2807: (3755)

ಶ್ರೀ ರಾಜಶೇಖರ್ ವಿ.ಶೀಲವಂತ (ಗುಳ್ಳೇದಗುಡ್ಡ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡ ಬಸ್ ನಿಲ್ದಾಣದ ಆವರಣವನ್ನು ಡಾಂಬರೀಕರಣಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಅದನ್ನು ಯಾವಾಗ ಮಂಜೂರ್ಮಾಡಲಾಗುವುದು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಹೌದು

ಆ) ಡಾಂಬರೀಕರಣ ಕೆಲಸ ನಿರ್ವಹಿಸಲು ರೂ.4,80,000-00ಗಳ ಅಂದಾಜು ಪಟ್ಟಿ ಮಂಜೂರಾತಿಯಾಗಿದ್ದು ಸದರೀ ಕೆಲಸಕ್ಕಾಗಿ ದಿನಾಂಕ: 15-10-1998ರಂದು ಟೆಂಡರ್ ಕರೆಯಲಾಗಿದೆ.

ಗುಳೇದಗುಡ್ಡ ಕ್ಷೇತ್ರದ ದೇವಸ್ಥಾನಗಳಿಗೆ ಅನುದಾನ ಬಿಡುಗಡೆ

2809: (3756)

ಶ್ರೀ ರಾಜಶೇಖರ ವಿ.ಶೀಲವಂತ (ಗುಳ್ಳೇದಗುಡ್ಡ): ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಗುಳ್ಳೇದಗುಡ್ಡ ನಗರದ ದೇವಾಂಗ ಸಮಾಜ ದತ್ತಿಗೆ ಮಂಗಲ ಭವನ ನಿರ್ಮಿಸಲು ಹಾಗೂ ಮತ ಕ್ಷೇತ್ರದ ಅಮೀನಗಡ ಗ್ರಾಮ ಶ್ರೀ ಬಸವೇಶ್ವರ ಟ್ರಸ್ಟ್ ಕಮಿಟಿಗೆ ಅನುದಾನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

2) ಹಾಗಿದ್ದಲ್ಲಿ ಅದನ್ನು ಯಾವಾಗ ಮಂಜೂರ್ಮಾಡುವುದು?

ಶ್ರೀ ಬಿ.ಮುನಿಯಪ್ಪಮುದ್ದಪ್ಪ (ಮುಜರಾಯಿ ಸಚಿವರು):

1) ಗುಳ್ಳೇದಗುಡ್ಡ ನಗರದ ದೇವಾಂಗ ಸಮಾಜ ದತ್ತಿಗೆ ಮಂಗಲ ಭವನ ನಿರ್ಮಿಸುವ ಬಗ್ಗೆ ಯಾವ ಪ್ರಸ್ತಾವನೆ ಇರುವುದಿಲ್ಲ. ಶ್ರೀ ಬಸವೇಶ್ವರ ದೇವಾಲಯದ ಟ್ರಸ್ಟ್ ಕಮಿಟಿ ದೇವಾಲಯದ ಕಲ್ಯಾಣ ಮಂಟಪ ಕಾಮಗಾರಿಗೆ ರೂ.98,678-00ಗಳ ಮಂಜೂರಾತಿಗೆ ಪ್ರಸ್ತಾವನೆ ಸರ್ಕಾರದ ಮುಂದಿದೆ.

2) 1998-99ನೇ ಸಾಲಿನ ಅನುದಾನದಲ್ಲಿ ಪರಿಗಣಿಸಲಾಗುವುದು.

ರಾಜ್ಯದಲ್ಲಿ ಭಾರಿ ಮಳೆಯಿಂದಾಗಿ ಉಂಟಾಗಿರುವ ನಷ್ಟ

2811: (3821)

ಶ್ರೀ ಎಸ್.ರಾಜೇಂದ್ರನ್ (ಕೆ.ಜಿ.ಎಫ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿನ ಭಾರಿ ಮಳೆಯಿಂದ ಒಟ್ಟಾರೆ ಆಗಿರುವ ಜೀವ ಹಾನಿ ಎಷ್ಟು?

ಆ) ಬೆಳೆ ಹಾಗೂ ಆಸ್ತಿಗೆ ಸಂಬಂಧಿಸಿದಂತೆ ಆಗಿರುವ ಒಟ್ಟು ಹಾನಿಯೆಷ್ಟು?

ಇ) ಪ್ರತಿ ಜಿಲ್ಲೆಗೆ ಬಿಡುಗಡೆ ಮಾಡಿರುವ ಒಟ್ಟು ಅನುದಾನವೆಷ್ಟು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ರಾಜ್ಯದಲ್ಲಿ ಇತ್ತೀಚಿನ ಅತಿವೃಷ್ಟಿಯಿಂದ 310 ಮಂದಿ ಮೃತಪಟ್ಟಿರುತ್ತಾರೆ.

ಆ) ಕೃಷಿ ಬೆಳೆಯೂ ಒಳಗೊಂಡಂತೆ ಖಾಸಗಿ ಆಸ್ತಿಗಳು ಮತ್ತು ಸಾರ್ವಜನಿಕ

ಆಸ್ತಿಗಳಿಗಾಗಿರುವ ಒಟ್ಟು ಹಾನಿಯ ಮೌಲ್ಯ ರೂ.797.00 ಕೋಟಿಗಳು.

ಇ) ಪ್ರವಾಹ ಪರಿಹಾರಕ್ಕಾಗಿ ಜಿಲ್ಲಾವಾರು ಅನುದಾನ ಬಿಡುಗಡೆಯ ವಿವರ ಹೀಗಿದೆ -

(ರೂ.ಲಕ್ಷಗಳಲ್ಲಿ)

ಜಿಲ್ಲೆಯ ಹೆಸರು	ಮೊಬಲಗು
ಬೆಂಗಳೂರು (ನ)	92.00
ಬೆಂಗಳೂರು (ಗ್ರಾ)	60.00
ಕೋಲಾರ	75.00
ತುಮಕೂರು	85.00
ಚಿತ್ರದುರ್ಗ	110.00
ದಾವಣಗೆರೆ	60.00
ಶಿವಮೊಗ್ಗ	123.00
ಮೈಸೂರು	50.00
ಚಾಮರಾಜನಗರ	78.00
ಮಂಡ್ಯ	215.00
ಚಿಕ್ಕಮಗಳೂರು	60.00
ಹಾಸನ	60.00
ಕೊಡಗು	150.00
ದಕ್ಷಿಣ ಕನ್ನಡ	254.50
ಉಡುಪಿ	155.50
ಗುಲ್ಬರ್ಗಾ	382.00

ಬೀದರ್	233.00
ರಾಯಚೂರು	319.00
ಕೊಪ್ಪಳ	171.00
ಬಳ್ಳಾರಿ	200.00
ಬೆಳಗಾಂ	100.00
ಬಿಜಾಪುರ	430.00
ಬಾಗಲಕೋಟೆ	110.00
ಧಾರವಾಡ	110.00
ಗದಗ	119.00
ಹಾವೇರಿ	60.00
ಉತ್ತರ ಕನ್ನಡ	136.00
ಸಣ್ಣ ನೀರಾವರಿ ಇಲಾಖೆ	400.00
ಲೋಕೋಪಯೋಗಿ ಇಲಾಖೆ	400.00
ಆರೋಗ್ಯ ಇಲಾಖೆ	400.00
ಒಟ್ಟು	4498.00

ಅಂತರ್ ರಾಜ್ಯ ಬಸ್ ಪರವಾನಗಿ

2812: (3823)

ಶ್ರೀ ಎಸ್.ರಾಜೇಂದ್ರನ್ (ಕೆ.ಜಿ.ಎಫ್): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಅಂತರ ರಾಜ್ಯ ಬಸ್ ಪರವಾನಗಿಯನ್ನು

ನೀಡಲಾಗಿದೆ;

ಅ) ಅವುಗಳಲ್ಲಿ ಎಷ್ಟು ಪರವಾನಗಿಗಳನ್ನು ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡ ಮತ್ತು ಅಲ್ಪ ಸಂಖ್ಯಾತರುಗಳಿಗೆ ನೀಡಲಾಗಿದೆ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ಈ ಕೆಳಗೆ ಸೂಚಿಸಿರುವಂತೆ ಅಂತರ ರಾಜ್ಯ ಬಸ್ ಪರವಾನಗಿಗಳನ್ನು ನೀಡಲಾಗಿದೆ. (ಖಾಸಗೀ ಮತ್ತು ಸರ್ಕಾರೀ ಸ್ವಾಮ್ಯ ಸಂಸ್ಥೆಗಳು)

1995-96	139
1996-97	85
1997-98	80

ಅ) ಅಂತರರಾಜ್ಯ ಬಸ್ ಪರ್ಮಿಟ್ ಮಂಜೂರಾತಿಗಾಗಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳಿಗೆ ಸೇರಿದವರು ಯಾರು ಅರ್ಜಿ ಸಲ್ಲಿಸಿರುವುದಿಲ್ಲ.

ಭಟ್ಕಳ ಹಾಗೂ ಹೊನ್ನಾವರ ತಾಲ್ಲೂಕುಗಳ ಜಮೀನು ಪಟ್ಟಾ.

2814: (3743)

ಶ್ರೀ ಶಿವಾನಂದ ನಾಯ್ಕ್ (ಭಟ್ಕಳ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ಕಂದಾಯ ವಿಭಾಗದಲ್ಲಿ (ಭಟ್ಕಳ ಹಾಗೂ ಹೊನ್ನಾವರ ತಾಲ್ಲೂಕು) ಕಳೆದ ಐದು ವರ್ಷಗಳಲ್ಲಿ ಹೊಸದಾಗಿ ಮಂಜೂರು ಮಾಡಲಾಗಿರುವ ಜಮೀನು ಪಟ್ಟಾ ಪ್ರಕರಣಗಳೆಷ್ಟು; (ಸರ್ವೆ ನಂ. ಹಾಗೂ ಹೆಸರು, ಗಾತ್ರ ಸಹಿತ ವಿವರ ನೀಡುವುದು)

ಆ) ಈ ರೀತಿ ಮಂಜೂರು ಮಾಡಲಾಗಿರುವ ಪ್ರಕರಣಗಳಲ್ಲಿ ಕಂದಾಯ ಜಮೀನು, ಅರಣ್ಯ ಜಮೀನು (ಟ್ರಿಬ್ಯೂನಲ್, ಅತಿಕ್ರಮಣ ಸಕ್ರಮಣ ಸಹಿತ) ಎಷ್ಟು?

ಇ) ಈ ರೀತಿಯ ಮಂಜೂರಾದ ಪ್ರಕರಣಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಸರಿಯಾದ ಕ್ರಮಗಳನ್ನು ಕೈಗೊಳ್ಳಲಾಗಿದೆ ಹಾಗೂ ಎಷ್ಟು ಮೇಲಾಧಿಕಾರಿಗಳನ್ನು ತನಿಖೆಗೆ ಒಳಪಡಿಸಲಾಗಿದೆ;

ಈ) ಹೆಚ್ಚುವರಿ ಜಾಗವೆಂದು ಮಂಜೂರು ಮಾಡಿರುವ ಪ್ರಕರಣಗಳೆಷ್ಟು; ಇದರಿಂದ ಪರಿಸರದ ಮೇಲೇನಾದರೂ ಪ್ರತಿಕೂಲ ಪರಿಣಾಮ ಉಂಟಾಗಿದೆಯೇ?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ)

ಅ.ನಂ		ಹೊನ್ನಾವರ ತಾಲ್ಲೂಕು		ಭಟ್ಕಳ ತಾ:		ಒಟ್ಟು ಕ್ಷೇತ್ರ	
		ಸಂಖ್ಯೆ	ಕ್ಷೇತ್ರ	ಸಂ.	ಕ್ಷೇತ್ರ	ಸಂ.	ಕ್ಷೇತ್ರ
1.	ಸಮುಹ ನಂ. 50	58	108-00	39	44-00	97	147
2.	ಹಂಗಾಮಿ ಲಾಗಣ ಖಾಯಂ ಗೊಳಿಸಿದ್ದು (ಅರಣ್ಯ ಜಮೀನು)	650	1306-00	368	890-00	988	2196-00
3.	ಅರಣ್ಯ ಅತಿಕ್ರಮಣ ಸಕ್ರಮೀಕರಣ	165	186-00	79	27-00	243	213-00
4.	ಮನೆ ನಿವೇಶನ	146	14-00	-	-	146	14-00
		989	1609-00	485	961-00	1474	2570-00

ಆ)

ಅ.ನಂ ಪ್ರವರ್ಗ	ಹೊನ್ನಾವರ ತಾಲ್ಲೂಕು ಕ್ಷೇತ್ರ ಎಕರೆ	ಭಟ್ಕಳ ತಾಲ್ಲೂಕು ಕ್ಷೇತ್ರ ಎಕರೆ	ಒಟ್ಟು ಕ್ಷೇತ್ರ ಎಕರೆ
ಕಂದಾಯ ಜಮೀನು			
1. ಸ.ನಂ. 50ರ ಅರ್ಜಿಗಳು	103-00	44-00	147-00
2. ಮನೆ ನಿವೇಶನ	14-00	-	14-00
	117-00	44-00	161-00
ಅರಣ್ಯ ಜಮೀನು			
1. ಹಂಗಾಮಿ ಲಾಗಣ ಖಾಯಂ ಗೊಳಿಸಿದ್ದು	1306-00	890-00	2196-00
2. ಅತಿಕ್ರಮಣ	186-00	27-00	218-00
ಸಕ್ರಮ	1492-00	917-00	2400-00
ಒಟ್ಟು	1609-00	961-00	2570-00

ಭೂ ನ್ಯಾಯ ಮಂಡಳಿಗಳಿಂದ ಭೂಮಿ ಮಂಜೂರಾಗಿದ್ದು ಇರುವುದಿಲ್ಲ. ಆದರೆ ಅಧಿಭೋಗದಾರಿಕೆಯ ಹಕ್ಕನ್ನು ಮಾತ್ರ ಅಂಗೀಕರಿಸಿದ್ದು ಇರುತ್ತದೆ.

ಇ) ಇಂತಹ ಪ್ರಕರಣಗಳಿರುವುದಿಲ್ಲ.

ಈ) ಹೊನ್ನಾವರ ಮತ್ತು ಭಟ್ಕಳ ತಾಲ್ಲೂಕುಗಳಲ್ಲಿ ಭೂ ಸುಧಾರಣೆ ಕಾಯ್ದೆಯನ್ವಯ ಹೆಚ್ಚುವರಿ ಭೂಮಿಯನ್ನು ಕಂಡು ಹಿಡಿದ ಪ್ರಕರಣಗಳಿರುವುದಿಲ್ಲ. ಇದರಿಂದಾಗಿ ಪರಿಸರದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಪ್ರಶ್ನೆ ಉದ್ಭವಿಸುವುದಿಲ್ಲ.

ಭಟ್ಕಳ ತಾಲ್ಲೂಕು ಹಾಗೂ ಹೊನ್ನಾವರ ತಾಲ್ಲೂಕಿನ ಗುಂಡಬಾಳ ನೆರೆಹಾವಳಿ.

2815: (2988)

ಶ್ರೀ ಶಿವಾನಂದ ನಾಯ್ಕ್ (ಭಟ್ಕಳ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ತಾಲ್ಲೂಕು ಹಾಗೂ ಹೊನ್ನಾವರ ತಾಲ್ಲೂಕಿನ ಗುಂಡಬಾಳ ನೆರೆ ಹಾವಳಿಯಿಂದ ಆದ ಒಟ್ಟು ನಷ್ಟದ ಪ್ರಮಾಣವೆಷ್ಟು?

ಆ) ಈ ನೆರೆ ಹಾವಳಿಗೆ ಭಾಗಶಃ ಹಾಗೂ ಪೂರ್ತಿ ಹಾನಿಯಾದ ಮನೆಗಳ ಸಂಖ್ಯೆ ಎಷ್ಟು?

ಇ) ಹಾನಿಗೊಳಗಾದವರಿಗೆ ನೀಡಲಾಗಿರುವ ಪರಿಹಾರದ ಒಟ್ಟು ಮೊತ್ತವೆಷ್ಟು? ಹಾನಿಗೊಳಗಾದವರಿಗೆ ಇನ್ನೂ ನೀಡಬೇಕಾಗಿರುವ ಪರಿಹಾರದ ಬಾಕಿ ಮೊತ್ತವೆಷ್ಟು?

ಈ) ಈ ಪರಿಹಾರವನ್ನು ಪೂರ್ಣ ಪ್ರಮಾಣದಲ್ಲಿ ನೀಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು?

ಉ) ಹೆಚ್ಚುವರಿ ಮನೆಗಳನ್ನು ಹೊನ್ನಾವರ ಹಾಗೂ ಭಟ್ಕಳ ತಾಲ್ಲೂಕು ನೆರೆ ಪೀಡಿತರಿಗೆ ಮಂಜೂರು ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ನಷ್ಟದ ವಿವರ ಹೀಗಿದೆ - (ರೂ.ಲಕ್ಷಗಳಲ್ಲಿ)

ಭಟ್ಕಳ ತಾಲ್ಲೂಕು	-	282.21
ಹೊನ್ನಾವರ ತಾಲ್ಲೂಕು	-	70.22
ಒಟ್ಟು	-	352.43

ಆ) ಭಾಗಶಹ ಬಿದ್ದ ಮನೆಗಳು - 741

ಪೂರ್ತಿ ಬಿದ್ದ ಮನೆಗಳು - 65

ಇ) ಹಾನಿಗೊಳಗಾದವರಿಗೆ ರೂ.21.50 ಲಕ್ಷಗಳನ್ನು ಪರಿಹಾರವಾಗಿ ನೀಡಲಾಗಿದೆ. ಇನ್ನು ಯಾವುದೇ ಪರಿಹಾರ ನೀಡುವ ಪ್ರಕರಣಗಳು ಬಾಕಿ ಉಳಿದಿರುವುದಿಲ್ಲ.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಪ್ರಸಕ್ತ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ವಸತಿ ಯೋಜನೆಗಳಲ್ಲಿ ಮನೆ ನಿರ್ಮಿಸಿ ಕೊಡುವ ಬಗ್ಗೆ ಪರಿಶೀಲಿಸಲು ತಿಳಿಸಲಾಗುವುದು.

Amendment to A.P.M.C. Act

2818: (3723)

Sri D.V.Sadananda Gowda (Puthuru): Will the Minister of State for Agricultural Marketing be pleased to State

a) Whether it has come to the notice of the Government that the farmers community are facing difficulties by inclusion of section 77 of in the A.P.M.C. Act.

b) If so, what actions have been taken in this regard;

c) Is there any arrangments in A.P.M.C. to provide Produce Loans, if so the No.of Persons availed such loans (furnish details)

d) The No. of Agriculturists which have availed such loans and the amount paid them in Dakashina Kannada District;

Sri H.Nagappa (MINSTER FOR STATE FOR

AGRICULTURAL MARKETING):

a) Yes Represtation have been received by the Government in this behalf.

b) Before giving effect to this amendment, these represtations will be examined in detail.

c) Yes, details are furnished in the Annexure.

d) None of the agriculturist in Dakshina Kannada district have availed this facility.

ಅನುಬಂಧ

ವಿಭಾಗೀಯ ಮಾರುಕಟ್ಟೆ ಸಮಿತಿಗಳಲ್ಲಿ ಅಡಮಾನ ಸಾಲ ಯೋಜನೆಯಡಿ ಸಾಲ ನೀಡಿರುವ ಸಂಕ್ಷಿಪ್ತ ವಿವರಗಳು

ಕ್ರಮ ಸಂಖ್ಯೆ	ವಿಭಾಗದ ಹೆಸರು	1995-96		1996-97		1997-98		1998-99	
		ರೈತರ ಸಂಖ್ಯೆ	ಮೊತ್ತ	ರೈತರ ಸಂಖ್ಯೆ	ಮೊತ್ತ	ರೈತರ ಸಂಖ್ಯೆ	ಮೊತ್ತ	ರೈತರ ಸಂಖ್ಯೆ	ಮೊತ್ತ
1.	ಬೆಂಗಳೂರು ವಿಭಾಗ	15	373000-00	28	452250-00	15	265800-00	01	10000-00
2.	ಮೈಸೂರು ವಿಭಾಗ	11	216660-00	28	244385-00	29	568150-00	-	-
3.	ಬೆಳಗಾಂ	34	374400-00	22	487350-00	15	365500-00	04	32600-00
4.	ಗುಲ್ಬರ್ಗಾ	128	1240569-00	88	3619755-00	108	5060030-00	02	92000-00
	ಒಟ್ಟು	188	2204629-00	166	4803740-00	167	6260480-00	07	134600-00

ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ನಾಡಕಛೇರಿ ಉಪ ತಹಶೀಲ್ದಾರರ ಹುದ್ದೆ ನೇಮಕಾತಿ

2819 (3724)

ಶ್ರೀ ಡಿ.ವಿ.ಸದಾನಂದ ಗೌಡ, (ಪುತ್ತೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಪುತ್ತೂರು ತಾಲ್ಲೂಕಿನಲ್ಲಿ ಕಳೆದ 8 ತಿಂಗಳಿಂದ ಉಪ್ಪಿನಂಗಡಿ ನಾಡಕಛೇರಿಯಲ್ಲಿ ಉಪ ತಹಸೀಲ್ದಾರರ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಉಪ ತಹಶೀಲ್ದಾರ್‌ರ ಹುದ್ದೆಯನ್ನು ಯಾವಾಗ ತುಂಬಲಾಗುವುದು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

1) ಬಂದಿದೆ.

2) ಆದಷ್ಟು ಶೀಘ್ರವಾಗಿ ತುಂಬಲಾಗುವುದು

ಕಂದಾಯ ಇಲಾಖೆಯ ದಿನಗೂಲಿ ಬೆರಳಚ್ಚುಗಾರರು.

2820: (3725)

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1985ರಿಂದ 1987ರವರೆಗಿನ ಅವಧಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ನೇಮಕಾತಿ ಮಾಡಲಾಗಿರುವ ದಿನಗೂಲಿ ಬೆರಳಚ್ಚುಗಾರರ ಸಂಖ್ಯೆ ಎಷ್ಟು;

ಆ) ಅವರುಗಳನ್ನು ಖಾಯಂಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) 19.

ಆ) 1-7-84ರ ನಂತರ ನೇಮಕವಾದ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಲು ನಿಯಮಗಳಲ್ಲಿ ಅಸ್ಪದ ಇಲ್ಲ.

ಕೃಷಿ ಇಲಾಖೆಯಲ್ಲಿ ಮರು ವರ್ಗಾವಣೆ

2822 (3777)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಇಲಾಖೆಯಲ್ಲಿ 1997-98ನೇ ಹಾಗೂ 1998-99ನೇ ಅಕ್ಟೋಬರ್ 15ರ ಒಳಗೆ ಎಷ್ಟು ಮಂದಿ ಅಧಿಕಾರಿಗಳನ್ನು (ವಿವಿಧ ಹುದ್ದೆಯಲ್ಲಿ) ವರ್ಗಾಯಿಸಲಾಗಿದೆ.

ಆ) ವರ್ಗಾವಣೆ ಆದೇಶ ನೀಡಿದ ಬಳಿಕ ಸ್ಥಳ ಬದಲಾಯಿಸಿ ಮರು ವರ್ಗಾಯಿಸಿದ ಪ್ರಕರಣಗಳು ಎಷ್ಟು?

ಇ) ವರ್ಗಾವಣೆ ಆದೇಶದ ಬಳಿಕ ಈ ಆದೇಶಗಳನ್ನು ರದ್ದುಗೊಳಿಸಿ ಮತ್ತೆ ಅದೇ ಸ್ಥಳದಲ್ಲಿ ಮುಂದುವರಿಸಿದ ಪ್ರಕರಣಗಳು ಎಷ್ಟು? ಇವುಗಳಿಗೆ ಕಾರಣಗಳೇನು? (ವಿವರ ನೀಡುವುದು)

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):

ಅ) 1997-98ನೇ ಸಾಲಿನಲ್ಲಿ ಒಟ್ಟು 372

1998-99ನೇ ಸಾಲಿನಲ್ಲಿ ಒಟ್ಟು 1509 (ಹುದ್ದೆವಾರು ಪಟ್ಟಿ ಅನುಬಂಧ-1ನ್ನು ಲಗತ್ತಿಸಿದೆ)

ಆ) 1997-98 ಇಲ್ಲ

1998-99 206

ಇ) 1997-98 ಇಲ್ಲ

1998-99 13

ಕಾರಣಗಳನ್ನು (ಅನುಬಂಧ-2ರಲ್ಲಿ) ವಿವರಿಸಿದೆ.

ಅನುಬಂದ- 1

ವಿಧಾನ ಸಭಾ ಪ್ರಶ್ನೆ 3777 ಶ್ರೀ ಯು. ಆರ್. ಸಭಾಪತಿ ಶಾಸಕರು, ಇವರ ಪ್ರಶ್ನೆಗಳಿಗೆ ಉತ್ತರ

ಕ್ರಮ ವಿವರ ಸಂಖ್ಯೆ	ಹುದ್ದೆಯ ಹೆಸರು	1997-98ನೇ ಸಾಲಿನ ವಿವರ			1998-99ನೇ ಸಾಲಿನ		
		ಅ	ಆ	ಇ	ಅ	ಆ	ಇ
1.	ಅಪರ ಕೃಷಿ						
	ನಿರ್ದೇಶಕರು	4	-	-	-	-	-
2.	ಜಂಟಿ ಕೃಷಿ						
	ನಿರ್ದೇಶಕರು	-	-	-	15	2	2
3.	ಉಪ ಕೃಷಿ						
	ನಿರ್ದೇಶಕರು	3	-	-	21	3	1
4.	ಸಹಾಯಕ ಕೃಷಿ						
	ನಿರ್ದೇಶಕರು	85	-	-	174	25	7
5.	ಕೃಷಿ ಅಧಿಕಾರಿ	80	-	-	169	18	2
6.	ಸಹಾಯಕ ಕೃಷಿ						
	ಅಧಿಕಾರಿ	190	-	-	1061	148	1
7	ಸಹಾಯಕ ಕೃಷಿ						
	ಅಧಿಕಾರಿ (ರ್ಯಿಮ)	10	-	-	54	10	-
8.	ಆಡಳಿತ ಅಧಿಕಾರಿ	-	-	-	2	-	-
9.	ಆಡಳಿತ ಸಹಾಯಕರು	-	-	-	13	-	-
	ಒಟ್ಟು	372	-	-	1509	206	13

ಅ: ಕೃಷಿ ಇಲಾಖೆಯಲ್ಲಿ 1997-98 ಹಾಗೂ 19998-99 ಅಕ್ಟೋಬರ್ 15ರ ಒಳಗೆ ವರ್ಗಾಯಿಸಲಾಗಿರುವ ಅಧಿಕಾರಿಗಳು.

ಆ: ವರ್ಗಾವಣೆ ಆದೇಶ ನೀಡಿದ ಬಳಿಕ ಸ್ಥಳ ಬದಲಾಯಿಸಿ ಮರು ವರ್ಗಾಯಿಸಿದ ಪ್ರಕರಣಗಳು.

ಇ: ವರ್ಗಾವಣೆ ಆದೇಶದ ಬಳಿಕ ಆದೇಶಗಳನ್ನು ರದ್ದುಗೊಳಿಸಿ ಮತ್ತೆ ಅದೇ ಸ್ಥಳದಲ್ಲಿ ಮುಂದುವರಿಸಿದ ಪ್ರಕರಣಗಳು.

ಪ್ರಶ್ನೆ: (ಇ): 1998-99ನೇ ಸಾಲಿನಲ್ಲಿ 9 ಮಂದಿ ಅಧಿಕಾರಿಗಳನ್ನು ಆಡಳಿತಾತ್ಮಕ ಕಾರಣದಿಂದ ಅದೇ ಸ್ಥಳದಲ್ಲಿ ಮುಂದುವರೆಸಲಾಗಿದೆ.

ಒಬ್ಬರು ಸಹಾಯಕ ಕೃಷಿ ನಿರ್ದೇಶಕರವರ ಸೇವೆಯು ಅಗತ್ಯವಿರುವುದಾಗಿ ನಿರ್ದೇಶಕರು, ಪ್ರದೇಶಾಭಿವೃದ್ಧಿ ಕಾರ್ಯಕ್ರಮ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯವರ ಟಿಪ್ಪಣಿ ಮೇರೆಗೆ ಸರ್ಕಾರವು ಸದ್ಯದ ಕಛೇರಿಯಲ್ಲೇ ಮುಂದುವರೆಸಿರುತ್ತದೆ.

ಒಬ್ಬರು ಕೃಷಿ ಅಧಿಕಾರಿ ರವರು ರಾಜ್ಯ ಅಲ್ಪಸಂಖ್ಯಾತರ ಆಯೋಗದಲ್ಲಿ ಕಾರ್ಯನಿರ್ವಹಿಸುತ್ತಿದ್ದು ವರ್ಗಾಯಿಸಲಾದ ಸ್ಥಳಕ್ಕೆ ಹಾಜರಾಗದ ಕಾರಣ ಇವರನ್ನು ಅಮಾನತ್ತಿನಲ್ಲಿಡಲಾಗಿತ್ತು, ಅಧ್ಯಕ್ಷರು, ಅಲ್ಪಸಂಖ್ಯಾತರ ಆಯೋಗ ಇವರ ಕೋರಿಕೆಯಂತೆ ವಿಚಾರಣೆ ಕಾಯ್ದಿರಿಸಿ ಅಮಾನತ್ತು ತೆರವುಗೊಳಿಸಿ ಅವರನ್ನು ಸದ್ಯದ ಕಛೇರಿಯಲ್ಲಿ ಮುಂದುವರೆಸಿದೆ.

ಒಬ್ಬ ಸಹಾಯಕ ಕೃಷಿ ಅಧಿಕಾರಿ ರವರು ವಯೋನಿವೃತ್ತಿ (31-1-99) ಹತ್ತಿರದಲ್ಲಿದ್ದು ವರ್ಗಾಯಿಸಲಾದ ಪ್ರಯುಕ್ತ ನ್ಯಾಯಾಲಯದ ಮೊರೆ ಹೊಕ್ಕು ವರ್ಗಾವಣೆ ಆದೇಶಕ್ಕೆ ತಡೆಯಾಜ್ಞೆ ತಂದಿದ್ದರೆಂದು ಅದೇ ಸ್ಥಳದಲ್ಲಿ ಮುಂದುವರೆಸಲಾಗಿದೆ. ರಿಟ್ ಪಿಟಿಷನ್ ನಂ: 21979: 98

ಒಬ್ಬ ಕೃಷಿ ಅಧಿಕಾರಿ, ಅವರ ಸೇವೆಯನ್ನು ರಾಜ್ಯ ಜಲಾನಯನ ನಿರ್ದೇಶನಾಲಯದಲ್ಲಿ ಅಗತ್ಯವಿದೆ ಎಂದು ಪ್ರಧಾನ ಕಾರ್ಯದರ್ಶಿಯವರು ಕೋರಿದ ಪ್ರಯುಕ್ತ ಅಲ್ಲಿಯೇ ಮುಂದುವರಿಸಿದೆ.

ಅನುಬಂದ - 2

ವಿವರಣೆ: 1998-99ನೇ ಸಾಲಿನಲ್ಲಿ ಒಟ್ಟು 9 ಮಂದಿ ಅಧಿಕಾರಿಗಳನ್ನು ಆಡಳಿತಾತ್ಮಕ ಕಾರಣದಿಂದ ಅದೇ ಸ್ಥಳದಲ್ಲಿ ಮುಂದುವರಿಸಲಾಗಿದೆ, ಉಳಿದಂತೆ 4 ಜನ ಅಧಿಕಾರಿಗಳನ್ನು ಈ ಕೆಳಕಂಡ ಕಾರಣಗಳ ಮೇಲೆ ಅಲ್ಲಿಯೇ ಮುಂದುವರಿಸಿದೆ.

1. ಒಬ್ಬ ಸಹಯಕ ಕೃಷಿ ನಿರ್ದೇಶಕರವರ ಸೇವೆಯು ಅಗತ್ಯವಿರುವುದಾಗಿ ನಿರ್ದೇಶಕರು, ಪ್ರದೇಶಾಭವೃದ್ಧಿ ಕಾರ್ಯಕ್ರಮ, ಗ್ರಾಮೀಣಾಭವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಟಿಪ್ಪಣಿ ಮೇರೆಗೆ ಸರ್ಕಾರವು ಸದ್ಯದ ಕಛೇರಿಯಲ್ಲಿಯೇ ಮುಂದುವರಿಸಿರುತ್ತದೆ.

2. ಒಬ್ಬ ಕೃಷಿ ಅಧಿಕಾರಿ ರವರು ರಾಜ್ಯ ಅಲ್ಪ ಸಂಖ್ಯಾತರ ಆಯೋಗದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ವರ್ಗಾಯಿಸಲಾದ ಸ್ಥಳಕ್ಕೆ ಹಾಜರಾಗದ ಕಾರಣ ಇವರನ್ನು ಅಮಾನತ್ತಿನಲ್ಲಿಡಲಾಗಿತ್ತು. ಅಧ್ಯಕ್ಷರು ಅಲ್ಪಸಂಖ್ಯಾತರ ಆಯೋಗ ಇವರ ಕೋರಿಕೆಯಂತೆ ವಿಚಾರಣೆ ಕಾಯ್ದೆರಿಸಿ ಅಮಾನತ್ತು ತೆರವುಗೊಳಿಸಿ ಅವರನ್ನು ಸದ್ಯದ ಕಛೇರಿಯಲ್ಲಿ ಮುಂದುವರಿಸಿದೆ.

3. ಒಬ್ಬ ಸಹಾಯಕ ಕೃಷಿ ಅಧಿಕಾರಿ ರವರು ವಯೋನಿವೃತ್ತಿ (31-1-99) ಹತ್ತಿರದಲ್ಲಿದ್ದು, ವರ್ಗಾಯಿಸಿಲಾದ ಪ್ರಯುಕ್ತ ನ್ಯಾಯಾಲಯದ ಮೊರೆ ಹೊಕ್ಕು ವರ್ಗಾವಣೆ ಆದೇಶಕ್ಕೆ ತಡೆಯಾಜ್ಞೆ ತಂದಿದ್ದರಿಂದ ಅದೇ ಸ್ಥಳದಲ್ಲಿ ಮುಂದುವರಿಸಲಾಗಿದೆ. ರಿಟ್ ಪಿಟಿಷನ್ ನಂ: 21979: 98

4. ಒಬ್ಬ ಕೃಷಿ ಅಧಿಕಾರಿ ಅವರ ಸೇವೆಯನ್ನು ರಾಜ್ಯ ಜಲಾನಯನ ನಿರ್ದೇಶನಾಲಯದಲ್ಲಿ ಅಗತ್ಯವಿದೆ ಎಂದು ಪ್ರಧಾನ ಕಾರ್ಯದರ್ಶಿಯವರು ಕೋರಿದ ಪ್ರಯುಕ್ತ ಅಲ್ಲಿಯೇ ಮುಂದುವರಿಸಿದೆ.

ವಾಹನ ತೆರಿಗೆ ಸಂಗ್ರಹ

2823: (3778)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97 ಮತ್ತು 1997-98ರ ಸಾಲಿನಲ್ಲಿ ಸಂಗ್ರಹವಾಗಿರುವ ವಾಹನ ತೆರಿಗೆಯೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ವಾಹನ ತೆರಿಗೆ ಪಾವತಿಯಾಗದ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ?

ಇ) ಈ ಬಗ್ಗೆ ನ್ಯಾಯಾಲಯಗಳಲ್ಲಿ ಹೂಡಿರುವ ಮೊಕದ್ದಮೆಗಳೆಷ್ಟು; ತನಿಖೆಗಾಗಿ ಬಾಕಿಯಿರುವ ಮೊಕದ್ದಮೆಗಳೆಷ್ಟು?

ಈ) ಈ ಸಂದರ್ಭದಲ್ಲಿ ವಶಪಡಿಸಿಕೊಳ್ಳಲಾದ ವಾಹನಗಳು ಎಷ್ಟು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

	1996-97	1997-98
ಅ)	(ರೂ.ಲಕ್ಷಗಳಲ್ಲಿ)	(ರೂ.ಲಕ್ಷಗಳಲ್ಲಿ)
	32,935.77	44,892.91
	(ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಲಾಗಿದೆ)	
ಆ)	33,635	37,021
ಇ)	1,299	1,220
	3,398	5,139
ಈ)	4,530	6,157

ವಿಧಾನಸಭಾ ಸದಸ್ಯರಾದ ಶ್ರೀ ಯು.ಆರ್.ಸಭಾಪತಿಯವರ ಚುಕ್ಕೆ ಗುರುತಿಲ್ಲದ ಪ್ರ.ಸಂ.3778ಕ್ಕೆ ಅನುಬಂಧ. (1996-97 ಮತ್ತು 1997-98ನೇ ಸಾಲಿನಲ್ಲಿ ಮೋಟಾರು ವಾಹನ ತೆರಿಗೆ ಮತ್ತು ಬಾಬ್ತುಗಳಿಂದ ವಸೂಲಾದ ರಾಜಸ್ವ (ಜಿಲ್ಲಾವಾರು ವಿವರ)

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಗಳು	1996-97ನೇ ಸಾಲಿನಲ್ಲಿ ವಸೂಲಿ ಮಾಡಲಾದ ರಾಜಸ್ವ	1997-98ನೇ ಸಾಲಿನಲ್ಲಿ ವಸೂಲಿ ಮಾಡಲಾದ ರಾಜಸ್ವ
1	ಬೆಂಗಳೂರು	15,043.44	18,201.31
2	ತುಮಕೂರು	818.75	997.89
3	ಕೋಲಾರ	850.42	946.46
4	ಶಿವಮೊಗ್ಗ	989.60	1,248.93
5	ಚಿತ್ರದುರ್ಗ	976.48	1,177.09
6	ಚಿಕ್ಕಮಂಗಳೂರು	566.45	736.73
7	ಮಂಗಳೂರು	3,299.34	4,085.11
8	ಮೈಸೂರು	1,477.78	1,795.01
9	ಮಂಡ್ಯ	487.93	586.49
10	ಹಾಸನ	513.67	642.49
11	ಮಡಿಕೇರಿ	525.96	718.62
12	ಗುಲ್ಬರ್ಗಾ	594.36	868.03
13	ರಾಯಚೂರು	383.14	527.86
14	ಬೀದರ್	470.80	634.88

15	ಬಳ್ಳಾರಿ	621.00	755.33
16	ಬೆಳಗಾಂ	1,737.33	2,368.32
17	ಬಿಜಾಪುರ	908.14	1,309.48
18	ಧಾರವಾಡ	1,079.12	1,377.22
19	ಕಾರವಾರ	575.24	798.90
20	ಹಾವೇರಿ	234.92	299.84
21	ಬೆಂಗಳೂರು ಗ್ರಾಮಾಂತರ	17.58	43.56
22	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಬಂದ ರಾಜಸ್ವ	764.37	4,773.36
	ಒಟ್ಟು	32,935.77	44,892.91

ಧಾರ್ಮಿಕ ದತ್ತಿ ಇಲಾಖೆಯಲ್ಲಿ ವರ್ಗಾವಣೆ ಕುರಿತು.

2825: (3780)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಧಾರ್ಮಿಕ ದತ್ತಿ ಇಲಾಖೆಯಲ್ಲಿ 1997-98 ಮತ್ತು 1998-99ನೇ ಸಾಲಿನ ಅಕ್ಟೋಬರ್ 15ರ ಒಳಗೆ ಎಷ್ಟು ಮಂದಿ ಅಧಿಕಾರಿಗಳನ್ನು (ವಿವಿಧ ಹುದ್ದೆಯಲ್ಲಿ) ವರ್ಗಾಯಿಸಲಾಗಿದೆ.

2) ವರ್ಗಾವಣೆ ಆದೇಶ ನೀಡಿದ ಬಳಿಕ ಸ್ಥಳ ಬದಲಾಯಿಸಿ ಮರು ವರ್ಗಾಯಿಸಿದ ಪ್ರಕರಯಗಳು ಎಷ್ಟು?

3) ಆಮಾನತ್ತಿನಲ್ಲಿದ್ದ ಎಷ್ಟೋ ಅಧಿಕಾರಿಗಳನ್ನು ಮರು ವಿಚಾರಣೆ ನಡೆಸದೆ 'ಬಿ' ರಿಪೋರ್ಟು ಹಾಕಿ ಪ್ರಾಮುಖ್ಯವಾದ ಜಾಗಕ್ಕೆ ವರ್ಗಾಯಿಸಿರುವುದು ನಿಜವೇ ಇದಕ್ಕೆ: ಕಾರಣಗಳೇನು? (ವಿವರ ನೀಡುವುದು)

ಶ್ರೀ ಬಿ.ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):

1)

	1997-98	1998-99
ಸಮೂಹ - ಎ	3	6
ಸಮೂಹ- ಬಿ	ಇಲ್ಲ	3
ಒಟ್ಟು	3	9

2) ಒಂದು (1)

3) ಇಂತಹ ಪ್ರಕರಣಗಳು ಯಾವುದು ಇಲ್ಲ.

ನೆರಳಿನ ಭಾಗ್ಯ ಯೋಜನೆ.

2826: (3799)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆರಳಿನ ಭಾಗ್ಯ ಯೋಜನೆಯಡಿಯಲ್ಲಿ 1997-98ನೇ ಸಾಲಿನಲ್ಲಿ ಮೀಸಲಿಟ್ಟ ಹಣವೆಷ್ಟು;

ಆ) ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ; (ಜಿಲ್ಲಾವಾರು)

ಇ) ಎಷ್ಟು ಮನೆಗಳನ್ನು ವಿತರಿಸಲಾಗಿದೆ? (ಜಿಲ್ಲಾವಾರು)

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು):

ಅ) ನೆರಳಿನ ಭಾಗ್ಯ ಯೋಜನೆಯಡಿಯಲ್ಲಿ 1997-98ನೇ ಸಾಲಿನಲ್ಲಿ ಮೀಸಲಿಟ್ಟ ಹಣ ರೂ. 500.00 ಲಕ್ಷ

ಆ ಮತ್ತು ಇ) ನೆರಳಿನ ಭಾಗ್ಯ ಯೋಜನೆಯಡಿಯಲ್ಲಿ ಒಟ್ಟು 3359 ಹುಲ್ಲು ಜೋಪಡಿಗಳನ್ನು ಹೆಂಚಿನ ಮನೆಗಳನ್ನಾಗಿ ಉನ್ನತೀಕರಿಸಲಾಗಿದೆ. (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 3799 ಕ್ಕೆ ಅನುಬಂಧ

ನೆರಳಿನ ಭಾಗ್ಯ ಯೋಜನೆ - 1997-98

ಮಾಸಲಿಟ್ಟ ಹಣ

ಕ್ರಮ ಸಂಖ್ಯೆ	ಜಿಲ್ಲೆಗಳು	ಉನ್ನತೀಕರಿಸಿರುವ ಮನೆಗಳ ಸಂಖ್ಯೆ
1.	ಶಿವಮೊಗ್ಗ	1072
2.	ಮೈಸೂರು	303
3.	ಚಿಕ್ಕಮಗಳೂರು	606
4.	ದಕ್ಷಿಣ ಕನ್ನಡ	897
5.	ಹಾಸನ	60
6.	ಕೊಡಗು	0
7.	ಬೆಳಗಾಂ	77
8.	ಧಾರವಾಡ	0
9.	ಉತ್ತರ ಕನ್ನಡ	344
	ಒಟ್ಟು	3359

ಕಳಪೆ ಬೀಜ ಮತ್ತು ಕೀಟನಾಶಕಗಳ ಮಾರಾಟ

2827: (3801)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳಪೆ ಬೀಜ ಮತ್ತು ಕೀಟನಾಶಕಗಳನ್ನು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕಳಪೆ ಬೀಜ ಮತ್ತು ಕೀಟನಾಶಕಗಳನ್ನು ಮಾರಾಟ ಮಾಡುತ್ತಿರುವ ಏಜನ್ಸಿಗಳಾವುವು (ಜಿಲ್ಲಾವಾರು)

ಇ) ಈ ಏಜನ್ಸಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):

ಅ) ಹೌದು.

ಆ) ಕಳಪೆ ಬೀಜ ಮತ್ತು ಗುಣಮಟ್ಟವಿಲ್ಲದ ಕೀಟನಾಶಕಗಳನ್ನು ಮಾರಾಟ ಮಾಡುತ್ತಿದ್ದ ಏಜನ್ಸಿಗಳ (ಜಿಲ್ಲಾವಾರು) ವಿವರಗಳನ್ನು ಅನುಬಂಧ-1 ಮತ್ತು ಅನುಬಂಧ-2ರಲ್ಲಿ ಪ್ರತ್ಯೇಕವಾಗಿ ನೀಡಲಾಗಿದೆ.

ಇ) ಕಳಪೆ ಬೀಜ ಮತ್ತು ಗುಣಮಟ್ಟವಿಲ್ಲದ ಕೀಟನಾಶಕಗಳನ್ನು ಮಾರಾಟ ಮಾಡುತ್ತಿದ್ದ ಏಜನ್ಸಿಗಳ ವಿರುದ್ಧ ಬೀಜ ಅಧಿನಿಯಮ 1966, ಬೀಜ (ನಿಯಂತ್ರಣ) ಆದೇಶ 1983 ಹಾಗೂ ಕೀಟನಾಶಕಗಳ ಕಾಯಿದೆ 1968, ಕೀಟನಾಶಕಗಳ ನಿಯಮಾವಳಿ 1971ರ ಪ್ರಕಾರ ಆಡಳಿತಾತ್ಮಕ ಮತ್ತು ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ.

ANNEXURE-1

DISTRICT-WISE SUB-STANDARD SEED DISTRIBUTED BY SEED PRODUCING AGENCIES DURING 1997-98 (AS PER SEED TESTING LABORATORIES REPORT)

Sl. No.	District	Name of the Seed Producing Agency:
1.	BANGALORE RURAL	1. Karnataka Agro Industries Corporation
		2. Karnataka State Seed Corporation.
2.	BANGALOR URBAN	1. Maharashtra Hybrid Seed Company (Mahyco)
		2. Indo American Hybrid Seeds
		3. Nethra Seeds
		4. Solar seeds
3.	KOLAR	1. Karnataka State Seeds Corporation
4.	TUMKUR	1. Flora Seeds
		2. Maharastra Hybrid Seeds company (Mahyco)

		3. Karnataka State Seeds Corporation
		4. Karnataka Agro Industries Corporation.
		5. Karnataka Oilseeds Growers' Federation
5.	MANDYA	1. Karnataka Agro Industries Corporation
		2. Karnataka Co-op. Oil seeds Growers Federation
		3. Karnataka State Seeds Corporation
6.	MYSORE	1. Maharashtra Hybrid Seeds Company (Mahyco)
		2. Karnataka State Seeds Corporation
		3. Pro-Agro Seeds
		4. Cauvery Seeds
		5. Zuari Seeds
		6. Nath Seeds
		7. I.T.C. Zeneca
7.	Hassan	1. Ashok Seeds

		2. Maharashtra Hybrid Seeds (Mahyco)
8.	CHICKMAGALUR	1. Karnataka State Seeds Corporation
		2. National Seeds Corporation
		3. Heritage Seeds
9.	DAKSHINA KANNADA	1. Karnataka State Seeds Corporation
10.	SHIMOGA	1. Kanchan Seeds
		2. Andhrapradesh Seed Devlopment Corporation.
11.	CHITRADURGA	1. Cauvery Seeds
		2. Pro-Agro Seeds
		3. L.R.Agro Seeds
		4. Maharashtra Hybrid Seeds Co., (Mahyco)
		5. Hindustan Lever Ltd.
		6. I.T.C. Zeneca.
12.	DHARWAD	1. National Seeds Corporation
		2. Pro-Agro Seeds
		3. I.T.C. Zeneca.

	4. SPIC PHI
	5. Cauvery Seeds
	6. Hindustan Lever Ltd.,
	7. Sand oz
	8. A.G.Sun
	9. Mahalaxmi Agro
13. UTTARA KANNADA	1. Karnataka Agro Industries Corporation
14. BELGAUM	1. Hindustan Lever Ltd.,
	2. T.Stains Ltd.,
	3. Pro-Agro Seeds
	4. I.T.C. Zenceca
	5. Maharashtra Hybrid Seeds Co., (Mahyco)
	6. Karnataka State Seeds Corporation
	7. SPIC PHI
15. BIJAPUR	1. Cosmo Plantogen
	2. Maharashtra Hybrid Seed Co.,
	3. Maruthi Seeds
	4. Hindustan Lever Ltd.,

	5. Nizuveedu
16. RAICHUR	1. National Seeds Corporation
	2. Karnataka State Seeds Corporation
	3. Maharastra Hybrid Seeds Company(Mahyco)
	4. Pro-Agro Seeds
	5. Venkateswara Seeds.
17. BELLARY	1. Maharshtra Hybrid Seeds Company (Mahyco)
	2. Seed-tech
	3. Hindustan Lever Ltd.
18. GULBARGA	1. Amareshwara Agri-Tech
	2. Pro-Agro Seeds
	3. Cargill Seeds
	4. Karnataka State Seeds Corporation
19. BIDAR	1. Pro-agro Seeds Company.

1997-98ನೇ ಸಾಲಿನಲ್ಲಿ ಗುಣಮಟ್ಟ ಹೊಂದು ಇರುವ ಕೀಟನಾಶಕಗಳ ವಿವರಗಳು:-

ಕ್ರ ಸಂ	ಕೀಟನಾಶಕದ ಹೆಸರು	ತಯಾಕರ ಹೆಸರು	ಮಾರಾಟಗಾರ ಹೆಸರು
1	2	3	4
		ಬೆಂಗಳೂರು ನಗರ	
1.	ಪನ್‌ವರೆಲೀಟ್ ಶೇ20 ಇ.ಸಿ.	ವೆಂಪಕ್ ಕೆಮಿಕಲ್ಸ್ ಪ್ರೈವೇಟ್ ಲಿಮಟೆಡ್, ಮೇಡಖ (ಎಪಿ)	ಗಣೇಶ ಫರ್ಟಿಲೈಸರ್ಸ್, ಜಿಗಣಿ
		ತುಮಕೂರು	
2.	ಮಾನೋಕ್ರೊಟೋಫಾಸ್ ಶೆ: 36 ಎಸ್. ಎಲ್.	ಅಗ್ರೋಕಮ್ ಇಂಡಸ್ಟ್ರೀಸ್ ಬೆಂಗಳೂರು	ಜಿ.ಎನ್. ನಾರಾಯಣ ಶೆಟ್ಟಿ ಅಂಡ್ ಸನ್ಸ್, ತಿಪಟೂರು
3.	ಕಾಪರ್ ಆಕ್ಸಿ ಕ್ಲೋರೈಡ್ ಶೆ:	-ಡಿಟೋ-	-ಡಿಟೋ-
		ಕೋಲಾರ	
4.	ಫನವರಲೇಟ್ ಶೆ : 20 ಇ.ಸಿ.	ಜಿ.ಕ.ಬಿ.ಯಂ. ಲಿಮಿಟೆಡ್ ಮೇಡಕ್ (ಎ.ಪಿ)	ಲಕ್ಷ್ಮಿ ಫರ್ಟಿಲೈಸರ್ಸ್, ಗೌರಿಬಿದನೂರು

5.	ಮಾಸೋಕ್ರೊಟೋಫಾಸ್	ಜಿ.ಕೆ.ಬಿ.ಯಂ.ಲಿಮಿಟೆಡ್	ಮಾರುತಿ ಅಗ್ರೋ ಟ್ರೇಡರ್ಸ್, ಬಂಗಾರಪೇಟೆ
	ಶೆ: 36 ಎಸ್.ಎಲ್		
		ಚಿತ್ರದುರ್ಗ	
6.	ಡೈಮೇತೋಯೇಟ್	ಇಂಡಸ್ಟ್ರೀಸ್ ಅಂಡ್	ಧವನ ಸ್ಪೋರ್ಸ್, ಚಿತ್ರದುರ್ಗ
	ಶೇ: 30 ಇ.ಸಿ.	ಕೆಮಿಕಲ್ಸ್, ರಾಣಪೇಟೆ	
7.	ಡೈಕ್ಲೋರೋಫಾಸ್	ಪೆಸ್ಟಿಸೈಡ್ ಇಂಡಿಯಾ	-ಡಿಟೋ-
	ಶೆ : 25 ಇ.ಸಿ.	ಲಿಮಿಟೆಡ್, ಉದಯಪುರ	
		ಮೈಸೂರು	
8.	ಮಾನೋಕ್ರೊಟೋಪಾಸ್	ಜಿ.ಕೆ.ಬಿ.ಯಂ. ಲಿಮಿಟೆಡ್	ಶೇಖರ್ ಟ್ರೇಡಿಂಗ್ ಕಂಪನಿ
	ಶೇ: 38 ಎಸ್.ಎಲ್	ಗುಜರಾತ್	ಗುಂಡ್ಲುಪೇಟೆ
9.	-ಡಿಟೋ-	-ಡಿಟೋ-	-ಡಿಟೋ-
		ಮಂಡ್ಯ	
10.	ಡೈಕ್ಲೋರೋಫಾಸ್	ಪೆಸ್ಟಿಸೈಡ್ ಇಂಡಿಯಾ	ಮಾತುಶ್ರೀ ಟ್ರೇಡರ್ಸ್
	ಶೇ.76 ಇ.ಸಿ.	ಲಿಮಿಟೆಡ್, ಉದಯಪುರ	ಮಳವಳ್ಳಿ

11.	ಕಾರ್ಬನ್ ಡೈಜಿಮ್	ವೋಲ್ವಾಸ್ ಲಿಮಿಟೆಡ್	ಗ್ರೋಕೇಂದ್ರ
	ಶೇ. 50 ಡಬ್ಲ್ಯೂ.ಪಿ.	ಥೇನಜೂರು (ಎ.ಪಿ)	ಪಾಂಡವಪುರ
12.	ಡೆಮಿಥೊಯೇಟ್	ಗ್ರೋಕೆಮ್	ಲಕ್ಷ್ಮೀದೇವಿ ಟ್ರೇಡರ್ಸ್
	ಶೇ. 30 ಇ.ಸಿ	ಇಂಡಸ್ಟ್ರೀಸ್ ಲಿಮಿಟೆಡ್	ಕೆ.ಆರ್.ಪೇಟೆ
13.	ಮಿಥೈಲ್ ಪ್ಯಾರಾಥಿಯಸ್	-ಡಿಟೋ-	-ಡಿಟೋ-
	ಶೇ. 50 ಇ.ಸಿ.		

ಶಿವಮೊಗ್ಗ

14.	ಕಾರ್ಬನ್ ಡೈಜಿಮ್	ವೋಲ್ವಾಸ ಲಿಮಿಟೆಡ್	ವಿನಾಯಕ ಟ್ರೇಡರ್ಸ್ ಕಂಪನಿ
	ಶೆಈ. 50 ಡಬ್ಲ್ಯೂ. ಡಿ. ಪಿ	ಪಥನಜೋರ್ (ಎ.ಪಿ)	ಬೆನಕನಹಳ್ಳಿ

ಹಾಸನ

15.	ಅಜಾಡಿರೆಕ್ಟೀಸ್ 0.03	ಜಿ.ಕೆ.ಗ್ರೋ ಪ್ರಾಡೆಕ್ಟ್ಸ	ಗುರುರಾಜ್ ಫರ್ಟಿಲೈಸರ್ಸ್
	ಶೇ.ಇ.ಸಿ.	ಬೆಂಗಳೂರು	ಚನ್ನರಾಯಪಟ್ಟಣ.

		ಚಿಕ್ಕಮಗಳೂರು	
16.	ಮಿಥೈಲ್ ಪ್ಯಾರಾಥಿಯನ್	ಅಗ್ರೋ ಕೆಮ್	ಅಶೀರ್ವಾದ್ ಟ್ರೇಡರ್ಸ್
	ಶೇ. 50. ಇ. ಸಿ	ಇಂಡಸ್ಟ್ರೀಸ್, ಬೆಂಗಳೂರು	ಕಡೂರು
17.	ಡೈಕೋಫೋರೋವಾಸ್	ಪೆಸ್ಟಿಸೈಡ್ಸ್ ಇಂಡಿಯಾ	ವಿನಾಯಕ ಟ್ರೇಡರ್ಸ್
	ಶೇ. 76 ಇ. ಸಿ.	ಲಿಮಿಟೆಡ್, ಉದಯಪುರ	ಚಿಕ್ಕಮಗಳೂರು
		ಧಾರವಾಡ	
18.	ಡೈಕ್ಲೋರೋವಾಸ್	-ಡಿಟೋ-	ಕಿರಣ ಕೃಷಿ ಕೇಂದ್ರ,
	ಶೇ. 76 ಇ. ಸಿ		ಹುಬ್ಬಳ್ಳಿ
		ರಾಯಚೂರು	
19.	ಕ್ವಿನಾಲ್‌ಫಾಸ್ ಶೇ. 25 ಇಸಿ	ದೇವಿ ಪೆಸ್ಟಿಸೈಡ್ಸ್ ಪ್ರೈವೆ	ಬಸವೇಶ್ವರ ಕೃಷಿ ಸೇವಾ
		ತಮಿಳುನಾಡು	ಕೇಂದ್ರ, ರಾಯಚೂರು.
20.	ಡೈಮಿಥೋಯೇಟ್	ಅನು ಪ್ರಾಡಕ್ಟ್ ಲಿಮಿಟೆಡ್,	ವೆಂಕಟೇಶ್ವರ ಫರ್ಟಿಲೈಸರ್ಸ್,
	ಶೇ. 30 ಇಸಿ.	ಹರಿಯಾಣ.	ಕೇಂದ್ರ, ರಾಯಚೂರು.

21.	ಅಸಿಟೇಟ್ ಶೇ.76 ಎಸ್‌ಪಿ	ಭಾಸ್ಕರ್ ಅಗ್ರೋ ಕೆಮ್	-''-
		ಪ್ರೈ.ಲಿ.ಹೈದರಾಬಾದ್	
22.	ಅಜಾಡಿರಕ್ಟಿನ್ ಶೇ.0.15	ಕೋರಾಪುರ ಅಗ್ರೋ	ವಿಜಯಲಕ್ಷ್ಮಿ ಅಗ್ರೋ
	ಎಸ್‌ಪಿ.	ಪ್ರೈ.ಲಿ, ಗೋವಾ	ಸಪ್ಲೈಸ್, ರಾಯಚೂರು
23	ಮಾನೋಕ್ರೋಟೊಫಾಸ್	ಮೀರುಟ್ ಅಗ್ರೋ ಕೆಮ್	ವಿಶ್ವನಾಥ್ ಟ್ರೇಡಿಂಗ್ ಕಂಪನಿ,
	ಶೇ.36 ಎಸ್‌ಎಲ್.	ಇಂಡಸ್ಟ್ರೀಸ್ ಲಿಮಿಟೆಡ್,	ಲಿಂಗಸೂರು
		ಮೀರುಟ.	
24.	ಎಂಡೋಸ್ಪಾನ್	-''-	ಶ್ರೀ ಲಕ್ಷ್ಮಿ ವೆಂಕಟೇಶ್ವರ
	ಶೇ.35 ಇಸಿ.		ಟ್ರೇಡಿಂಗ್ ಮಾರ್ಟ್, ಮಾನ್ವಿ
25.	ಕ್ವನಾಲ್‌ಫಾಸ್ ಶೇ.25 ಇಸಿ	ಮಧುಸೂದನ್ ಇಂಡಸ್ಟ್ರೀಸ್	ಶ್ರೀನಿವಾಸ್ ಟ್ರೇಡಿಂಗ್ ಕಂಪನಿ,
		ಮದ್ರಾಸ್.	ಗಂಗಾವತಿ
26.	-''-	ವೊಲ್‌ಟಾಸ್ ಲಿಮಿಟೆಡ್,	ಸುಜಾತಾ ಏಜೆನ್ಸಿ,
		ಪಥೇನ್‌ಚೂರ್ (ವಿ.ಪಿ.)	ಗಂಗಾವತಿ

27.	ಮಾನೋಕ್ರೋಟೋ	ನಾರ್ಥನ್ ಮಿನರಲ್ಸ್ ಲಿ.,	ಶ್ರೀ ದುರ್ಗಾ ಟ್ರೇಡರ್ಸ್,
	ಫಾಸ್ ಶೇ. 36 ಇಸಿ	ಗುರ್‌ಗಾಂವ್, ಹರಿಯಾಣ.	ಗಂಗಾವತಿ.
28.	-''-	ಆಗ್ರೋ ಕೆಮ್ ಇಂಡಸ್ಟ್ರೀಸ್	ಭವಾನಿ ಟ್ರೇಡಿಂಗ್ ಕಂಪೆನಿ,
		ಬೆಂಗಳೂರು	ಗಂಗಾವತಿ
29.	ಮಿಥೈಲ್ ಪ್ಯಾರಾಥಿಯಾನ್	ಮೀರುಟ್ ಅಗ್ರೋ ಕೆಮಿಕಲ್ಸ್	ಕುಮುದಿ ಟ್ರೇಡಿಂಗ್ ಕಂಪನಿ
	ಶೇ. 50 ಇಸಿ	ಇಂಡಸ್ಟ್ರೀಸ್ ಲಿ., ಮೀರುಟ್	ಗಂಗಾವತಿ
30.	ಎಂಡೋಸಲ್ಫಾನ್	-''-	-''-
	ಶೇ. 35 ಇಸಿ		
31.	ಫೆನ್‌ವಲರೇಟ್ ಶೇ.0.4 ಡಿಪಿ.	ಶರ್ಲ ಅಗ್ರೋ ಕೆಮಿಕಲ್ಸ್	ಬಾಲಾಜಿ ಅಗ್ರೋ ಮಾರ್ಟ್
		ಮುಂಬೈ	ರಾಯಚೂರು
32.	ಫ್ಲೂರೇಟ್ 10 ಜಿ	ಅನುಪ್ರಾಡಕ್ಟಸ್ ಲಿಮಿಟೆಡ್,	ರವಿಕಿರಣ್ ಕಾರ್ಪೊರೇಷನ್
		ಫರೀದಾಬಾದ್	ಲಿಮಿಟೆಡ್, ಮಾನ್ವಿ

ಬೆಳಗಾಂ

33.	ಫೆನವಲರೇಟ್ ಶೇ.0.4 ಡಿಪಿ	ಸಾರ್ಧನ್ ಮಿನರಲ್ಸ್, ಗುರುಗಾಂವ್, ಹರಿಯಾಣ	ಹೈಟೇಕ್ ಫರ್ಟಿ ಫೂಡ್ಸ್ ಪ್ರೈ.ಲಿ.ಬೆಳಗಾಂ
34.	ಸೈಪರ್‌ಮೆಥ್ರಿನ್ ಶೇ.25 ಇಸಿ	ಜಿವೀಕಾ ಐ.ಸಿ.ಐ, ಅಗ್ರೋ ಕೆಮ್ ಲಿ, ಮದ್ರಾಸ್	ವಾಸವಿ ಅಗ್ರೋ ಕೆಮಿಕಲ್ಸ್ ಸುರ್‌ಬಾನ್
35.	ಮನೋಕ್ರೋಟೋಫಾಸ್ ಶೇ.36 ಇಸಿ	ನಾರ್ಧನ್ ಮಿನರಲ್ಸ್ ಗುರ್‌ಗಾಂವ್, ಹರಿಯಾಣ	ಹೈಟೇಕ್ ಫರ್ಟಿ ಫೂಡ್ಸ್ ಪ್ರೈ.ಲಿ.ಬೆಳಗಾಂ

ಬೀದರ್

36.	ಕ್ಲೋರೋಪೈರಿಫಾಸ್ ಶೇ.30.ಇಸಿ	ವೈಗೈ ಆಗ್ರೋ ಕೆಮ್ ಪ್ರೈ.ಲಿ.ಸೇಲಂ	ಸಂಗಮೇಶ್ವರ ಸೀಡ್ಸ್ ಅಂಡ್ ಪೆಸ್ಟಿಸೈಡ್ಸ್, ಭಾಲ್ಕಿ
37.	ಫೆನವಲರೇಟ್ ಶೇ.20 ಇಸಿ	ಬ್ಲೂ ಕ್ರೆಸ್ಟಲ್ ಅಗ್ರೋ ಕೆಮ್, ಬೆಂಗಳೂರು	ಶ್ರೀ ಸಾಯಿ ಬಾಬ ಫರ್ಟಿಲೈಸರ್ಸ್, ಭಾಲ್ಕಿ.
38.	ಮೆಲಾಥಿಯಾನ್ ಶೇ.5 ಡಿಪಿ	ಗೋಲ್ಡನ್ ಅಗ್ರೋ ಕೆಮಿಕಲ್ಸ್ ಹೈದರಾಬಾದ್	ಪವನ್ ಫರ್ಟಿಲೈಸರ್ಸ್, ಬೀದರ್.

ಗುಲ್ಬರ್ಗಾ

39.	ಕ್ವಿನಾಲ್‌ಫಾಸ್ ಶೇ.25 ಇಸಿ	ಶ್ರೀರಾಮ ಸೈಡ್ಸ್, ಮದ್ರಾಸ್	ಲಕ್ಷ್ಮೀ ಆಗ್ರೋ ಸರ್ವೀಸ್ ಗುಲ್ಬರ್ಗಾ
40.	ಫೆನವಲರೇಟ್ ಶೇ.0.4ಡಿಪಿ	ಸಸ್ಯ ರಕ್ಷಾ, ಇಂಡಿ,ಎ.ಪಿ.	ನಿಪಾಣಿ ಅಗ್ರೋ ಏಜೆನ್ಸಿ ಗುಲ್ಬರ್ಗಾ.
42.	ಕ್ಲೋರೋಪೈರಿಫಾನ್, ಶೇ.20. ಇಸಿ	ಸೀರಿನ್ ಇಂಡಿಯಾ ಮೇಡಕ್, ಎ.ಪಿ.	ರ್ಯಾಲೀಸ್ ಇಂಡಿಯಾ ಲಿ. ಗುಲ್ಬರ್ಗಾ
43.	ಫೆನವಲರೇಟ್ ಶೇ.0.4 ಡಿಪಿ	ದೇವಿಪೆಸ್ಟಿಸೈಡ್ಸ್, ಮಥುರಾ	ದೇವಿ ಪೆಸ್ಟಿಸೈಡ್ಸ್ ಗುಲ್ಬರ್ಗಾ
44.	ಮೆಲಾಥಿಯಾನ್ ಶೇ.5 ಡಿಪಿ	ಕೆ.ಎ.ಐ.ಸಿ ರಾಯಚೂರು	ಕೆ.ಎ.ಐ.ಸಿ ಗುಲ್ಬರ್ಗಾ
45.	ಫೆನವಲರೇಟ್ ಶೇ.0.4 ಡಿಪಿ	ಅಶೋಕಾ ಪೆಸ್ಟಿ ಬರೋಡಾ.	ಗಾಯಾಕೊಂಡಾ ಕಂಪನಿ, ಗುಲ್ಬರ್ಗಾ

46.	ಮೆಲಾಥಿಯಾನ ಶೇ. 5 ಡಿಪಿ	ದೇವಿ ಪೆಸ್ಟಿಸೈಡ್ಸ್, ಮಧುರೆ.	ದೇವಿ ಪೆಸ್ಟಿಸೈಡ್ಸ್, ಗುಲ್ಬರ್ಗಾ
47.	ಫನವಲರೇಟ್ ಶೇ0.4 ಡಿಪಿ	ವೈಗ್ಯ ಅಗ್ರೋ ಕೆಮ್, ಸೇಲಂ.	ಗಂಗಾ ಟ್ರೇಡಿಂಗ್ ಕಂಪನಿ, ಗುಲ್ಬರ್ಗಾ.
48.	-''-	ಸಸ್ಯ ರಕ್ಷಾ ಇಂಡಿ, ಎಪ.ಪಿ	ಹೈದರಾಬಾದ್ ಕೆಮ್ ಸಪ್ಲೈಸ್, ಗುಲ್ಬರ್ಗಾ.
49.	-''-	-''-	-''-
50.	-''-	ರೈಮ್ ಅರ್ಗಾನಿಕ್ಸ್ ಅಂಡ್ ಕೆಮ್, ಎ.ಪಿ.	ವೆಂಟಿಕ್ ಇಂಡಸ್ಟ್ರೀಸ್, ಗುಲ್ಬರ್ಗಾ
51.	-''-	ಭಾರತ್ ಪೆಸ್ಟಿಸೈಡ್ಸ್ ಇಂಡ ಸ್ಟ್ರೀಸ್, ಅಹಮದಾಬಾದ್	ಮಹಾಂತ್ ಅಗ್ರೋ ಕೆಮ್, ಗುಲ್ಬರ್ಗಾ.
52.	-''-	-''-	-''-
53.	-''-	-''-	-''-

54.	-''-	ರೈಮ್ ಆರ್ಗಾನಿಕ್ಸ್ ಅಂಡ್ ಕಮ್ ಎ ಪಿ	ವೆಂಟಿಕ್ ಇಂಡಸ್ಟ್ರೀಸ್, ಗುಲ್ಬರ್ಗಾ
55.	-''-	ವೀನ್ ಫಿಲ್ಡ್ ಕೆಮಿಕಲ್ಸ್ ಲಿ., ವಿಜಯವಾಡ.	ವಿವೇಕಾನಂದಾ ಟ್ರೇಡರ್ಸ್ ಜೇವರ್ಗಿ.
56.	ಎಂಡೋಸಲ್ಫಾನ್ ಶೇ. 35 ಇಸಿ	ಮಧುಸೂದನ್ ಇಂಡಸ್ಟ್ರೀಸ್ ಚೆನ್ನೈ	ದೇವೇಂದ್ರಪ್ಪಗೌಡ ಪಾಟೀಲ್ ಜೇವರ್ಗಿ
57.	-''-	-''	ಬಸವೇಶ್ವರ ಏಜೆನ್ಸಿ ಜೇವರ್ಗಿ
58.	-''-	-''-	ಶಾಂತಕುಮಾರ್ ಅವಲ್ ಧಾರ, ಜೇವರ್ಗಿ
59.	ಫನೆವಲರೇಟ್ ಶೇ.0.4. ಡಿಪಿ	ರಾಜಸ್ಥಾನ ಪೆಸ್ಟಿಸೈಡ್ಸ್ ಫರ್ಟ್, ಎಂ.ಪಿ	ಕೆ.ಎ.ಐ.ಸಿ ಜೇವರ್ಗಿ
60.	ಫೇನವಲರೇಟ್ ಶೆ.0.4 ಡಿ.ಪಿ.	ರ್ಯಾಲೀಸ್ ಇಂಡಿಯಾ ಲಿಮಿಟೆಡ್, ಮುಂಬಯಿ	ಕೆ.ಎ.ಐ.ಸಿ, ಜೇವರ್ಗಿ

61.	-''-	ದ್ರುವ ಪೆಸ್ಟಿಸೈಡ್ಸ್	ದೇವರಮನಿ ಅಂಡ್ ಕಂಪನಿ
		ಭೂಪಾಲ್	ಜೇವರ್ಗಿ.
62.	-''-	ಮಾಕಮ್ ಅಗ್ರೋ	ಸೂಪರ್ ಅಗ್ರೋ ಏಜೆನ್ಸಿ,
		ಇಂಡಸ್ಟ್ರೀಸ್, ಬೆಂಗಳೂರು	ಜೇವರ್ಗಿ
63.	-''-	ಪೆಂಟೆಕ್ ಕೆಮ್, ಮೇಡಕ್	ವೀರಭದ್ರೇಶ್ವರ ಅಗ್ರೋ
			ಏಜೆನ್ಸೀಸ್, ಆಫ್ ಜಲ್‌ಪುರ
64.	ಎಂಡೋಸಲ್ಫಾನ್	ಹರಿಯಾಣ ಕೆಮ್ ಅಂಡ್	ಕೋರಿಸಿದ್ದೇಶ್ವರ ಅಗ್ರೋ
	ಶೇ. 35 ಇಸಿ	ಪೆಸ್ಟಿಸೈಡ್ಸ್, ಆಫ್ ಜಲಪುರ್	ಏಜೆನ್ಸೀಸ್, ಆಫ್ ಜಲ್‌ಪುರ
65.	ಕ್ಲೊರೋ ಪೈರಿಫಾಸ್	ಸದರನ್ ಪೆಸ್ಟೋಕೆಮಿಕಲ್ಸ್	ಶರಣಬಸವೇಶ್ವರ ಪರ್ಟಿ ಅಂಡ್
	ಶೇ. 20 ಇ.ಸಿ	ಕಾರ್ಪೊರೇಷನ್, ಮದರಾಸ್	ಕೆಮಿಕಲ್ಸ್, ಚಿಂಚೋಳಿ.
66.	ಫೇವ್‌ವಲರೇಟ್ ಶೇ. 0.4	ರಾಜಾಸ್ತಾನ ಇನ್‌ನೆಕ್ಟೆಸೈಡ್	ಮೋಹನ್ ಕೃಪಾ ಅಗ್ರೋ
	ಡಿ.ಪಿ.	ಅಂಡ್ ಪರ್ಟಿ, ಎಂ.ಪಿ	ಏಜೆನ್ಸೀಸ್, ಚಿಂಚೋಳಿ
67.	ಡೈಮಿಥೋಯೇಟ್	ಅನು ಪ್ರಾಡಕ್ಟ್ಸ್ ಲಿಮಿಟೆಡ್	ಭಾರತ ಅಗ್ರೋ ನೀಡ್ಸ್
	ಶೇ. 30. ಇ.ಸಿ	ಫರೀದಾಬಾದ್	ಚಿತ್ತಾಪುರ

68.	ಮೆಲಾಧೀಯಾನ್ ಶೇ. 5 ಡಿ.ಪಿ.	ಸ್ವಾಸ್ತಿಕ್ ಪೆಸ್ಟಿಸೈಡ್ಸ್ ಯು.ಪಿ.	ಶರಣಬಸವೇಶ್ವರ ಅಗ್ರೋ ಎಜೆನ್ಸೀಸ್, ಚಿತ್ತಾಪುರ
69.	ಫೇನ್‌ವಲರೇಟ್ ಶೇ 0.4 ಡಿಪಿ	ಶ್ರೀ ಗಣೇಶ್ ಮಿನರಲ್ಸ್ ಹಿಮ್ಮತ್‌ನಗರ.	ಶಿವಯೋಗೇಶ್ವರ ಅಗ್ರೋ ಎಜೆನ್ಸೀಸ್, ಚಿತ್ತಾಪುರ.
70.	ಕಿವಾಲ್‌ಫಾನ್ ಶೇ. 1.5 ಡಿಪಿ	ಪಾಕ್ ಲಿಮಿಟೆಡ್, ವಡೋಧರ	ಮಕಬುಲ್ ಆಗ್ರೋ ಎಜೆನ್ಸಿ, ಚಿತ್ತಾಪುರ.
71.	ಫಲಿನ್‌ವಲರೇಟ್, ಶ.0.4	ರತ್ನ ಅಗ್ರೋ ಕೆಮಿಕಲ್ಸ್ ನವಲಗುಂದ	ಶರಣಬಸವೇಶ್ವರ ಆಗ್ರೋ ಎಜೆನ್ಸೀಸ್, ಚಿತ್ತಾಪುರ.
72.	-''-	ಸೂಪರ್ ಕ್ರಾವ್ ಸೇಪ್ ಲಿಮಿಟೆಡ್, ಅಹಮದಾಬಾದ್	ಮಕಬುಲ್ ಅಗ್ರೋ ಎಜೆನ್ಸೀಸ್, ಚಿತ್ತಾಪುರ
73.	ಕ್ಲೊರೋಪೈರೀಫಾನ್ ಶೇ. 20 ಇ.ಇಸಿ.	ರ್‍ಯಾಲೀಸ್ ಇಂಡಿಯಾ ಲಿಮಿಟೆಡ್ ಮುಂಬಯಿ	ಯಲ್ಲಲಿಂಗ್ ಎಜೆನ್ಸೀಸ್ ಸೇಡಂ
74.	ಫೇಸವಲರೇಟ್ ಶೇ 0.4. ಡಿ.ಪಿ.	ಹಿಂದೂಸ್ಥಾನ್ ಅಂಟಿಪೆಸ್ಟ್ ಲಿಮಿಟೆಡ್, ಹೈದರಾಬಾದ್.	ಅನಿಲ್ ಇಂಡಸ್ಟ್ರೀಸ್ ಸೇಡಂ.

75.	ಫೆನವೇಲೇದೇ ಶೇ.0.4ಡಿ.ಪಿ	ರ್ಯಾಲೀಸ್ ಇಂಡಿಯಾ ಲಿ. ಮುಂಬೈ	ಮೀನಾಏಜೆನ್ಸಿ ಸೇಡಂ
76.	-''-	-''-	-''-
77.	-''-	-''-	-''-
78.	-''-	ಸಲ್ಚರ್ ಮಿಲ್ಸ್, ಮುಂಬೈ	ರಾಘವೇಂದ್ರ ಏಜೆನ್ಸಿ, ಸೇಡಂ
79.	ಎಂಡೋಸಲ್ಫಾನ್ ಶೇ.0.4 ಡಿ.ಪಿ	ಫರೂಲ್ ಕೆಮಿಕಲ್ಸ್, ವಡೋದರ	-''-
80.	ಫನವಲರೇಟ್ 0.4ಡಿಪಿ	ಗುಜರಾಜತ್ ಪೆಸ್ಟಿಸೈಡ್ಸ್, ಅಹಮದಾಬಾದ್	ಎಚ್.ಎನ್.ಕಾಬ್ರ, ಸೇಡಂ
81.	ಕ್ವಿನಾಲ್‌ಫಾಸ್ ಶೇ. 1.5 ಡಿಪಿ	ಗುಜರಾತ್ ಪೆಸ್ಟಿಸೈಡ್ಸ್ ಬರೋಡ	ಮಂಜು ಅಗ್ರೋ ಏಜೆನ್ಸಿ, ಸೇಡಂ
82.	ಫೆನವಲರೇಟ್ ಶೇ.0.4 ಡಿಪಿ	ಸಲ್ಚರ್ ಮಿಲ್ಸ್, ಮುಂಬೈ ವಡೋದರ	ಕೆ.ಬಿ.ಗೌಡ ಫರ್ಟಿ ಅಂಡ್ ಸೀಡ್ಸ್, ಸೇಡಂ

83.	ಕ್ವಿನಾಲ್‌ಫಾಸ್ ಶೇ. 1.5 ಡಿಪಿ	ಪರೂಲ್ ಕೆಮಿಕಲ್ಸ್, ವಡೋದರ	ಗುರುರಾಜ್ ಆಗ್ರೋ ಏಜೆನ್ಸಿ, ಸೇಡಂ
84.	ಎಂಡೋಸಲ್ಫಾನ್ ಶೇ. 35 ಡಿಪಿ	ಪೆಂಟಿಕ್ ಕೆಮಿಕಲ್ಸ್ ಲಿ ಮೇಡ್ (ಆ.ಪ್ರದೇಶ)	ವಾಸವಿ ಫರ್ಟಿಲೈಸರ್ಸ್ ಶೋರಾಪುರ
85.	ಫನವಲರೇಟ್ ಶೇ. 0.4. ಡಿಪಿ	ಅಕೊಲಾಕೆಮಿಕಲ್ಸ್ ಇಂಡಿಯ ಲಿ. ಅಕೋಲ	ಎಸ್.ಎಸ್.ಉಪ್ಪಿನ್ ಅಂಡ್ ಬ್ರದರ್ಸ್ ಶೋರಾಪುರ
86.	-''-	ಅನು ಪ್ರಾಡೆಕ್ಟಸ್ ಲಿ., ಫರೀದಾಬಾದ್	ನಂದಿ ಕೃಷಿ ಕೇಂದ್ರ, ಶಹಾಪುರ
87.	ಮಾನೋಟೋಟೋಪಾಸ್ ಶೇ. 36 ಎಸ್.ಎಲ್	ಹಿಂದೂಸ್ಥಾನ್ ಎಂಬಿಪೆಸ್ಟ್ ಲಿ. ಹೈದರಾಬಾದ್	ಶ್ರೀ ನಂದಿ ಪೆಸ್ಟಿಸೈಡ್ಸ್ ಶಹಾಪುರ
88.	ಅಸಿಫೇಟ್ 75 ಎಸ್‌ಪಿ	-''-	-''-
89.	ಕ್ವಿನಾಲ್‌ಫಾಸ್ ಶೇ. 25 ಇಸಿ	ಸೈಂಟಿಫಿಕ್ ಫರ್ಟಿರೈಸರ್ಸ್ ಕಂಪನಿ, ತಿರುಚಿ	ಲಕ್ಷ್ಮಿ ಎಂಟರ್‌ಪ್ರೈಸಸ್, ಯಾದಗೀರ್

90.	ಫೆನವಲರೇಟ್ ಶೇ.0.4 ಡಿಪಿ	ಸೂಪರ್‌ಕ್ರಾಫ್ ಸೇಕ್ ಲಿ.	ರಾಘವೇಂದ್ರ ಫರ್ಟಿಲೈಸರ್ಸ್
		ಅಹಮದಾಬಾದ್	ಯಾದಗೀರಿ
91.	ಕ್ವಿನಾಲ್‌ಫಾಸ್ ಶೇ.25 ಇಸಿ	ದೇವಿ ಪೆಸ್ಟಿಸೈಡ್ಸ್ ಪ್ರೈ	ಕೋರಿ ಸಿದ್ದೇಶ್ವರ ಅಗ್ರೋ
		ಲಿ.ಮಧುರೆ	ಏಜೆನ್ಸಿ, ಯಾದಗಿರಿ
		ಬಿಜಾಪುರ	
92.	ಸೈಪರ್‌ಮೆಥ್ರಿನ್ ಶೇ 26 ಇಸಿ	ಜೆನೀಕಾ ಐಸಿಐ ಅಗ್ರೋ	ವಾಸವಿ ಅಗ್ರೋ ಕೆಮಿಕಲ್ಸ್
		ಕೆಮ್.ಮದ್ರಾಸು	ಸುರೇಬಾನ್
93.	-''-	ಯುನೈಟೆಡ್ ಫಾಸ್ಪರಸ್	ಯಲಮೇಲಾ ಅಗ್ರೊ
		ಲಿ.ಮುಂಬೈ	ಎಜೆನ್ಸಿ, ಇಂಡಿ
94.	ಮೆಂಕೋಜಿಬ್ ಶೆ.75 ಡಬ್ಲ್ಯು.ಪಿ	ಮೀರುಟ್ ಅಗ್ರೋ	ಸುರಜ್ ಕೆಮ್
		ಕೆಮಿಕಲ್, ಮೀರುಟ್	ತಾಳೀಕೋಟೆ
		ಬಳ್ಳಾರಿ	
95.	ಕ್ಲೂರೋಪೈರಿಫಾಸ್	ಇ.ಐ.ಡಿ.ಪ್ಯಾರಿ ಇಂಡಿಯಾ	ಪಾಟೀಲ್ ಟ್ರೇಡರ್ಸ್

96.	ಮನೋಕ್ರೋಟೊಫಾಸ್	ಹಿಂದೂಸ್ಥಾನ್ ಇನ್‌ಸೆಕ್ಟಿ	ಕೊಟ್ರೇಶ್ವರ ಅಗ್ರೋ
	ಶೇ 36 ಎಸ್‌ಎಲಿ	ಸೈಡ್ಸ್ ಲಿ ನವದೆಹಲಿ	ಕೇಂದ್ರ, ಹೆಚ್.ಹಳ್ಳಿ.
97.	ಟೈಡಿಮಿಫಾಸ್ ಶೇ.25	ಟ್ರಾಪಿಕಲ್ ಅಗ್ರೊ ಸಿಸ್ಟಂ	ಮಾರುತಿ ಕೆಮಿಕಲ್ಸ್ ಅಂಡ್
	ಡಬ್ಲ್ಯು.ಪಿ	ಇಂಡಿಯಾ ಲಿ.ಮದ್ರಾಸ್	ಫರ್ಟಿಲೈಸರ್ಸ್, ಬಳ್ಳಾರಿ
98.	ಕಾರ್ಬರಿಲ್ ಶೇ.50 ಡಬ್ಲುಪಿ	ಪೈಟೋ ಕೆಮ್ ಇಂಡಿಯಾ	-''-
		ಲಿ, ಹೈದರಾಬಾದ್	
99.	ಅಸಿಫೇಟ್ ಶೇ. 75 ಎಸ್‌ಪಿ	ಟ್ರಾಫಿಕಲ್ ಅಗ್ರೋ ಸಿಸ್ಟಂ	ರಾಘವೇಂದ್ರ ಅಗ್ರೊ
		ಇಂಡಿಯಾ ಲಿ, ಮದ್ರಾಸ್	ಏಜೆನ್ಸಿ, ಸಿರುಗುಪ್ಪ
100.	ಟೈಡೆಮಿಫಾಸ್ ಶೇ.25 ಇಸಿ	-''-	ಸೌಭಾಗ್ಯ ಅಗ್ರೋ
			ಕೆಮಿಕಲ್ಸ್, ಬಳ್ಳಾರಿ
101.	ಮಾನೋಕ್ರೊಟೊಫಾಸ್	ಟ್ಯೂಟಿಕಾರ್ನ್ ಅಲ್ಕ	ಭವಾನಿ ಎಂಟರ್‌ಪೈಸಸ್,
	ಶೇ.36. ಎಸ್.ಎಲ್	ಕೆಮಿಕಲ್ಸ್, ಚೆನ್ನೈ	ಸಿರುಗುಪ್ಪ

ತುಮಕೂರು ನಗರದ ಶೆಟ್ಟಿಹಳ್ಳಿ ಗ್ರಾಮದಲ್ಲಿ ಗೃಹಮಂಡಳಿಗೆ ಭೂಸ್ವಾಧೀನ ಹಾಗೂ ಪರಿಹಾರ.

2828: (3737)

ಶ್ರೀ ಎಸ್.ಶಿವಣ್ಣ (ತುಮಕೂರು): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ನಗರದ ಶೆಟ್ಟಿಹಳ್ಳಿ ಗ್ರಾಮದಲ್ಲಿ ಗೃಹ ಮಂಡಳಿ ಭೂಸ್ವಾಧೀನ ಪ್ರಕ್ರಿಯೆ ಎಂದು ಪ್ರಾರಂಭಿಸಲಾಯಿತು; 4(1) 6(1)ರ ಅಧಿಸೂಚನೆಯನ್ನು ಎಂದು ಹೊರಡಿಸಲಾಯಿತು; ಅವಾರ್ಡ್ ಮಾಡಿದ ದಿನಾಂಕ ಯಾವುದು?

ಆ) ತುಮಕೂರು ನಗರದ ಶೆಟ್ಟಿಹಳ್ಳಿ ಗ್ರಾಮದಲ್ಲಿ 02-09-96 ರಂದು ಭೂಪರಿವರ್ತನೆಗೊಂಡ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದಿಂದ 07-03-87ರಂದು ಅನುಮೋದನೆ ಪಡೆದ ಸ.ನಂ. 15: 4ಬಿ ಹಾಗೂ 15: 6ರ 2-25 ಗುಂಟೆ ಜಮೀನನ್ನು ಕರ್ನಾಟಕ ಗೃಹ ಮಂಡಳಿ ಭೂಸ್ವಾಧೀನ ಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಜಮೀನಿಗೆ ನೀಡುವ ಪರಿಹಾರವನ್ನು ಯಾರ ಹೆಸರಿಗೆ ಅವಾರ್ಡ್ ಮಾಡಲಾಗಿದೆ?

ಈ) 1987ರಲ್ಲಿ 41 ನಿವೇಶನಗಳನ್ನು ವಿಂಗಡಿಸಿ ಮಾರಾಟ ಮಾಡಿದ್ದು, ಸದರಿ ನಿವೇಶನದ ಹಕ್ಕು ಹೊಂದಿರುವವರಿಗೆ ಮತ್ತು ಮನೆ ಕಟ್ಟಿರುವವರಿಗೆ ನೋಟೀಸು ನೀಡದೆ ಹಾಗೂ ಅವಾರ್ಡ್ ಮಾಡದೆ ಇರುವುದಕ್ಕೆ ಕಾರಣಗಳೇನು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):

ಅ) ಕರ್ನಾಟಕ ಗೃಹ ಮಂಡಳಿಯ ಸಂ.ಕಗೃಮಂ. ಭೂಸ್ವಾ 44: 91-92, ದಿನಾಂಕ 30-12-91 ರಲ್ಲಿ 4(1)ರ ಅಧಿಸೂಚನೆಯು ಅನುಮೋದನೆಗೊಂಡಿದ್ದು, ದಿನಾಂಕ 20-2-92ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿರುತ್ತದೆ. ಭೂಸ್ವಾಧೀನ ಕಾಯ್ದೆ ಕಲಂ 6(1)ರ ಅಧಿಸೂಚನೆಯ ಸಂಖ್ಯೆ: ಕಂ ಇ-59, ಭೂಸ್ವಾತು.93, ದಿನಾಂಕ 14-10-93ರಲ್ಲಿ ಸರ್ಕಾರದಿಂದ (ಕಂದಾಯ ಇಲಾಖೆ) ಅನುಮೋದನೆಗೊಂಡಿದ್ದು, ಸದರಿ ಅಧಿಸೂಚನೆಯು ದಿನಾಂಕ 4-11-93ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿರುತ್ತದೆ. ದಿನಾಂಕ 14-6-96ರಲ್ಲಿ ಅವಾರ್ಡ್ ತಯಾರಿಸಿದ್ದು, ಸರ್ಕಾರದ ಪತ್ರದ ಸಂಖ್ಯೆ: ಆರ್‌ಡಿ: 104: ಭೂಸ್ವಾತು.96, ದಿನಾಂಕ 23-9-96ರಲ್ಲಿ ಸರ್ಕಾರದಿಂದ (ಕಂದಾಯ ಇಲಾಖೆ) ಅನುಮೋದನೆಗೊಂಡಿದೆ.

ಆ) ಭೂಪರಿವರ್ತನೆ ಬಗ್ಗೆ ಆರ್.ಟಿ.ಸಿ.ಯಲ್ಲಿ ನಮೂದಾಗಿರುತ್ತದೆ.

ಇ) ಸರ್ವೆ ನಂ. 15: 4ಬಿ ಮತ್ತು 15: 6 ರಲ್ಲಿನ 2 ಎಕರೆ 25 ಗುಂಟೆ ಜಮೀನಿಗೆ ಸಿದ್ಧಯರವರ ಹೆಸರಿಗೆ ಅವಾರ್ಡ್ ತಯಾರಿಸಲಾಗಿದ್ದು, ದಾಖಲಾತಿಗಳನ್ನು ಹಾಜರ್‌ಪಡಿಸಿದ ನಂತರ ಗಂಗಯ್ಯ ಬಿನ್ ಲೇಟ್ ಸಿದ್ಧಯ್ಯನವರಿಗೆ ಪರಿಹಾರ ಹಣವನ್ನು ದಿನಾಂಕ 12-11-97ರಂದು ಪಾವತಿಸಲಾಗಿದೆ.

ಈ) ಭೂಪರಿವರ್ತನೆ ಬಗ್ಗೆ ಆರ್.ಟಿ.ಸಿ.ಯಲ್ಲಿ ನಮೂದಾಗಿದೆ. ಆದರೆ ಅವಾರ್ಡ್ ವಿಚಾರಣೆಗೆ ಭೂಮಾಲೀಕರು ಹಾಜರ್ ಆಗಿರುವುದಿಲ್ಲ. ಅವಾರ್ಡ್ ನೋಟೀಸ್ ಪಡೆದು ದಿನಾಂಕ 25-9-97 ರಂದು ಸ.ನಂ. 15: 4ಬಿ ಹಾಗೂ 15: 6 ರಲ್ಲಿನ 2 ಎಕರೆ 25 ಗುಂಟೆ ಜಮೀನನ್ನು ಮಂಡಳಿಯ ವಶಕ್ಕೆ ನೀಡಿರುತ್ತಾರೆ. ಆ ಸಮಯದಲ್ಲಿ ಜಮೀನಿನಲ್ಲಿ ಯಾವುದೇ ಮನೆ ಕಟ್ಟಡ ಇರುವುದಿಲ್ಲ. ಭೂಮಾಲೀಕರು ಅಥವಾ ನಿವೇಶನದಾರರು ನಿವೇಶನ ವಿಂಗಡಿಸಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ.

ತುಮಕೂರು ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದ ತೊಂದರೆಯಾದವರಿಗೆ ಪರಿಹಾರ.

2829: (3738)

ಶ್ರೀ ಎಸ್.ಶಿವಣ್ಣ, (ತುಮಕೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಿಂದ ಇಲ್ಲಿಯವರೆಗೂ ಅತಿವೃಷ್ಟಿ ದುರಂತ ಪರಿಹಾರ ಬಾಬ್ತಿಗೆ ಬಿಡುಗಡೆ ಮಾಡಿರುವ ಮೊಬಲಗೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಇದರಿಂದ ಪರಿಹಾರ ಪಡೆದ ತುಮಕೂರು ಜಿಲ್ಲೆಯ ಫಲಾನುಭವಿಗಳ ಸಂಖ್ಯೆ ಎಷ್ಟು?

ಇ) 1998-99ನೇ ಸಾಲಿನಲ್ಲಿ ತುಮಕೂರು ತಾಲ್ಲೂಕಿನಲ್ಲಿ ಅತಿವೃಷ್ಟಿ ದುರಂತದಿಂದ ತೊಂದರೆ ಹೊಂದಿದ ಕುಟುಂಬಗಳ ಸಂಖ್ಯೆ ಎಷ್ಟು? ಅವರುಗಳಿಗೆ ನೀಡಿದ ಪರಿಹಾರ ಮೊತ್ತವೆಷ್ಟು?

ಈ) ಕಸಬ ಹೋಬಳಿ ನರಸಾಪುರ ಗ್ರಾಮದ ಜನರಿಗೆ ಈ ವರ್ಷದಲ್ಲಿ ಅತಿವೃಷ್ಟಿಯಿಂದ ಆದ ತೊಂದರೆಗೆ ಸರ್ಕಾರ ಪರಿಹಾರ ಹಾಗೂ ಬೆಳೆ ಪರಿಹಾರ

ನೀಡಲಾಗಿದೆಯೇ?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) 1995-96ನೇ ಸಾಲಿನಿಂದ ಈವರೆಗೆ ಸರ್ಕಾರವು ಅತಿವೃಷ್ಟಿ ದುರಂತದ ಪರಿಹಾರಕ್ಕಾಗಿ ಬಿಡುಗಡೆಮಾಡಿದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ತುಮಕೂರು ಜಿಲ್ಲೆಯಲ್ಲಿ ಒಟ್ಟು 9,593 ಫಲಾನುಭವಿಗಳು ಪ್ರಕೃತಿ ನಿಧಿಯಿಂದ ಪರಿಹಾರವನ್ನು ಪಡೆದಿರುತ್ತಾರೆ.

ಇ) ತುಮಕೂರು ತಾಲ್ಲೂಕಿನಲ್ಲಿ ಒಟ್ಟು 436 ಕುಟುಂಬಗಳು ಅತಿವೃಷ್ಟಿ ದುರಂತಕ್ಕೆ ಒಳಗಾಗಿದ್ದು, ಈವರೆಗೆ ಈ ಸಂತ್ರಸ್ಥರಿಗೆ ರೂ 93,800-00ಗಳ ಪರಿಹಾರವನ್ನು ವಿತರಿಸಲಾಗಿದೆ.

ಈ) ಸೂಕ್ತ ಪರಿಹಾರವನ್ನು ನೀಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಅನುಬಂಧ

ಕ್ರ.ಸಂ	ಜಿಲ್ಲೆಗಳ ಹೆಸರು	1995-96	96-97	97-98	98-99
1.	ಬೆಂಗಳೂರು (ನಗರ)	-	30.00	-	92.00
2.	ಬೆಂಗಳೂರು (ಗ್ರಾ)	-	65.00	-	60.00
3.	ಕೋಲಾರ	-	65.00	10.00	75.00
4.	ತುಮಕೂರು	-	67.00	-	85.00
5.	ಚಿತ್ರದುರ್ಗ	-	45.00	-	110.00
6.	ದಾವಣಗೆರೆ	-	-	5.00	60.00
7.	ಶಿವಮೊಗ್ಗ	67-00	59.85	100.00	123.00
8.	ಮೈಸೂರು	-	100.00	-	50.00
9.	ಚಾಮರಾಜನಗರ	-	-	-	78.00
10.	ಮಂಡ್ಯ	-	110.00	25.00	215.00
11.	ಚಿಕ್ಕಮಗಳೂರು	7.83	50.00	75.00	60.00
12.	ಹಾಸನ	-	30.00	55.00	60.00
13.	ಕೊಡಗು	60.00	135.00	345.00	150.00
14.	ದಕ್ಷಿಣ ಕನ್ನಡ	45.00	105.00	285.00	254.50
15.	ಉಡುಪಿ	-	-	35.00	155.50
16.	ಗುಲ್ಬರ್ಗಾ	50.00	205.00	45.00	382.00
17.	ಬೀದರ್	10.00	60.00	-	233.00
18.	ರಾಯಚೂರು	10.00	252.20	20.00	329.00
19.	ಕೊಪ್ಪಳ	-	-	-	171.00

20.	ಬಳ್ಳಾರಿ	2.00	146.40	-	200.00
21.	ಬೆಳಗಾವಿ	2.99	120.00	67.50	100.00
22.	ಬಿಜಾಪುರ	3.02	195.00	17.50	430.00
23.	ಬಾಗಲಕೋಟೆ	-	-	-	110.00
24.	ಧಾರವಾಡ	15.14	120.00	30.00	110.00
25.	ಗದಗ	-	-	-	119.00
26.	ಹಾವೇರಿ	-	-	20.00	60.00
27.	ಉತ್ತರ ಕನ್ನಡ	35.00	110.00	206.00	136.00
28.	ಪಿ.ಡಬ್ಲ್ಯೂ.ಡಿ	-	-	-	400.00
29.	ನಿರ್ದೇಶಕರು				
	ಆರೋಗ್ಯ ಇಲಾಖೆ	-	-	-	100.00
30.	ಸಣ್ಣ ನೀರಾವರಿ	-	-	-	400.00
	ಒಟ್ಟು	307.98	2070.45	1391.00	4908.00

ಅನುಬಂಧ

ಕ್ರ.ಸಂ	ಜಿಲ್ಲೆಗಳ ಹೆಸರು	ಅತಿವೃಷ್ಟಿಗಾಗಿ ಮಾಡಿದ ಹಣ 31-10-98ರ ಅಂತ್ಯಕ್ಕೆ	ಅತಿವೃಷ್ಟಿಗಾಗಿ ಮಾಡಿದ ವೆಚ್ಚ 30-9-98ರ ಅಂತ್ಯಕ್ಕೆ
1.	ಬೆಂಗಳೂರು (ನಗರ)	92.00	3.98
2.	ಬೆಂಗಳೂರು (ಗ್ರಾ)	60.00	-
3.	ಕೋಲಾರ	75.00	3.12
4.	ತುಮಕೂರು	85.00	2.68
5.	ಚಿತ್ರದುರ್ಗ	110.00	-
6.	ದಾವಣಗೆರೆ	60.00	5.00
7.	ಶಿವಮೊಗ್ಗ	123.00	34.21
8.	ಮೈಸೂರು	50.00	3.26
9.	ಚಾಮರಾಜನಗರ	78.00	-
10.	ಮಂಡ್ಯ	215.00	23.83
11.	ಚಿಕ್ಕಮಗಳೂರು	60.00	15.00
12.	ಹಾಸನ	60.00	8-12
13.	ಕೊಡಗು	150.00	194.49
14.	ದಕ್ಷಿಣ ಕನ್ನಡ	254.50	50.40
15.	ಉಡುಪಿ	155.50	18.22
16.	ಗುಲ್ಬರ್ಗಾ	382.00	42.14
14.	ಬೀದರ್	233.00	113.18

15.	ರಾಯಚೂರು	319.00	6.79
16.	ಕೊಪ್ಪಳ	171.00	2.99
17.	ಬಳ್ಳಾರಿ	200.00	3.20
18.	ಬೆಳಗಾಂ	100.00	15.62
19.	ಬಿಜಾಪುರ	430.00	4.99
20.	ಬಾಗಲಕೋಟೆ	110.00	13.31
21.	ಬೆಳಗಾಂ	100.00	15.62
22.	ಬಿಜಾಪುರ	430.00	4.99
23.	ಬಾಗಲಕೋಟೆ	110.00	13.31
24.	ಧಾರವಾಡ	110.00	14.63
25.	ಗದಗ	119.00	-
26.	ಹಾವೇರಿ	60.00	19.39
27.	ಉತ್ತರ ಕನ್ನಡ	136.00	68.12
28.	ಸಣ್ಣ ನೀರಾವರಿ	400.00	-
29.	ಪಿ.ಡಬ್ಲ್ಯೂ.ಡಿ	400.00	-
30.	ಆರೋಗ್ಯ ಮತ್ತು ಕು.ಕಲ್ಯಾಣ	100.00	-
	ಒಟ್ಟು	4498.00	666.47

ಮೈಸೂರು ನಗರದಲ್ಲಿರುವ ಮುಜರಾಯಿ ದೇವಸ್ಥಾನಗಳು.

2830: (3844)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜಾ): ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮೈಸೂರು ನಗರ ವ್ಯಾಪ್ತಿಯಲ್ಲಿ ಬರುವ ಮುಜರಾಯಿ ಇಲಾಖೆಯ ದೇವಸ್ಥಾನಗಳು ಯಾವುವು?

2) ಈ ದೇವಸ್ಥಾನಗಳ ಧರ್ಮದರ್ಶಿಗಳು ಯಾರ್ಯಾರು (ಪ್ರತ್ಯೇಕ ವಿವರ ನೀಡುವುದು)?

3) ಶ್ರೀ ಚಾಮುಂಡೇಶ್ವರ ದೇವಸ್ಥಾನ ಚಾಮುಂಡಿಬೆಟ್ಟ ಇಲ್ಲಿನ ಧರ್ಮದರ್ಶಿಗಳು ಯಾರು ಯಾರು;

4) ಈ ಧರ್ಮದರ್ಶಿಗಳನ್ನು ನೇಮಕ ಮಾಡಿದ್ದು ಯಾವಾಗ ಇವರುಗಳ ಅವಧಿ ಎಷ್ಟು?

ಶ್ರೀ ಬಿ.ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):

1) ಮೈಸೂರು ನಗರ ವ್ಯಾಪ್ತಿಯಲ್ಲಿ ಒಟ್ಟು 20 ಮುಜರಾಯಿ ದೇವಾಲಯಗಳು ಇರುತ್ತವೆ. ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ದೇವಾಲಯದ ಹೆಸರು
1.	ಪ್ರಸನ್ನ ನಂಜುಂಡೇಶ್ವರ ದೇ: ಸಂತೇಪೇಟೆ, ಮೈಸೂರು
2.	ಶ್ರೀ ಶಾಂತೇಶ್ವರ ದೇ: ಸಯ್ಯಾಜಿರಾವ್ ರಸ್ತೆ, ಮೈಸೂರು
3.	ಶ್ರೀ ಪ್ರಸನ್ನ ವೆಂಕಟರಮಣ ದೇ: ಹಳೇಬಂಡಿಕೇರಿ ಮೈಸೂರು
4.	ಶ್ರೀ ಪಂಚಮುಖಿ ಆಂಜನೇಯ ದೇ: ಇರ್ವಿನ್ ರಸ್ತೆ, ಮೈಸೂರು
5.	ಶ್ರೀ ಮಹದೇಶ್ವರ ದೇ: ಅಶೋಕ ರಸ್ತೆ, ಮೈಸೂರು
6.	ಶ್ರೀ ಶಂಕರನಾರಾಯಣ ದೇ: ಚಾಮುಂಡಿಪುರಂ, ಮೈಸೂರು
7.	ಶ್ರೀ ಮಹಾಲಿಂಗೇಶ್ವರ ದೇ: ಲಿಂಗಾಂಬುಧಿ, ಮೈಸೂರು

8. ಶ್ರೀ ಆಂಜನೇಯ ದೇ: ಮಾನಂದವಾಡಿ ರಸ್ತೆ, ಮೈಸೂರು
9. ಶ್ರೀ ಚಮ್ಮನವಟ್ಟ ಬಸವೇಶ್ವರ ದೇ: ರಾಮಾನುಜ ರಸ್ತೆ, ಮೈಸೂರು
10. ಶ್ರೀ ಬಸವೇಶ್ವರ ದೇ: ಮಳಲವಾಡಿ ಕುವೆಂಪುನಗರ, ಮೈಸೂರು
11. ಶ್ರೀ ಮಾರಾಮ್ಮ ದೇ: ಹೆಬ್ಬಾಳು, ಮೈಸೂರು
12. ಶ್ರೀ ಬಸವೇಶ್ವರ ದೇ: ಪಡುವಾರಹಳ್ಳಿ, ಮೈಸೂರು
13. ಶ್ರೀ ಬೈರವ ದೇ: ಹನಕಲ್ಲು ಮೈಸೂರು
14. ಶ್ರೀ ಆಂಜನೇಯ ದೇ: ಈರನಗೆರೆ ಮೈಸೂರು
15. ಶ್ರೀ ಕೆಲ್ಲಮ್ಮ ದೇವರು ಹಿನಕಲ್ಲು ಮೈಸೂರು
16. ಶ್ರೀ ಸೋಮೇಶ್ವರ ದೇ: ಹೆಬ್ಬಾಳು ಮೈಸೂರು
17. ಹುಲಿಯಮ್ಮ ದೇವರು ದೇ: ಕ್ಯಾತಮಾರನಹಳ್ಳಿ ಮೈಸೂರು
18. ಶ್ರೀ ನವಸಾಲೆ ಆಂಜನೇಯ ದೇ: ಕೆಸರೆ ಮೈಸೂರು
19. ಶ್ರೀ ಬಸವೇಶ್ವರ ದೇ: ಚಿಲ್ಲಹರದನಹಳ್ಳಿ ಮೈಸೂರು
20. ಶ್ರೀ ಬಸಿಲು ಮಾರಮ್ಮ ದೇ: ಮೊಣಚಿಕೊಪ್ಪಲು ಮೈಸೂರು

2) ಮೈಸೂರು ನಗರದ 20 ದೇವಾಲಯಗಳ ಪೈಕಿ 2 ದೇವಾಲಯಗಳಲ್ಲಿ ಧರ್ಮದರ್ಶಿ ಸಮಿತಿ ರಚಿಸಲಾಗಿದೆ.

ಶ್ರೀ ಪ್ರಸನ್ನ ವೆಂಕಟರಮಣ ದೇವಸ್ಥಾನ ಹಳೇ ಬಂಡೀಕೇರಿ ಮೈಸೂರು	ಶ್ರೀ ಶಾಂತೇಶ್ವರ ದೇವಸ್ಥಾನ ಸಯ್ಯಾಜಿ ರಸ್ತೆ, ಮೈಸೂರು

ಸದಸ್ಯರ ಹೆಸರು.

1. ಶ್ರೀ ಎಂ.ಎನ್.ರಾಜು ಸಂಚಾಲಕ	1. ಶ್ರೀ ಎನ್.ಟಿ.ರವಿಕೀರ್ತಿ ಸಂಚಾಲಕ
2. ಶ್ರೀ ಗೂ.ಅ.ಶೆಟ್ಟಿ ಧರ್ಮದರ್ಶಿ	2. ಶ್ರೀ ಎಸ್.ಎಸ್.ದೇವೇಂದ್ರಯ್ಯ ಧರ್ಮದರ್ಶಿ

3. ಶ್ರೀ ಡಿ.ರಘು	3. ಶ್ರೀ ಕೆ.ರಭಚಂದ್ರ
4. ಶ್ರೀ ಎಂ.ಎನ್.ರಾಮಸ್ವಾಮಿ ಧರ್ಮದರ್ಶಿ	4. ಶ್ರೀ ಬಿ.ಬಿ.ನಿರುಪ್ ಧರ್ಮದರ್ಶಿ
5. ಶ್ರೀ ಎಂ.ಎನ್.ಶ್ರೀನಿವಾಸನ್ ಧರ್ಮದರ್ಶಿ	5. ಶ್ರೀ ಎಸ್.ಎನ್.ಪದ್ಮರಾಜ್ ಧರ್ಮದರ್ಶಿ
6. ಶ್ರೀ ಶಿವಣ್ಣ, ಧರ್ಮದರ್ಶಿ	6. ಶ್ರೀ ಬಿ.ಎನ್.ರವೀಂದ್ರಕುಮಾರ್ ಧರ್ಮದರ್ಶಿ
7. ಶ್ರೀ ಎಸ್.ವೆಂಕಟಾಚಲಂ ಧರ್ಮದರ್ಶಿ	7.ಶ್ರೀ ಬಿ.ಎನ್.ಜೀವನ್ ಕುಮಾರ್ ಧರ್ಮದರ್ಶಿ
8. ಶ್ರೀ ಆರ್.ವಸಂತ ಧರ್ಮದರ್ಶಿ	8. ಶ್ರೀ ಎನ್.ಎನ್.ಪದ್ಮಪ್ರಸಾದ್ ಧರ್ಮದರ್ಶಿ
9. ಶ್ರೀ ಹೆಚ್.ಟಿ.ರಾಮಸ್ವಾಮಿ ಧರ್ಮದರ್ಶಿ	9. ಶ್ರೀ ಕಲ್ಪನಾಸುರೇಶ್ ಜೈನ್ ಧರ್ಮದರ್ಶಿ
10. ಶ್ರೀ ಜಿ.ಲಿಂಗಯ್ಯ ಧರ್ಮದರ್ಶಿ	10. ಶ್ರೀ ಎಸ್.ಶಿವಣ್ಣ ಧರ್ಮದರ್ಶಿ
11. ಶ್ರೀ ಎಂ.ಕೆ.ಶ್ರೀನಿವಾಸ್ ಧರ್ಮದರ್ಶಿ	11.ಶ್ರೀ ಸುರೇಶ್‌ಕುಮಾರ್ ಜೈನ್ ಧರ್ಮದರ್ಶಿ
12. ಶ್ರೀ ದೇವಾಲಯದ ಅರ್ಚಕರು	12ದೇವಾಲಯದ ಅರ್ಚಕರು, ಧರ್ಮದರ್ಶಿ
ಸಮಿತಿ ಅವಧಿ 11-8-97 ರಿಂದ 10-8-2000ವರೆಗೆ	ಸಮತಿ ಅವಧಿ 10-5-98 ರಿಂದ 9-5-2001 ರವರೆಗೆ

3) ಪ್ರಸಕ್ತದಲ್ಲಿ ಧರ್ಮದರ್ಶಿ ಸಮಿತಿ ಚಾಲ್ತಿಯಲ್ಲಿ ಇರುವುದಿಲ್ಲ.

4) ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ವಾಹನಗಳ ನೋಂದಾವಣಿ

2834 (3739)

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ 1991-92ರಿಂದ ಪ್ರತಿ ವರ್ಷ ನೋಂದಾವಣೆಗೊಂಡ ದ್ವಿಚಕ್ರ, ತ್ರಿಚಕ್ರ, ನಾಲ್ಕು ಚಕ್ರದ ವಾಹನಗಳ ಸಂಖ್ಯೆ ಎಷ್ಟು?

ಆ) ಈ ನೋಂದಾವಣೆ ಮೂಲಕ ಸಂದಾಯವಾಗಿರುವ ರಸ್ತೆ ತೆರಿಗೆ ಮೊತ್ತ ಎಷ್ಟು?

ಇ) ಸುಪ್ರೀಂ ಕೋರ್ಟಿನ ತೀರ್ಪಿನ ಹಿನ್ನಲೆಯಲ್ಲಿ ಪರಿಸರ ಮಾಲಿನ್ಯಕ್ಕೆ ಕಾರಣವೆಂದು ಹೇಳಲಾಗಿರುವ 20 ವರ್ಷ ಕಳೆದಿರುವ ಸಾರ್ವಜನಿಕ ವಾಹನಗಳನ್ನು ಪ್ರತಿಬಂಧಿಸಲು ಕೈಗೊಂಡಿರುವ ಕ್ರಮವೇನು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ವಿವರಗಳು ಈ ಕೆಳಕಂಡಂತಿದೆ.

ವರ್ಷ	ದ್ವಿಚಕ್ರ ವಾಹನ	ತ್ರಿಚಕ್ರ ವಾಹನ (ಆಟೋರಿಕ್ಷಾ)	ನಾಲ್ಕು ಚಕ್ರ ವಾಹನ (ಕಾರು)
1991-92	41269	4928	4460
1992-93	36897	3285	6115
1993-94	37607	3280	8640
1994-95	51188	3361	11047
1995-96	80256	4617	13643
1996-97	53426	7477	16710
1997-98	70888	6218	14270
ಒಟ್ಟು	371531	33166	74885

ಆ) ವಿವರಗಳು ಈ ಕೆಳಕಂಡಂತಿದೆ.

ವರ್ಷ	ದ್ವಿಚಕ್ರ ವಾಹನ	ತ್ರಿಚಕ್ರ ವಾಹನ (ಆಟೋರಿಕ್ಷಾ)	ನಾಲ್ಕು ಚಕ್ರ ವಾಹನ (ಕಾರು)(ರೂ.ಗಳಲ್ಲಿ)
1991-92	48181600	1204880	4340804
1992-93	43930550	967460	4751664
1993-94	42139940	986000	6814462
1994-95	71346900	2869120	10135797
1995-96	122545675	6207540	14191 5180
1996-97	133178100	12834150	18983981 0
1997-98	160065790	11642700	257147698

ಇ) ವಾಹನ ಆಯಸ್ಸನ್ನು ನಿಗಧಿಪಡಿಸುವ ಬಗ್ಗೆ ಕೇಂದ್ರ ಸರ್ಕಾರವು 1988ರ ಮೋಟಾರು ವಾಹನ ಕಾಯ್ದೆಯ ಕಲಂ 59(1)ರಂತೆ ಅಧಿಸೂಚನೆಯನ್ನು ಹೊರಡಿಸಬೇಕಾಗುತ್ತದೆ. ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯಾದ್ಯಂತ ಗುರುತಿಸಿರುವ ಕೊಳಚೆ ಪ್ರದೇಶಗಳು

2835: 3836)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದ್ಯಂತ ಗುರುತಿಸಿರುವ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು; (ಜಿಲ್ಲೆ ಮತ್ತು ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರದ ಕೆಲವು ಕೊಳಚೆ ಪ್ರದೇಶಗಳನ್ನು ಹೊಸದಾಗಿ ಸೇರಿಸಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು):

ಅ) 2104 (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ

ಲಗತ್ತಿಸಿದೆ)

ಆ) ಈಗಾಗಲೇ ಹೊಸದಾಗಿ 11 ಕೊಳಚೆ ಪ್ರದೇಶಗಳನ್ನು ಗುರುತಿಸಿದ್ದು, ಘೋಷಿಸಲು ಕ್ರಮ ಕೈಗೊಳ್ಳಬೇಕಾಗಿದೆ.

ಜಿಲ್ಲಾವಾರು ಮತ್ತು ತಾಲ್ಲೂಕುವಾರು ಗುರುತಿಸಿರುವ ಕೊಳಚೆ ಪ್ರದೇಶಗಳ ವಿವರಗಳು.

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಕೊಳಚೆ ಪ್ರದೇಶಗಳ ಸಂಖ್ಯೆ.
ಬೆಂಗಳೂರು ಜಿಲ್ಲೆ		
1.	ಬೆಂಗಳೂರು ನಗರ	344
2.	ಅನೆಕಲ್	6
ಬೆಂಗಳೂರು ಗ್ರಾಮಾಂತರ		
1.	ಕನಕಪುರ	5
2.	ದೊಡ್ಡಬಳ್ಳಾಪುರ	11
3.	ದೇವನಹಳ್ಳಿ	17
4.	ಚನ್ನಪಟ್ಟಣ	9
5.	ಮಾಗಡಿ	6
6.	ರಾಮನಗರ	7
7.	ಹೊಸಕೋಟೆ	1
ತುಮಕೂರು ಜಿಲ್ಲೆ		
1.	ತುಮಕೂರು	17
2.	ಸಿರ	16
3.	ಮಧುಗಿರಿ	15
4.	ಸಿ.ಎನ್.ಹಳ್ಳಿ	11
5.	ಕುಣಿಗಲ್	7
6.	ತಿಪಟೂರು	15

7.	ಗುಬ್ಬಿ	1
8.	ಕೊರಟಗೆರೆ	4

ಕೋಲಾರ ಜಿಲ್ಲೆ

1.	ಕೋಲಾರ	12
2.	ಬಂಗಾರ ಪೇಟೆ	3
3.	ಕೆ.ಜಿ.ಎಫ್	7
4.	ಮಾಲೂರು	1
5.	ಚಿಕ್ಕಬಳ್ಳಾಪುರ	8
6.	ಗೌರಿಬಿದನೂರು	4
7.	ಶಿಡ್ಲಘಟ್ಟ	4
8.	ಮುಳುಬಾಗಿಲು	16
9.	ಚಿಂತಾಮಣಿ	15
10.	ಶ್ರೀನಿವಾಸಪುರ	2
11.	ಗುಡಿಬಂಡೆ	1
12.	ಬಾಗೇಪಲ್ಲಿ	2

ಮೈಸೂರು ಜಿಲ್ಲೆ

1.	ಮೈಸೂರು	52
2.	ನಂಜನಗೂಡು	11
3.	ಕೆ.ಆರ್.ನಗರ	5
4.	ಪಿರಿಯಾಪಟ್ಟಣ	1
5.	ಬನ್ನೂರು	2

6.	ಟಿ.ನರಸೀಪುರ	4
7.	ಹುಣಸೂರು	10
8.	ಹೆಚ್.ಡಿ.ಕೋಟೆ	5

ಮಂಡ್ಯ ಜಿಲ್ಲೆ

1.	ಮಂಡ್ಯ	24
2.	ಮದ್ದೂರು	4
3.	ಶ್ರೀರಂಗಪಟ್ಟಣ	4
4.	ಪಾಂಡವಪುರ	4
5.	ಮಳವಳ್ಳಿ	8
6.	ನಾಗಮಂಗಲ	7
7.	ಕೆ.ಆರ್.ಪೇಟೆ	4

ಚಾಮರಾಜನಗರ ಜಿಲ್ಲೆ

1.	ಚಾಮರಾಜನಗರ	20
2.	ಕೊಳ್ಳೇಗಾಲ	13
3.	ಗುಂಡ್ಲುಪೇಟೆ	8
4.	ಯಳಂದೂರು	11

ಕೊಡಗು ಜಿಲ್ಲೆ

1.	ವೀರಾಜಪೇಟೆ	6

ಶಿವಮೊಗ್ಗ ಜಿಲ್ಲೆ

1.	ಶಿವಮೊಗ್ಗ	30
2.	ಸಾಗರ	25

3.	ಶಿರಾಳಕೊಪ್ಪ	5
4.	ಶಿಕಾರಿಪುರ	14
5.	ನ್ಯಾಮತಿ	2
6.	ಚನ್ನಗಿರಿ	8
7.	ಸೊರಬ	8
8.	ಕುಂಸಿ	7
9.	ಹೊನ್ನಾಳಿ	4
10.	ಭದ್ರಾವತಿ	32
11.	ತೀರ್ಥಹಳ್ಳಿ	5

ಚಿತ್ರದುರ್ಗ ಜಿಲ್ಲೆ

1.	ಚಿತ್ರದುರ್ಗ	13
2.	ಹಿರಿಯೂರು	11
3.	ಚಳ್ಳಕೆರೆ	3

ದಾವಣಗೆರೆ ಜಿಲ್ಲೆ

1.	ದಾವಣಗೆರೆ	30
2.	ಹರಿಹರ	7
3.	ಹೊಳಲ್‌ಕೆರೆ	5
4.	ಜಗಳೂರು	3
5.	ಮಾಯಕೊಂಡ	6
6.	ಮೊಳಕಾಲ್‌ಮೂರು	1
7.	ಹೊಸದುರ್ಗ	1

ಹಾಸನ ಜಿಲ್ಲೆ

1.	ಹಾಸನ	19
2.	ಅರಸೀಕೆರೆ	7
3.	ಹೊಳೆನರಸೀಪುರ	16
4.	ಚನ್ನರಾಯಪಟ್ಟಣ	9
5.	ಅರಕಲಗೂಡು	16
6.	ಸಕಲೇಶಪುರ	2
7.	ಬೇಲೂರು	14
8.	ಅಲೂರು	7

ಚಿಕ್ಕಮಂಗಳೂರು ಜಿಲ್ಲೆ

1.	ಚಿಕ್ಕಮಂಗಳೂರು	10
2.	ತರೀಕೆರೆ	8
3.	ಕಡೂರು	16
4.	ಬೀರೂರು	15
5.	ಮೂಡಿಗೆರೆ	2

ದಕ್ಷಿಣ ಕನ್ನಡ ಜಿಲ್ಲೆ

1.	ಮಂಗಳೂರು	8
2.	ಮೂಡಬಿದರೆ	10
3.	ಸುಣ್ಣೆ	2

ಉಡುಪಿ ಜಿಲ್ಲೆ

1.	ಉಡುಪಿ	1

2.	ಬೈಂದೂರು	2
3.	ಕಾರ್ಕಳ	9

ಹುಬ್ಬಳ್ಳಿ ಧಾರವಾಡ

1.	ಧಾರವಾಡ	30
2.	ಹುಬ್ಬಳ್ಳಿ	33
3.	ಮುಳಗುಂದ	5
4.	ನವಲಗುಂದ	7
5.	ಲಕ್ಷ್ಮೇಶ್ವರ	7
6.	ಅರುಣಾವರ	4
7.	ಅಣ್ಣಿಗೇರಿ	3
8.	ಕಲಘಟಗಿ	3
9.	ಕುಂದಗೋಳ	3

ಹಾವೇರಿ ಜಿಲ್ಲೆ

1.	ಹಾವೇರಿ	8
2.	ಸವಣೂರು	7
3.	ಹಾನಗಲ್	13
4.	ಶಿಗ್ಗಾಂವ್	7
5.	ರಾಣಿಬೆನ್ನೂರು	8
6.	ಬ್ಯಾಡಗಿ	6
7.	ಹೀರೆಕೆರೂರು	6

ಗದಗ ಜಿಲ್ಲೆ

1.	ಗದಗ	13
2.	ರೋಣ	3
3.	ಮುಂಡರಗಿ	8
4.	ನರಗುಂದ	3

ಉತ್ತರ ಕನ್ನಡ ಜಿಲ್ಲೆ

1.	ಕಾರವಾರ	2
2.	ಶಿರಸಿ	11
3.	ಹಳಿಯಾಳ	14
4.	ದಾಂಡೇಲಿ	6
5.	ಭಟ್ಕಳ	11
6.	ಹೊನ್ನಾವರ	7
7.	ಸಿದ್ದಾಪುರ	2
8.	ಮುಂಡುಗೋಳ	6
9.	ಯಲ್ಲಾಪುರ	3
10.	ಕುಮ್ಮಟ	1
11.	ಅಂಕೋಲ	1

ಬಳ್ಳಾರಿ ಜಿಲ್ಲೆ

1.	ಬಳ್ಳಾರಿ	38
2.	ಹೊಸಪೇಟೆ	67
3.	ಹರಪ್ಪನಹಳ್ಳಿ	14

4.	ಸಂಡೂರು	2
5.	ಕೊಟ್ಟೂರು	7
6.	ಶಿರಗುಪ್ಪ	13
7.	ಹೂವಿನ ಹಡಗಲಿ	7

ರಾಯಚೂರು ಜಿಲ್ಲೆ

1.	ರಾಯಚೂರು	43
2.	ಮಾನ್ವಿ	9
3.	ಸಿಂಧನೂರು	10
4.	ಲಿಂಗಸಗೂರು	10
5.	ದೇವದುರ್ಗ	2

ಕೊಪ್ಪಳ ಜಿಲ್ಲೆ

1.	ಕೊಪ್ಪಳ	19
2.	ಕುಷ್ಟಗಿ	3
3.	ಯಲಬುರ್ಗ	4
4.	ಗಂಗಾವತಿ	29

ಬಿಜಾಪುರ ಜಿಲ್ಲೆ

1.	ಬಿಜಾಪುರ	50
2.	ಬಸವನ ಬಾಗೇವಾಡಿ	3
3.	ಮುದ್ದೇಬಿಹಾಳ	3
4.	ತಾಳಿಕೋಟೆ	5
5.	ಹಿಂಡಿ	5

6.	ಸಿಂದಗಿ	2
7.	ರಬಕವಿ ಬನಹಟ್ಟಿ	17
8.	ತೇರದಾಳ	24
9.	ಮಹಾಲಿಂಗಪುರ	4
10.	ಕೆರೂರು	7
11.	ಇಳಕಲ್	4

ಬೆಳಗಾಂ ಜಿಲ್ಲೆ

1.	ಬೆಳಗಾಂ	9
2.	ಖಾನಪುರ	3
3.	ಹುಕ್ಕೇರಿ	1
4.	ಸಂಕೇಶ್ವರ	5
5.	ಬೈಲಹೊಂಗಲ	6
6.	ಸವದತ್ತಿ	3
7.	ರಾಮದುರ್ಗ	1
8.	ಚಿಕ್ಕೋಡಿ	5
9.	ನಿಪ್ಪಾಣಿ	2
10.	ರಾಯಭಾಗ್	13
11.	ಕುಡಚಿ	14
12.	ಗೋಕಾಕ್	6
13.	ಮೂಡಲಗಿ	9
14.	ಕೊನ್ನೂರು	3

15.	ಅಥಣಿ	4
ಬಾಗಲಕೋಟೆ ಜಿಲ್ಲೆ		
1.	ಬಾಗಲಕೋಟೆ	9
2.	ಹುನಗುಂದ	2
3.	ಬಾದಾಮಿ	10
4.	ಮುಧೋಳ್	6
5.	ಜಮಖಂಡಿ	11
ಗುಲ್ಬರ್ಗಾ ಜಿಲ್ಲೆ		
1.	ಗುಲ್ಬರ್ಗಾ	28
2.	ಆಳಂದ	9
3.	ಸುರಪುರ	12
4.	ಷಹಾಪುರ	10
5.	ಯಾದ್‌ಗಿರಿ	20
ಇ) ಅರಣ್ಯ (ಸಂರಕ್ಷಣಾ) ಕಾಯಿದೆ 1980ರ ಪ್ರಕಾರ, ಯಾವುದೇ ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಕ್ಕಾಗಿ ಬಿಡುಗಡೆ ಮಾಡಬೇಕಾಗಿದ್ದಲ್ಲಿ, ಕೇಂದ್ರ ಸರ್ಕಾರದ ಪೂರ್ವಾನುಮತಿಯನ್ನು ಪಡೆಯಬೇಕಾಗುತ್ತದೆ. ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯದ ಹೊರತು ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಗಳಿಗಾಗಿ ಬಳಸಲು ಕಾನೂನು ಪ್ರಕಾರ ಆಸ್ಪದವಿರುವುದಿಲ್ಲ. ಕಿಲಾರಹಳ್ಳಿ ಕೆರೆ ನಿರ್ಮಾಣಕ್ಕೆ ಮತ್ತು ಚಿಕ್ಕಸಂದ್ರ ಕಾದಿಟ್ಟ ಅರಣ್ಯ ಪ್ರದೇಶದಲ್ಲಿ 66 ಕೆ.ವಿ. ಕೆ.ಇ.ಬಿ. ಲೈನ್ ಎಳೆಯಲು ಅರಣ್ಯ ಭೂಮಿ ಬಿಡುಗಡೆಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರದ ಅನುಮೋದನೆ ಪಡೆಯಲು ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದ ಅನುಮೋದನೆ ಬಂದನಂತರ, ಅರಣ್ಯ ಜಮೀನನ್ನು ಬಿಡುಗಡೆ ಮಾಡಲು ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು.

ಹೈಕೋರ್ಟಿನಲ್ಲಿ ದಾಖಲಾದ ಪ್ರಕರಣಗಳು

2872:(3858)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಕಾನೂನು ಸಂಸದೀಯ ವ್ಯವಹಾರ ಶಾಸನ ರಚನೆ ವಾರ್ತಾ ಮತ್ತು ಪ್ರಚಾರ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಹೈಕೋರ್ಟಿನಲ್ಲಿ ದಿನಾಂಕ 1-1-98ರಿಂದ 30-9-98ರವರೆಗೆ ದಾಖಲಾದ ದಾವೆಗಳ ಒಟ್ಟು ಸಂಖ್ಯೆ ಎಷ್ಟು? ಚಾಲ್ತಿಯಲ್ಲಿರುವ ಒಟ್ಟು ಪ್ರಕರಣಗಳ ಸಂಖ್ಯೆ ಎಷ್ಟು?

ಆ) ಪ್ರಕರಣಗಳ ಶೀಘ್ರ ವಿಲೇವಾರಿಗಾಗಿ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಸಚಿವರು):

ಅ) ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ದಿನಾಂಕ 1-1-98ರಿಂದ 30-9-98ರವರೆಗೆ 53,328 ಪ್ರಕರಣಗಳು ದಾಖಲಾಗಿದ್ದು ದಿನಾಂಕ 1-10-98ರಲ್ಲಿದ್ದಂತೆ 94,972 ಪ್ರಕರಣಗಳು ಬಾಕಿ ಇರುತ್ತವೆ.

ಆ) ಉಚ್ಚನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಶೀಘ್ರ ವಿಲೇವಾರಿ ಮಾಡಲು ರಾಜ್ಯ ಸರ್ಕಾರವು ಯಾವುದೇ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವದಿಲ್ಲ.

ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ

2873:(3857)

ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಅಂಕೋಲಾ ರೈಲು ಮಾರ್ಗದ ಸಲುವಾಗಿ ಸರ್ವೆ ನಡೆಸಲಾಗುತ್ತಿದೆಯೇ?

ಆ) ಈ ಬಗ್ಗೆ ಭೂ ಸ್ವಾಧೀನ ಪಡಿಸಿಕೊಳ್ಳುವ ಕೆಲಸ ಪ್ರಾರಂಭವಾಗಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಎಷ್ಟು ಭೂಮಿಯನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗುವುದು?

ಈ) ಕೇಂದ್ರ ಸರ್ಕಾರ ಈ ರೈಲು ಮಾರ್ಗದ ಸರ್ವೆಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ಈ ಯೋಜನೆ ಎಂದು ಕಾರ್ಯಗತವಾಗವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಸರ್ವೆ ಕೆಲಸವು ಮುಗಿದಿದೆ.

ಆ) ಇಲ್ಲ.

ಇ) ಸುಮಾರು 4125 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬಹುದೆಂದು ಅಂದಾಜು ಮಾಡಲಾಗಿದೆ.

ಈ) ಕೇಂದ್ರ ಸರ್ಕಾರವು ಈ ಕೆಳಗಿನಂತೆ ಹಣವನ್ನು ಬಿಡುಗಡೆ ಮಾಡಿದೆ:-

1) 1996-97 - 1.00 ಲಕ್ಷ ರೂ.

2) 1997-98 - 100.00 ಲಕ್ಷ ರೂ.

3) 1998-99 - 10.00 ಕೋಟಿ ರೂ.ಗಳು.

ಈ ಯೋಜನೆ ಕಾರ್ಯಗತವಾಗುವ ಬಗ್ಗೆ ಕೇಂದ್ರ ಸರ್ಕಾರವು ನಿರ್ಧರಿಸಬೇಕಾದ ವಿಷಯವಾಗಿರುತ್ತದೆ.

ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆ ಕಟ್ಟಡಗಳ ನಿರ್ವಹಣೆ.

2874:(3859)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿಯ 'ಕಿಮ್ಸ್' ಆಸ್ಪತ್ರೆ ಕಟ್ಟಡಗಳ ನಿರ್ವಹಣೆಗಾಗಿ ಕಳೆದ ಮೂರು ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಯಿಂದ ಮಾಡಿದ ವೆಚ್ಚ ಎಷ್ಟು?

ಆ) ಆ ಬಗ್ಗೆ ಕೈಗೊಂಡ ಕಾಮಗಾರಿಗಳಾವುವು?

ಇ) ಕೈಗೊಳ್ಳಬೇಕಾಗಿರುವ ಕಾಮಗಾರಿಗಳು ಯಾವುವು; ಅದಕ್ಕಾಗಿ ನಿಗದಿಪಡಿಸಲಾದ ಹಣ ಎಷ್ಟು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ಖರ್ಚು ಮಾಡಿದ ವಿವರ ಈ ಕೆಳಗಿನಂತಿದೆ.

(ಅ) 1996-97-ರೂ. 12.25 ಲಕ್ಷ

(ಆ) 1997-98-ರೂ. 6.36 ಲಕ್ಷ

ಬಾಕಿ ಬಿಲ್ಲು-ರೂ. 5.73 ಲಕ್ಷ

(ಇ) 1998-99-ರೂ. 3.50 ಲಕ್ಷ 9:98ರವರೆಗೆ

ಆ) ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿಗಳು ಮತ್ತು ತುರ್ತು ದುರಸ್ತಿ ಕಾಮಗಾರಿಗಳು

ಇ) 1) 4 ಇಂಚಿನ ಅಂಡರ್‌ಗ್ರೌಂಡ್ ಡ್ರೇನೇಜ್‌ನ ಪೈಪ್‌ಲೈನ್ ಅನ್ನು 9 ಇಂಚಿನ ಪೈಪ್‌ಲೈನ್‌ಗೆ ಬದಲಾಯಿಸುವುದು.

2) ಎಲ್ಲಾ ಶೌಚಾಲಯಗಳ ಪೈಪ್‌ಗಳನ್ನು (ಡೌನ್‌ಟೇಕ್) ಬದಲಾಯಿಸುವುದು.

3) 52 ಬ್ಲಾಕ್‌ಗಳಲ್ಲಿರುವ ಶೌಚಾಲಯಗಳ ದುರಸ್ತಿ

4) ಕಡಪಾ ಕಲ್ಲಿನಿಂದ ಆಸ್ಪತ್ರೆ ವಾರ್ಡ್ ಸುತ್ತಲೂ ಫ್ಲಾಗಿಂಗ್ ಮಾಡುವುದು.

5) ನೀರು ಸರಬರಾಜು ಮಾಡುವ ಪೈಪ್‌ಗಳನ್ನು ಬದಲಾಯಿಸುವುದು.

6) ಒಡೆದ ಕಿಟಕಿಗಳ ಗಾಜು ಮತ್ತು ಬಾಗಿಲುಗಳ ದುರಸ್ತಿ ಮಾಡುವುದು ಕಿಮ್ಸ್ ಆವರಣ ನಿರ್ವಹಣೆಗೆ ರೂ. 8.82 ಲಕ್ಷ ಹಾಗೂ ಆಸ್ಪತ್ರೆ ನಿರ್ವಹಣೆಗೆ ರೂ. 2.53 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

ಹುಬ್ಬಳ್ಳಿಯಲ್ಲಿರುವ ಸಹಕಾರಿ ವಸತಿ ಗೃಹಗಳು.

2875:(3860)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿಯಲ್ಲಿರುವ ಸರಕಾರಿ ವಸತಿಗೃಹಗಳನ್ನು ಲೋಕೋಪಯೋಗಿ ಇಲಾಖೆಯ ವಸತಿಗೃಹಗಳನ್ನು ಸರಿಯಾಗಿ ನಿರ್ವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಇ) ಕಳೆದ ಮೂರು ವರ್ಷಗಳಲ್ಲಿ ಆ ಬಗ್ಗೆ ಮಾಡಿದ ವೆಚ್ಚ ಎಷ್ಟು; ಈ ಕಾಮಗಾರಿಗಳು ಯಾವುವು? (ವಿವರ ನೀಡುವುದು)

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಸದರಿ ವಸತಿಗೃಹಗಳ ನಿರ್ವಹಣೆಯನ್ನು ವಾರ್ಷಿಕ ನಿರ್ವಹಣೆ ಅನುದಾನದಲ್ಲಿ ಸರಿಯಾಗಿ ಮಾಡಲಾಗುತ್ತಿದೆ.

ಆ) ವಾರ್ಷಿಕ ನಿರ್ವಹಣೆ ಅನುದಾನದಲ್ಲಿ ನಿರ್ವಹಿಸಲಾಗುತ್ತಿದೆ.

ಇ) ಕಳೆದ ಮೂರು ವರ್ಷಗಳಲ್ಲಿ ಮಾಡಿದ ವೆಚ್ಚ ಈ ಕೆಳಕಂಡಂತಿದೆ.

1995-96-ರೂ.9.94 ಲಕ್ಷ

1996-97-ರೂ. 12.07 ಲಕ್ಷ

1997-98- ರೂ.7.01 ಲಕ್ಷ ಸಾಮಾನ್ಯ ವಾರ್ಷಿಕ ದುರಸ್ತಿ ಕಾರ್ಯಗಳಾದ ಸುಣ್ಣ-ಬಣ್ಣ ಡ್ರೈನೇಜ್ ದುರಸ್ತಿ, ಬಾಗಿಲು ಕಿಟಕಿಗಳ ದುರಸ್ತಿ, ಸೋರುವಿಕೆ ತಡೆಯುವುದು ಇತ್ಯಾದಿಗಳಿಗೆ ಈ ಹಣವನ್ನು ಖರ್ಚು ಮಾಡಲಾಗಿದೆ.

ಹುಬ್ಬಳ್ಳಿಯಲ್ಲಿ ಪ್ರಾಚೀನ ಸಂಗ್ರಹಾಲಯ ಸ್ಥಾಪನೆ.

2876:(3861)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಿಣ): ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಉತ್ತರ ಕರ್ನಾಟಕದಲ್ಲಿರುವ ಪ್ರಾಚೀನ ಪರಂಪರೆಯನ್ನು ಪ್ರತಿಬಿಂಬಿಸುವ ಅನೇಕ ದೇವಾಲಯಗಳು, ವಿವಿಧ ಧಾರ್ಮಿಕ ಕೇಂದ್ರಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇವುಗಳ ಸಂರಕ್ಷಣೆ ಹಾಗೂ ಪ್ರಚಾರಕ್ಕಾಗಿ ಹುಬ್ಬಳ್ಳಿಯಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲಾಗುವುದೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀಮತಿ.ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ಬಂದಿದೆ. ಹುಬ್ಬಳ್ಳಿ ಅಥವಾ ಧಾರವಾಡದಲ್ಲಿ ಪ್ರಾಚ್ಯ ವಸ್ತು ಸಂಗ್ರಹಾಲಯವನ್ನು ಅನುದಾನ ಲಭ್ಯತೆಗನುಗುಣದಾಗಿ ಆರಂಭಿಸಲು ಉದ್ದೇಶಿಸಿದೆ.

ಆ) ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯಗಳನ್ನು ಆರಂಭಿಸಲು ಯೋಜನೆ ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯಲ್ಲಿ ಮುಂದೆ ಲಭ್ಯವಾಗುವ ಅನುದಾನಕ್ಕನುಗುಣವಾಗಿ ಹುಬ್ಬಳ್ಳಿ ಇಲ್ಲವೇ ಧಾರವಾಡದಲ್ಲಿ ಸಂಗ್ರಹಾಲಯವನ್ನು ಆರಂಭಿಸಲು ಪರಿಗಣಿಸಲಾಗವುದು.

ಮಂಗಳೂರು ತಾಲ್ಲೂಕಿನಲ್ಲಿರುವ ಅರಣ್ಯ ಭೂಮಿ.

2879:(3942)

ಶ್ರೀ ಕೆ.ಜಯರಾಮ ಶೆಟ್ಟಿ (ಉಳ್ಳಾಲ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮಂಗಳೂರು ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯ ಜಮೀನಿನ ವಿಸ್ತೀರ್ಣವೆಷ್ಟು?

2) ಯಾವ ಯಾವ ಗ್ರಾಮದಲ್ಲಿ ಎಷ್ಟು ಎಕರೆ?

3) ಅರಣ್ಯ ಇಲಾಖಾ ಭೂಮಿಯಲ್ಲಿ ವಾಸದ ಮನೆಗಳನ್ನು ನಿರ್ಮಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು):

1 ಮತ್ತು 2) ರಕ್ಷಿತಾರಣ್ಯ ಯಾವುದೂ ಇರುವುದಿಲ್ಲ. ಕಂದಾಯ ಇಲಾಖೆಯಿಂದ ಹಸ್ತಾಂತರಿಸಲಾದ ಜಮೀನುಗಳಲ್ಲಿ ನೆಡುತೋಪು ಬೆಳೆಸಲಾಗಿದೆ. ಅಂತಹ ಭೂಮಿಯ ವಿವರಗಳು ಕೆಳಗಿನಂತಿದೆ;

ಕ್ರಮಸಂಖ್ಯೆ	ಗ್ರಾಮದ ಹೆಸರು	ವಿಸ್ತೀರ್ಣ (ಎಕರೆಗಳಲ್ಲಿ)
1)	ಬಡಗ ಎಕ್ಕಾರು	188.54
2)	ತೆಂಕ ಎಕ್ಕಾರು	33.09
3)	ವಾಮಂಜೂರು	152.76
4)	ಕಳವಾರ	19.77
5)	ಬಜ್ಪೆ	10.50
6)	ದೇವಲಂತಬೆಟ್ಟು	48.92
7)	ಮುಚ್ಚೂರು	20.24
8)	ಮರವೂರು	12.26
9)	ಬಡಗ ಎಡಪದವು	24.71
10)	ಜಪ್ಪಿ ನಮೊಗ್ರು	24.71
11)	ತೆಂಕ ಎಡಪದವು	46.85
12)	ಕಂದಾವರ	4.94
		587.48 ಅಥವಾ 237.75 ಹೆ

3) ಹಸ್ತಾಂತರಿಸಿದ ಭೂಮಿಯಲ್ಲಿ ವಾಸದ ಮನೆಗಳು ಇವೆ. ಅರಣ್ಯ ಇಲಾಖಾ ವಶದಲ್ಲಿರುವ ಈ ಭೂಮಿಯ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಕರಾವಳಿಯಲ್ಲಿ ಮೀನುಗಾರಿಕೆ ಸೌಲಭ್ಯಗಳು

2880:(3940)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ) ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ

ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರ ಮೀನುಗಾರರಿಗೆ ಡೀಸೆಲ್ಸ್ ಸಬ್ಸಿಡಿ ಕೊಡುವ ವಿಚಾರದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮವೇನು?

ಆ) ಮೀನುಗಾರಿಕೆಯನ್ನು ಕೃಷಿಯನ್ನಾಗಿ ಪರಿಗಣಿಸುವುದು ಹಾಗೂ ಮೀನುಗಾರರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸುವ ಬಗ್ಗೆ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮವೇನು?

ಇ) ಸಾಂಪ್ರದಾಯಿಕ ಮೀನುಗಾರಿಕೆ (ವಿಲ್‌ನೆಟ್)ಗೆ ಪಡಿತರ ವ್ಯವಸ್ಥೆಯಲ್ಲಿ ಸೀಮೆಎಣ್ಣೆ ಒದಗಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?

ಈ) ದೇಶದ ಕರಾವಳಿ ರಾಜ್ಯಗಳಾದ ಗುಜರಾತ್, ಮಹಾರಾಷ್ಟ್ರ, ಕೇರಳ, ಆಂಧ್ರ ಪ್ರದೇಶ್‌ಗಳಲ್ಲಿ ಮೀನುಗಾರಿಕೆಗೆ ಸಿಗುತ್ತಿರುವ ಈ ಸೌಲಭ್ಯವನ್ನು ಕರ್ನಾಟಕ ಮೀನುಗಾರರಿಗೆ ಒದಗಿಸಲು ಕ್ರಮ ಕೈಗೊಳ್ಳಲಾಗವುದೇ?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಮಿನುಗಾರಿಕ ಮತ್ತು ಬಂದರು ರಾಜ್ಯ ಸಚಿವರು):

ಅ) ಮೀನುಗಾರರಿಗೆ ಡೀಸೆಲ್ ಮೇಲಿನ ರಾಜ್ಯ ಮಾರಾಟ ಕರದಲ್ಲಿ ಪ್ರತಿ ಲೀಟರ್‌ಗೆ 52 ಪೈಸೆ ಸಹಾಯಧನ ನೀಡಲಾಗುತ್ತದೆ.

ಆ) ಸರ್ಕಾರದ ಅಧಿಸೂಚನೆ ಸಂ: ಎಲ್‌ಎಡಬ್ಲ್ಯೂ 36 ಎಲ್‌ಬಿಎನ್ 95, ದಿನಾಂಕ: 20.10.1995ರಲ್ಲಿ ಜಲಕೃಷಿಯನ್ನು ಕೃಷಿ ಎಂದು ಪರಿಗಣಿಸಲಾಗಿದೆ. ಜಲಕೃಷಿಯು ಮೀನು ಕೃಷಿಯನ್ನು ಸಹ ಒಳಗೊಂಡಿರುತ್ತದೆ. ಆದುದರಿಂದ, ಕೃಷಿಗೆ ಸಿಗುವ ಎಲ್ಲಾ ಸೌಲಭ್ಯಗಳು ಮೀನು ಕೃಷಿಗೆ ಸಹ ಅನ್ವಯಿಸುತ್ತಿದೆ. ಗಂಗಾಮತ ಮತ್ತು ಅದರ 38 ಪರ್ಯಾಯ ಜಾತಿಗಳನ್ನು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಸೇರಸಬೇಕೆಂದು ಪತ್ರ ಸಂಖ್ಯೆ: ಸಕಇ 170 ಎಸ್‌ಎಡಿ 93, ದಿನಾಂಕ: 14.11.1996ರಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಈ ಪರ್ಯಾಯ ಜಾತಿಗಳಲ್ಲಿ ಮಿನುಗಾರ ಜಾತಿಯೂ ಸಹ ಸೇರಿದೆ.

ಇ) ಸಾಂಪ್ರದಾಯಿಕ ಮೀನುಗಾರಿಕೆಗೆ ಪಡಿತರ ವ್ಯವಸ್ಥೆಯಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ಪ್ರತಿ ದೋಣಿಗೆ ಮಾಸಿಕ 130ರಿಂದ 150 ಲೀಟರ್ ಸೀಮೆಎಣ್ಣೆಯನ್ನು ನೀಡಲಾಗುತ್ತಿದೆ.

ಈ) ಗುಜುರಾತ್, ಮಹಾರಾಷ್ಟ್ರ, ಕೇರಳ ಮತ್ತು ಆಂಧ್ರ ಪ್ರದೇಶಗಳಲ್ಲಿ ಮೀನುಗಾರಿಕೆಗೆ ಸೀಮೆ ಎಣ್ಣೆ ಒದಗಿಸುವ ಬಗ್ಗೆ ವಿವರ ಈ ಕೆಳಕಂಡಂತೆ ನೀಡಲಾಗಿದೆ:

1) ಗುಜರಾತ್; ಗುಜರಾತ್ ರಾಜ್ಯದಲಿ ಔಟ್‌ಬೋರ್ಡ್ ಮೋಟಾರ್ ಅಳವಡಿಸಿರುವ ದೋಣಿಗಳಿಗೆ ಮಾಸಿಕ 250 ಲೀಟರ್ ಹಾಗೂ ಇನ್‌ಬೋರ್ಡ್ ಮೋಟಾರು ಅಳವಡಿಸಿರುವ ದೋಣಿಗಳಿಗೆ ಮಾಸಿಕ 60 ಲೀಟರ್ ಸೀಮೆ ಎಣ್ಣೆಯನ್ನು ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿ ವಿತರಿಸಲಾಗುತ್ತದೆ ಎಂದು ತಿಳಿದು ಬಂದಿದೆ.

2) ಮಹಾರಾಷ್ಟ್ರ: ಈ ರಾಜ್ಯದಲ್ಲಿ ಸಾಂಪ್ರದಾಯಿ ದೋಣಿಗಳಿಗೆ ಸೀಮೆ ಎಣ್ಣೆಯನ್ನು ಪಡಿತರ ವ್ಯವಸ್ಥೆಯ ಮೂಲಕ ಸರಬರಾಜು ಮಾಡುತ್ತಿಲ್ಲವೆಂದು ತಿಳಿದು ಬಂದಿದೆ.

3) ಕೇರಳ: ಈರಾಜ್ಯದಲ್ಲಿ 15 ಅಶ್ವಶಕ್ತಿಯವರೆಗಿನ ದೋಣಿಗಳಿಗೆ ಮಾಹೆಯಾನ 350 ಲೀಟರ್ ಸೀಮೆಎಣ್ಣೆಯನ್ನು 15 ಅಶ್ವಶಕ್ತಿಗಿಂತ ಹೆಚ್ಚಿನ ಸಾಮರ್ಥ್ಯವುಳ್ಳ ದೋಣಿಗಳಿಗ ಮಾಹೆಯಾನ 400 ಲೀಟರ್ ಸೀಮೆಎಣ್ಣೆಯನ್ನು ಪಡಿತರ ದರದಲ್ಲಿ ನೀಡಲಾಗುತ್ತಿದೆಯೆಂದು ತಿಳಿದು ಬಂದಿದೆ. ಈ ಪ್ರಮಾಣ ಮೀನುಗಾರರ ಒಟ್ಟು ಸೀಮೆಎಣ್ಣೆಯ ಬೇಡಿಕೆಯ ಶೇಕಡ 50ರಷ್ಟು ಮಾತ್ರ ಒದಗಿಸಲಾಗುತ್ತಿದೆ.

4) ಆಂಧ್ರ ಪ್ರದೇಶ: ಈ ರಾಜ್ಯದಲ್ಲಿ ಮೀನುಗಾರರಿಗೆ ಪ್ರತ್ಯೇಕವಾಗಿ ಸೀಮೆಎಣ್ಣೆಯನ್ನು ಪಡಿತರ ದರದ ಮೇಲೆ ನೀಡಲಾಗುತ್ತಿಲ್ಲವೆಂದು ತಿಳಿದು ಬಂದಿದೆ.

ಕರ್ನಾಟಕ ರಾಜ್ಯದಲ್ಲಿ ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳಿಗೆ ಈಗ ನೀಡುತ್ತಿರುವ ಸೀಮೆಎಣ್ಣೆ ಪ್ರಮಾಣವನ್ನು ಹೆಚ್ಚಿಸಲು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯನ್ನು ಕೋರಿಕೊಳ್ಳಲಾಗಿದೆ.

ತುಮಕೂರು-ಹೊನ್ನಾವರ ರಸ್ತೆಗಳ ಅಭಿವೃದ್ಧಿ.

2881::(3927)

ಶ್ರೀ ಡಾ.ಎಂ.ಕರ್ಕಿ (ಕುಮಟಾ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು-ಹೊನ್ನಾವರ ರಸ್ತೆಗಳ 1995-96, 1996-97, 1997-98ರ ಆಯವ್ಯಯದಲ್ಲಿ ಕಾದಿರಿಸಿದ ಹಣವೆಷ್ಟು; ಹಾಗೂ ಖರ್ಚಾದ ಹಣವೆಷ್ಟು; ಉಳಿದ ಹಣವೆಷ್ಟು?

ಆ) ಇದರ ಕಾಮಗಾರಿಗಳನ್ನು ಯಾವಾಗ ಪೂರೈಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ತುಮಕೂರು-ಹೊನ್ನಾವರ ರಸ್ತೆಗಳಿಗೆ ಆಯವ್ಯಯದಲ್ಲಿ ಕಾದಿರಿಸಿದ ಹಣದ ವಿವರಗಳು ಈ ಕೆಳಕಂಡಂತೆ ಇರುತ್ತದೆ:-

ವರ್ಷ	ಆಯವ್ಯಯದಲ್ಲಿ ಕಾದಿರಿಸಿದ ಹಣ ಲಕ್ಷ ರೂ.ಗಳಲ್ಲಿ	ಖರ್ಚಾದ ಹಣ	ಉಳಿದ ಹಣ
1995-96	90.00	19.85	70.15
1996-97	121.90	96.34	23.66
1997-98	100.83	27.68	73.15

ಆ) ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಶಿರಾ-ಮುಳಾಬಾಗಿಲು ರಸ್ತೆ ಅಭಿವೃದ್ಧಿ

2884:(3916)

ಶ್ರೀ ವಿ.ಮುನಿಯಪ್ಪ (ಶಿಡ್ಲಘಟ್ಟ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಭೂ ಸಾರಿಗೆ ಇಲಾಖೆಯು ಶಿರಾದಿಂದ ಮುಳಬಾಗಿಲು (ಗೌರಿಬಿದನೂರು, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ಹಾಗೂ ಚಿಂತಾಮಣಿ ಮಾರ್ಗವಾಗಿ)ವರೆಗೆ ರಸ್ತೆ ಅಭಿವೃದ್ಧಿಗೆ ಹಣ ಮಂಜೂರು ಮಾಡಲಾಗಿದೆಯೇ?

ಆ) ಹಾಗಿದ್ದಲ್ಲಿ ಎಷ್ಟು ಹಣ ಮಂಜೂರಾಗಿದೆ ಮತ್ತು ಮಂಜೂರಾದ ದಿನ ಯಾವುದು?

ಇ) ಈ ಕಾಮಗಾರಿಯ ಪ್ರಗತಿಯು ಯಾವ ಹಂತದಲ್ಲಿದೆ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಶಿರಾದಿಂದ-ಮುಳಬಾಗಿಲು ರಸ್ತೆಯ ಆಯ್ದ ಭಾಗಗಳನ್ನು ಅಭಿವೃದ್ಧಿಪಡಿಸಲು ಕೇಂದ್ರ ಭೂ ಸಾರಿಗೆ ಇಲಾಖೆಯು ಅಂತರರಾಜ್ಯ ಪ್ರಾಮುಖ್ಯತೆ ಯೋಜನೆಯಡಿ ಹಣ ಮಂಜೂರು ಮಾಡಿರುತ್ತದೆ.

ಆ) ರೂ. 1,98,40,000-00 ಗಳಿಗೆ ದಿನಾಂಕ: 18-3-97ರಂದು ಮಂಜೂರಾಗಿದೆ.

ಇ) 10 ಕಿ.ಮೀ. ಗಳಷ್ಟು ಡಬ್ಲ್ಯು.ಬಿ.ಎಂ ಮತ್ತು ಮಿಕ್ಸ್ ಸೀಲ್ ಕೆಲಸವು ಮುಗಿದು ಉಳಿದ ಅಭಿವೃದ್ಧಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಕೊಡಗು ಜಿಲ್ಲೆಯಲ್ಲಿ ರಸ್ತೆ ಅಭಿವೃದ್ಧಿಗೆ ಬಿಡುಗಡೆ ಮಾಡಿದ ಹಣ

2885:(3691)

ಶ್ರೀ ಡಿ.ಎನ್.ಮಾದಪ್ಪ (ಮಡಕೇರಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಸೇರಿದ ರಸ್ತೆಯ ವಿಸ್ತೀರ್ಣವೆಷ್ಟು?

ಆ) ಕಳೆದ ಮೂರು ವರ್ಷಗಳಿಂದ ಈ ರಸ್ತೆಯ ಅಭಿವೃದ್ಧಿಗೆ ಬಿಡುಗಡೆ ಮಾಡಿದ ಅನುದಾನವೆಷ್ಟು? ಹಳೆಯ ರಸ್ತೆ ದುರಸ್ತಿಗೆ ಕಿಮಿ 1ಕ್ಕೆ ಬಿಡುಗಡೆ ಮಾಡುವ ಹಣವೆಷ್ಟು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಕೊಡಗು ಜಿಲ್ಲೆ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ರಾಜ್ಯ ಹೆದ್ದಾರಿ 310.8 ಕಿಮಿ ಮತ್ತು ಜಿಲ್ಲಾ ಮುಖ್ಯ ರಸ್ತೆ 804 ರೂ. ಒಟ್ಟು 1114.8 ಕಿಮಿ ಉದ್ದ ರಸ್ತೆ ಬರುತ್ತದೆ.

ಆ) ಕಳೆದ ಮೂರು ವರ್ಷಗಳಿಂದ ಈ ರಸ್ತೆಯ ಅಭಿವೃದ್ಧಿಗೆ ಯೋಜನೆ. ಯೋಜನೇತರ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬಿಡುಗಡೆಯಾದ ಅನುದಾನದ ವಿವರ ಈ ಕೆಳಗಿನಂತಿದೆ.

ಲೆಕ್ಕ ಶೀರ್ಷಿಕೆ	ವರ್ಷ		
	95-96 ಲಕ್ಷದಲ್ಲಿ	96-97 ಲಕ್ಷದಲ್ಲಿ	97-98 ಲಕ್ಷದಲ್ಲಿ
5054 ರಸ್ತೆ ಮತ್ತು ಸೇತುವೆ ರಸ್ತೆಗೆ ನಿರ್ಮಾಣ ಅಭಿವೃದ್ಧಿ ಮತ್ತು ಕೇತ್ರಾವಾರು ಕಾಮಗಾರಿ ಸೇರಿ.	64.10	40.10	12.10
3054 ರಸ್ತೆ ಮತ್ತು ಸೇತುವೆ ಯೋಜನೇತರ	153.15	182.67	369.55

ಕಳೆದ ಮೂರು ವರ್ಷಗಳಲ್ಲಿ ರಸ್ತೆಗಳ ದುರಸ್ತಿಗೆ ಬಿಡುಗಡೆ ಮಾಡಿದ ಹಣ ವಿವರ ಈ ಕೆಳಗಿನಂತಿದೆ. ಕಿ.ಮೀ.ಆಧಾರಿತ ಅನುದಾನ ಬಿಡುಗಡೆ: ವೆಚ್ಚ ಮಾಡುವುದಿಲ್ಲ.

ಲೆಕ್ಕ ಶೀರ್ಷಿಕೆ	1995-96	1996-97	1997-98
	ಬಿಡುಗಡೆ ಮಾಡಿದ ಅನುದಾನ ಲಕ್ಷದಲ್ಲಿ	ಬಿಡುಗಡೆ ಮಾಡಿದ ಅನುದಾನ ಲಕ್ಷದಲ್ಲಿ	ಬಿಡುಗಡೆ ಮಾಡಿದ ಅನುದಾನ ಲಕ್ಷದಲ್ಲಿ
3054 ರಸ್ತೆ ಮತ್ತು ಸೇತುವೆ 03 ರಾ.ಹೆದ್ದಾರಿ 51 ಸಾ.ದುರಸ್ತಿ.	16.672	16.872	21.77
3054 ರಸ್ತೆ ಮತ್ತು ಸೇತುವೆ 04 ಜಿಲ್ಲಾ ಮುಖ್ಯ ರಸ್ತೆ 72 ಸಾ.ದುರಸ್ತಿ	32.321	37.989	42.21
ಒಟ್ಟು	49.193	54.861	63.96

ಮಡಿಕೇರಿ ತಾಲ್ಲೂಕಿನಲ್ಲಿ ಕೆಲವು ರಸ್ತೆಗಳನ್ನು ಸರ್ವಋತು ರಸ್ತೆಯನ್ನಾಗಿಸುವುದು

2886:(3892)

ಶ್ರೀ ಡಿ.ಎನ್.ಮಾದಪ್ಪ (ಮಡಿಕೇರಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮಡಿಕೇರಿ ತಾಲ್ಲೂಕಿನ ಜಟ್ಟಿ ಮಾಸಿದಬ್ಬಡ್ಕ ಕಾಂತಬೈಲು ಕಲ್ಲುಗುಂಡಿ ರಸ್ತೆಯ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮವೇನು?

2) ಈ ರಸ್ತೆಯನ್ನು ಅಭಿವೃದ್ಧಿಯಾದಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ನೇರ ಸಂಪರ್ಕ ರಸ್ತೆಯಾಗಲಿರುವುದು ಸರ್ಕಾರಕ್ಕೆ ತಿಳಿದಿದೆಯೇ?

3) ಈ ರಸ್ತೆಯು ಅಭಿವೃದ್ಧಿಗೊಂಡಲ್ಲಿ ಸರ್ವಋತು ರಸ್ತೆಯಾಗಿ ದಕ್ಷಿಣ ಕನ್ನಡ ಜಿಲ್ಲೆಯಿಂದ ತಲಕಾವೇರಿ ಕ್ಷೇತ್ರದ ಹತ್ತಿರದ ರಸ್ತೆಯಾಗಲಿರುವುದರಿಂದ ಸರ್ಕಾರ ಇದರ ಅಭಿವೃದ್ಧಿ ಅನುದಾನವನ್ನು ಹೆಚ್ಚಿಸುವುದೆ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

1) ಸದರಿ ರಸ್ತೆಯು ಜಿಲ್ಲಾ ಪಂಚಾಯತ್ ರಸ್ತೆ ಆಗಿದ್ದು ಒಟ್ಟು 19.20 ಕಿಮಿ ಉದ್ದವಿದ್ದು, ಕಲ್ಲುಗುಂಡಿ ಕಡೆಯಿಂದ 1996 ಮಾರ್ಚ್ ಅಂತ್ಯದವರೆಗೆ 4.65 ಕಿಮಿ ರಸ್ತೆಯನ್ನು ಡಾಂಬರೀಕರಿಸಿದ್ದು, ಚೆಟ್ಟಿ ಮಾಸಿ ಕಡೆಯಿಂದ 6.05 ಕಿಮಿ ಉದ್ದ ಡಾಂಬರೀಕರಣಗೊಂಡಿದ್ದು, ಉಳಿದ 8.50 ಕಿಮಿ ಉದ್ದದ ಮಧ್ಯಭಾಗದ ರಸ್ತೆಯನ್ನು ಅಭಿವೃದ್ಧಿಪಡಿಸಲು ಜಿಲ್ಲೆಗೆ ಒದಗಿಸಿರುವ ಅನುದಾನದಲ್ಲಿ ಹಂತ ಹಂತವಾಗಿ ರಸ್ತೆ ಅಭಿವೃದ್ಧಿ ಕ್ರಮ ಕೈಗೊಳ್ಳಲಾಗುತ್ತಿದೆ;

2) ಹೌದು

3) ಅನುದಾನದ ಲಭ್ಯತೆಯ ಮೇರೆಗೆ ಕ್ರಮ ತೆಗೆದುಕೊಳ್ಳಲಾಗುವುದು.

ಕೊಡಗು ಜಿಲ್ಲೆಯ ಅರಣ್ಯದಲ್ಲಿ ದಾಖಲಾಗಿರುವ ಮೊಕದ್ದಮೆಗಳು.

2888:(3895)

ಶ್ರೀ ಡಿ.ಎನ್.ಮಾದಪ್ಪ (ಮಡಿಕೇರಿ): ಮಾನ್ಯಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ 1994-95ರಿಂದ 1997-98ರ ವರೆಗೆ ದಾಖಲಾಗಿರುವ ಅರಣ್ಯ ಮೊಕದ್ದಮೆಗಳ ಸಂಖ್ಯೆ ಎಷ್ಟು?

ಆ) ಸರ್ಕಾರ ಅನ್‌ರಿಡೀಂ ಜಾಗದಲ್ಲಿ ಮರ ಕಡಿಯುವುದನ್ನು ನಿಷೇಧಿಸಿದ ನಂತರದ ಅವಧಿಯಲ್ಲಿ ಎಫ್.ಒ.ಸಿ. ಮಾಡಿದ ಮರಗಳ ವಿವರಗಳೆಷ್ಟು?

ಇ) ಇಲ್ಲಿಯವರೆಗೂ ಎಫ್.ಒ.ಸಿ.ಯ ಪ್ರಕರಣದ ಮರಗಳ ಒಟ್ಟು ಮೌಲ್ಯವೆಷ್ಟು? ಎಷ್ಟು ಘನ ಮಿಟರ್ ಮತ್ತು ಯಾವ ಯಾವ ಜಾತಿಗೆ ಸೇರಿದ ಮರಗಳು?

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು):

ಅ) ಕೊಡಗು ಜಿಲ್ಲೆಯಲ್ಲಿ 1994-95 ರಿಂದ 1997-98ರ ವರೆಗೆ ದಾಖಲಾದ ಅರಣ್ಯ ಅಪರಾಧಗಳು ಈ ಕೆಳಗಿನಂತಿದೆ:-

ವರ್ಷ	ಮಡಿಕೇರಿ ವಿಭಾಗ	ವಿರಾಜಪೇಟೆ ವಿಭಾಗ	ಅರಣ್ಯ ಸಂಚಾರಿ ದಳ, ಮಡಿಕೇರಿ	ಒಟ್ಟು
1994-95	431	360	132	923
1995-96	363	126	104	593
1996-97	475	157	134	766
1997-98	711	127	150	988

ಆ) ನಿಷೇಧ ಆದೇಶದ ಬಂದ ನಂತರ ಒಟ್ಟು 1965 ಪ್ರಕರಣಗಳಿದ್ದು ಅವುಗಳಲ್ಲಿ 22290.597 ಘ.ಮಿ. ನಾಟಾ ಹಾಗೂ 23577.560 ಘ.ಮಿ. ಸೌದೆ ಸೇರಿದೆ. ವಿವರ ಈ ಕೆಳಗಿನಂತಿದೆ:-

	ಮಡಿಕೇರಿ ವಿಭಾಗ	ವಿರಾಜಪೇಟೆ ವಿಭಾಗ	ಅರಣ್ಯ ಸಂಚಾರಿ ದಳ, ಮಡಿಕೇರಿ	ಒಟ್ಟು
ಪ್ರಕರಣಗಳು	1842	45	78	1965

ನಾಟಾಗಳು	13972.034 ಘ.ಮಿ.	6569.892 ಘ.ಮಿ.	1748.671 ಘ.ಮಿ.	22290.597 ಘ.ಮಿ.
ಸೌಧೆ	16149.767 ಘ.ಮಿ.	4743.853 ಘ.ಮಿ.	2683.940 ಘ.ಮಿ.	23577.560 ಘ.ಮಿ.

ಇ) ಇಲ್ಲಿಯವರೆಗೆ ಎಫ್.ಒ.ಸಿ. ಆದ ಪ್ರಕರಣಗಳ ಮರಗಳ ಒಟ್ಟು ಮೌಲ್ಯ ರೂ. 3,56,22,892.00 ವಿವರಗಳು ಈ ಕೆಳಗಿನಂತಿವೆ:-

	ಮಡಿಕೇರಿ ವಿಭಾಗ	ವಿರಾಜಪೇಟೆ ವಿಭಾಗ	ಅರಣ್ಯ ಸಂಚಾರಿ ದಳ, ಮಡಿಕೇರಿ
ಒಟ್ಟು ಮೌಲ್ಯ	ರೂ. 1,87,55,813	ರೂ. 1,19,81,290	ರೂ. 48,85,789
ಮರಗಳ ಜಾತಿಗಳು:	ಶ್ರೀಗಂಧ, ತೇಗ ಬೀಟಿ, ಕಾಡುಜಾತಿ	ಶ್ರೀಗಂಧ, ಬೀಟಿ ತೇಗ, ಹೆಬ್ಬಲಸು ಬೆಳ್ಳಗಿಲು ನೇರಳೆ, ಹಲಸು, ನಂದಿ ಹೊನ್ನೆ ಕುಳುರಮಾವು, ಮಾವು ಇತರ ಕಾಡುಜಾತಿ	ಬೀಟಿ, ತೇಗ, ಬಳಂಜಿ, ಹೊನ್ನೆ ನಂದಿ, ಕರಡಿ, ಇತರೆ ಕಾಡುಜಾತಿ

ಬೈಲಹೊಂಗಲ ತಾಲ್ಲೂಕಿನಲ್ಲಿ ಪಶುಚಿಕಿತ್ಸಾಲಯ ತೆರೆಯುವುದು.

2889:(3878)

ಶ್ರೀ ಮಹಾಂತೇಶ ಎಸ್.ಕೌಜಲಗಿ (ಬೈಲಹೊಂಗಲ): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಗೋವಿನಕೊಪ್ಪ ಹಾಗೂ ಸವದತ್ತಿ ತಾಲ್ಲೂಕಿನ, ಮಾಟೊಳ್ಳಿ ಗ್ರಾಮಗಳಲ್ಲಿ ಪಶುಚಿಕಿತ್ಸಾಲಯವನ್ನು ತೆರೆಯಬೇಕೆಂದು ಮನವಿಗಳು ಏನಾದರೂ ಸರಕಾರಕ್ಕೆ ಬಂದಿವೆಯೇ?

ಆ) ಹಾಗಿದ್ದಲ್ಲಿ ಅಲ್ಲಿ ಪಶು ಚಿಕಿತ್ಸಾಲಯ ತೆರೆಯಲು ಸರಕಾರ ಕ್ರಮಕೈಗೊಳ್ಳುವುದೇ?

ಶ್ರೀ ಬಿ.ಬಿ.ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಬೈಲಹೊಂಗಲ ಕ್ಷೇತ್ರದಲ್ಲಿ ಯುವಕ ಸಂಘಗಳ ಅಭಿವೃದ್ಧಿ.

2890:(3879)

ಶ್ರೀ ಮಹಾಂತೇಶ ಎಸ್.ಕೌಜಲಗಿ (ಬೈಲಹೊಂಗಲ): ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಯುವಕ ಮಂಡಳಿಗಳು ನೋಂದಾಯಿಸಲ್ಪಟ್ಟಿರುತ್ತವೆ? (ಮತಕ್ಷೇತ್ರವಾರು ಮಾಹಿತಿ ನೀಡುವುದು)

ಆ) ಆ ಪೈಕಿ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕಿನಲ್ಲಿ ನೊಂದಾಯಿಸಲ್ಪಟ್ಟವುಗಳ ಸಂಖ್ಯೆ ಎಷ್ಟು? (ಯುವಕ ಮಂಡಳಿಗಳ ಹೆಸರು ಹಾಗೂ ವಿಳಾಸವನ್ನು ಒದಗಿಸುವುದು)

ಇ) ಈ ರೀತಿ ನೊಂದಾಯಿಸಲ್ಪಟ್ಟ ಯುವ ಮಂಡಳಗಳಿಗೆ 1997-98 ಹಾಗೂ 98-99ರಲ್ಲಿ ಯಾವ ಯಾವ ಸಹಾಯ ನೀಡಲಾಗಿದೆ.

ಈ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕಿನಲ್ಲಿ ನೋಂದಾಯಿಸಲ್ಪಟ್ಟ ಯುವಕ ಮಂಡಳಗಳಿಗೆ ಸರ್ಕಾರದವರು 1997-98 ಹಾಗೂ 1998-99ನೇ ಸಾಲಿನಲ್ಲಿ ಯಾವ ಯಾವ ಸಹಾಯಧನ ನೀಡಲಾಗಿದೆ; ಹಾಗೂ ಅವುಗಳಲ್ಲಿ ತಮ್ಮದೇ ಆದ ಕಟ್ಟಡಗಳನ್ನು ಹೊಂದಿರುವ ಯುವಕ ಮಂಡಳಿಗಳೆಷ್ಟು?

ಶ್ರೀ ನಾಗಪ್ಪ ಸಾಲೋನಿ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು):

ಅ) ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 2438 ಯುವಕ ಮಂಡಳಿಗಳು ಜಿಲ್ಲಾ ಯುವಜನ ಸೇವಾ ಮಂಡಳಿಗೆ ನೊಂದಾಯಿಸಲ್ಪಟ್ಟಿರುತ್ತದೆ. ಮತಕ್ಷೇತ್ರವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.

ಆ) ಬೈಲಹೊಂಗಲ ತಾಲ್ಲೂಕಿನಲ್ಲಿ 146 ಯುವಕ ಮಂಡಳಿಗಳು ಹಾಗೂ ಸವದತ್ತಿ ತಾಲ್ಲೂಕಿನಲ್ಲಿ 193 ಯುವಕ ಮಂಡಳಿಗಳು ನೊಂದಾಯಿಸಲ್ಪಟ್ಟಿರುತ್ತವೆ. ಯುವಕ ಮಂಡಳಗಳ ಹೆಸರು ಹಾಗೂ ವಿಳಾಸವನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ.

ಇ) 1997-98ನೇ ಸಾಲಿನಲ್ಲಿ ಯುವಕ ಮಂಡಳಗಳಿಗೆ ಸಹಾಯದನ ಈ ಕೆಳಗಿನಂತೆ ನೀಡಲಾಗಿದೆ:-

1. ಕ್ರೀಡಾ ಸಲಕರಣೆ ಹಾಗೂ ಯುವಕ ಮಂಡಳ ಕಟ್ಟಡ ಅನುದಾನ.
2. ಗ್ರಾಮ ಗರಡಿ ಮನೆ ಕಟ್ಟಡ ಅನುದಾನ.
3. ಕ್ರೀಡಾ ಮೈದಾನ ಅಭಿವೃದ್ಧಿ ಅನುದಾನ.
4. ರಂಗಮಂದಿರ ನಿರ್ಮಾಣ ಅನುದಾನ.

ಇದೇ ರೀತಿ 1998-99ನೇ ಸಾಲಿನಲ್ಲಿಯೂ ಸಹಾಯಧನ ನೀಡಲಾಗುವುದು.

ಈ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಿಗೆ ಈ ಕೆಳಕಂಡಂತೆ 1997-98ನೇ ಸಾಲಿಗೆ ಧನ ಸಹಾಯ ನೀಡಲಾಗಿದೆ.

ಯೋಜನೆಯ ಹೆಸರು

1. ಯುವಜನ ಸಂಘಗಳು
2. ಗರಡಿಮನೆ ನಿರ್ಮಾಣ
3. ಆಟದ ಮೈದಾನಗಳಿಗೆ ಪ್ರಕಾಶದೀಪಗಳು.
4. ಬಯಲು ರಂಗಮಂದಿರ ನಿರ್ಮಾಣ

1998-99ನೇ ಸಾಲಿನ ಅನುದಾನವನ್ನು ಸದ್ಯದಲ್ಲಿ ಬಿಡುಗಡೆ ಮಾಡಲಾಗುವುದು. ಬೈಲಹೊಂಗಲ ತಾಲ್ಲೂಕಿನಲ್ಲಿ 8 ಹಾಗೂ ಸವದತ್ತಿ ತಾಲ್ಲೂಕಿನಲ್ಲಿ 10 ಯುವಕ ಮಂಡಳಗಳು ತಮ್ಮದೇ ಆದ ಕಟ್ಟಡವನ್ನು ಹೊಂದಿರುತ್ತದೆ.

ಅನುಬಂಧ - 1

ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 2438 ಯುವಕ ಯುವತಿ ಮಂಡಳಗಳು ಕಾರ್ಯ ನಿರ್ವಹಿಸುತ್ತಿವೆ. (1997-98ನೇ ಸಾಲಿನವರೆಗೆ ರಿನಿವಲ್ ಮಾಡಿದ ಯುವಕ ಯುವತಿ ಸಂಘಗಳು) ಮತಕ್ಷೇತ್ರವಾರು ಮಾಹಿತಿ ಲಭ್ಯವಿರುವುದಿಲ್ಲ. ತಾಲ್ಲೂಕು ವಾರು ಸಂಖ್ಯೆಯನ್ನು ಈ ಕೆಳಕಂಡಂತೆ ನೀಡಲಾಗಿದೆ.

1) ಬೆಳಗಾವಿ	182
2) ರಾಮದುರ್ಗ	204
3) ಸವದತ್ತಿ	193
4) ಬೈಲಹೊಂಗಲ	146
5) ರಾಯಬಾಗ	210
6) ಗೋಕಾಕ	333
7) ಖಾನಾಪೂರ	184
8) ಚಿಕ್ಕೋಡಿ	447
9) ಹುಕ್ಕೇರಿ	349
10) ಅಥಣಿ	190
ಒಟ್ಟು ಯುವಕ ಯುವತಿ ಮಂಡಳಗಳು	2438

ಅನುಬಂಧ - 2

ಬೈಲಹೊಂಗಲ ತಾಲ್ಲೂಕಿನಲ್ಲಿ ನೋಂದಣಿಯಾಗಿರುವ ಯುವಕ ಸಂಘಗಳ ಪಟ್ಟಿ

ಅನಂ	ಸಂಪುಟದ ಹೆಸರು	ಊರು	ನೋಂದಣಿ ಸಂಖ್ಯೆ
1.	ಬೆಳವಡಿ ಮಲ್ಲಮ್ಮ ಯುವತಿ ಮಂಡಳ	ಬೈಲಹೊಂಗಲ	2794
2.	ಶ್ರೀ.ರಾಮಲಿಂಗೇಶ್ವರ ಯುವಕ ಮಂಡಳ	ಹೊಳಿಹೊನ್ನೂರ	2987
3.	ಶ್ರೀ.ದುರುದುಂಡೇಶ್ವರ ಯುವಕ ಮಂಡಳ	ಬೂದಿನಾಳ	1943
4.	ಶ್ರೀ.ಶಿವಶಕ್ತಿ ಯುವಕ ಹಾಗೂ ಕ್ರೀಡಾ ಹವ್ಯಾಸಿ ಸಂಘ.	ಬೈಲಹೊಂಗಲ	2381
5.	ತರುಣ ಭಾರತ್ ಸ್ಪೋರ್ಟ್ಸ್ ಕ್ಲಬ್	ಬೆಳವಡಿ	3199
6.	ಡಾ. ಅಂಬೇಡ್ಕರ್ ಯುವಕ ಮಂಡಳ	ಬೆಳವಡಿ	3463
7.	ಶ್ರೀ. ಭೀರದೇವರ ಯುವಕ ಮಂಡಳ	ಎಂಕೆ ಹುಬ್ಬಳ್ಳಿ	5565
8.	ಶ್ರೀ. ಆದ್ಯಶಾನಂದ ಯುವಕ ಮಂಡಳ	ಕಾದ್ರೊಳ್ಳಿ	1325
9.	ಶ್ರೀ. ಬ್ರಹ್ಮಲಿಂಗೇಶ್ವರ ಯುವಕ ಮಂಡಳಿ	ಗುದಿಗಟ್ಟಿ	3500
10.	ಶ್ರೀ. ಗಜಾನನ ಯುವಕ ಮಂಡಳ	ನಾವಲಗಟ್ಟಿ	3559
11.	ಶ್ರೀ. ಮಲಪ್ರಭಾ ಸಾಂಸ್ಕೃತಿಕ ಹಾಗೂ ಕ್ರೀಡಾ ಹವ್ಯಾಸಿ ಯವಕ ಸಂಘ.	ಎಂ.ಕೆ.ಹುಬ್ಬಳ್ಳಿ	3088
12.	ಶ್ರೀ. ವೀರೇಶ್ವರ ಯುವಕ ಮಂಡಳ	ಲಕ್ಕುಂಡಿ	1370
13.	ಕಮಲನಾರಾಯಣ ಯುವಕ ಮಂಡಳ	ದೇಗಾಂವ	3562
14.	ಶ್ರೀ. ಬಸವೇಶ್ವರ ಯುವಕ ಮಂಡಳ	ದೇಮಟ್ಟಿ	2668
15.	ಶ್ರೀ. ದುರುದುಂಡೇಶ್ವರ ಯುವಕ ಮಂಡಳ	ಯರಗಾದ್ದಿ	2092

16.	ಶ್ರೀ. ವಿರಭದ್ರೇಶ್ವರ ಯುವಕ ಮಂಡಳ	ಕುರಗುಂದ	1509
17.	ಪ್ರಗತಿಪರ ಯುವಕ ಮಂಡಳ	ದೇಶನೂರ	3038
18.	ಶ್ರೀ. ಬಲಭೀಮ ಸಾಂಸ್ಕೃತಿಕ ಹಾಗೂ ಕ್ರೀಡಾ ಹವ್ಯಾಸಿ ಸಂಘ	ಬೈಲಹೊಂಗಲ	3224
19.	ಯುವರಾಜ ಯುವಕ ಮಂಡಳ	ದೇಶನೂರು	3226
20.	ಶ್ರೀ. ವಿನಾಯಕ ಯುವಕ ಮಂಡಳ	ದೆ.ಕೆ.ಕೊಪ್ಪ	1733
21.	ಶ್ರೀ. ಬಸವೇಶ್ರ ಭಜನಾ ಮಂಡಳಿ	ದೆ.ಕೆ.ಕೊಪ್ಪ	2461
22.	ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವಕ ಮಂಡಳ	ಸಂಗೊಳ್ಳಿ	5652
23.	ಶ್ರೀ. ರಾಮಲಿಂಗೇಶ್ವರ ಯುವಕ ಮಂಡಳ	ಹಣಬರಹಟ್ಟಿ	3006
24.	ಶ್ರೀ.ಸಿದ್ದಣ್ಣವರ ಯುವಕ ಮಂಡಳ	ಗುಡಿಹೊಟ್‌ಬಾಗಿ	2764
25.	ಸಿದ್ದರಾಮೇಶ್ವರ ಯುವಕ ಮಂಡಳ	ನಾಗನೂರ	2628
26.	ಶ್ರೀ.ಅಕ್ಕಮಹಾದೇವಿ ಯುವತಿ ಮಂಡಳಿ	ಬುಡರಕಟ್ಟಿ	1583
27.	ಶ್ರೀ.ಬಾಲಗಜಾನನ ಯುವಕ ಮಂಡಳ	ನೇಸರಗಿ	3170
28.	ಬೈಲಹೊಂಗಲ ಸ್ಪೋರ್ಟ್ಸ್ ಕ್ಲಬ್, ಬೈಲಹೊಂಗಲ	ಬೈಲಹೊಂಗಲ	3333
29.	ಬಸವೇಶ್ವವರ ಯುವಕ ಮಂಡಳ	ಮಡಿನಾಲಲಾಪುರ	1451
30.	ಶ್ರೀ.ಗ್ರಾಮದೇವಿ ಯುವಕ ಮಂಡಳ	ಉಗಾಖೋಡ	3210
31.	ಜಗಜ್ಯೋತಿ ಯುವಕ ಮಂಡಳ	ಚವಟಗುಂಡಿ	2828
32.	ಸುಬದೇವಾನಂದ ಯುವಕ ಮಂಡಳ	ನಯಾನಗರ	5643
33.	ಗ್ರಾಮದೇವಿ ಯುವಜನ ಜಾಗೃತಿ ಸಂಘ	ಕೇಸರಕೊಪ್ಪ	3560
34.	ನೇತಾಜಿ ಯುವಕ ಮಂಡಳ	ನೇಗಿನಹಾಳ	5592

35.	ನೆಹರು ಯವಕ ಮಂಡಳ	ಯರಗೊಪ್ಪ	1604
36.	ಶ್ರೀ.ವಿಜಯ ಹನಮಾಣ ಸಾಂಸ್ಕೃತಿಕ ಸೇವಾ ಕ್ರೀಡಾ ಮಂಡಳಿ.	ನಾಗನೂರ	3339
37.	ಬಸವೇಶ್ವರ ಯುವಕ ಮಂಡಳ	ವನ್ನೂರ	-
38.	ಶ್ರೀ.ಬಸವೇಶ್ವರ ಯುವಕ ಭಜನಾ ಮಂಡಳ	ನಾಗನೂರ	2932
39.	ಶ್ರೀ.ಶಾರದಾ ಯುವತಿ ಮಂಡಳಿ	ನಾಗನೂರ	5960
40.	ಶ್ರೀ.ಸಿದ್ದೇಶ್ವರ ಯುವಕ ಮಂಡಳ	ಹಳ್ಳಿಕೇರಿ	2351
41.	ಶಕ್ತಿದೇವಿ ಯುವಕ ಮಂಡಳ	ಯರಗೊಪ್ಪ	5080
42.	ಜನಸೇವಾ ಯುವಕ ಸಂಘ	ಬೈಲಹೊಂಗಲ	5834
43.	ವಾಲ್ಮಿಕಿ ಯುವಕ ಮಂಡಳ	ಮೇಕಲಮರ್ಡಿ	5940
44.	ಶ್ರೀ.ಪ್ರಭುದೇವರ ಯುವಕ ಮಂಡಳ	ಮಾಸ್ತಮರ್ಡಿ	5852
45.	ನೂರಾನಿ ಯುವಕ ಸಂಘ	ಸನಟಗಿ	3405
46.	ಶ್ರೀ.ಸಿದ್ದಾರೂಢ ಯುವಕ ಸಂಘ	ಮಾರ್ಕಿಬಾಂದಿ	3338
47.	ಆದಿಶೇಷ ಯುವಕ ಮಂಡಳ	ಬೈಲಹೊಂಗಲ	3225
48.	ಶ್ರೀ.ಪಾಂಡುರಂಗ ಭಜನಾ ಮಂಡಳ	ಸಾಣಿಕೊಪ್ಪ	3264
49.	ಮಹರ್ಷಿ ವಾಲ್ಮಿಕಿ ಯುವಕ ಮಂಡಳಿ	ಕುಲವಳ್ಳಿ(ಕತ್ರಿದಡ್ಡಿ)	5069
50.	ನೆಹರು ಯುವಕ ಮಂಡಳ	ವಲದಾನಬಾಂವಿ	1450
51.	ಶ್ರೀ.ಕಮಾರೇಶ್ವರ ಯುವಕ ಮಂಡಳ	ದೇವರಾಪೂರ	2002
52.	ಶ್ರೀ.ರಾಮಲಿಂಗೇಶ್ವರ ಯುವಕ ಮಂಡಳ	ದೊಡವಾಢ	2097
53.	ನೇತಾಜಿ ಯುವಕ ಸಂಘ	ದೊಡವಾಢ	2693
54.	ಶ್ರೀ.ಚನ್ನಬಸವೇಶ್ವರ ಯುವಕ ಸಂಘ	ಮಾರ್ಗನಕೊಪ್ಪ	3079

55.	ನೇತಾಜಿ ತರುಣ ಸಂಘ	ಬೆಳವಡಿ ಶಂಕರ ಎಂ ಕರಿ	1274
56.	ನೇತಾಜಿ ಕ್ರೀಡಾ ಮಂಡಳಿ	ಕಿತ್ತೂರ	2778
57.	ಅಖಿಲ ಭಾರತ ಕರ್ನಾಟಕ ಸಾಂಸ್ಕೃತಿಕ ಹಾಗೂ ಕ್ರೀಡಾ ಹವ್ಯಾಸಿ ಸಂಘ	ಸಂವಗಾಂವ	2965
58.	ಶ್ರೀ. ಮೈಲಾರಲಿಂಗೇಶ್ವರ ಯುವಕ ಮಂಡಳ	ಬೈಲಹೊಂಗಲ	5939
59.	ಶ್ರೀ.ವೀರಭದ್ರೇಶ್ವರ ಸಂಘ	ಸಂವಗಾಂವ	5721
60.	ವಾಲ್ಮೀಕಿ ಯುವಕ ಸಂಘ	ಮದನಬಾಂದಿ	5703
61.	ನೆಹರು ಅರ್ಬನ ಯೂತ್ ಕ್ಲಬ್	ಕಿತ್ತೂರು	1174
62.	ಮೂಗಬಸವೇಶ್ವರ ತರುಣ ಸಂಘ	ಮುಗಬಸವ	1491
63.	ಶ್ರೀ.ಮಲ್ಲಿಕಾರ್ಜುನ್ ಯುವಕ ಸಂಘ	ಮೇಕಲಮರ್ಡಿ	1603
64.	ಶ್ರೀ.ಬಸವೇಶ್ವರ ಭಜನಾ ಮಂಡಳ	ಕೊರವಿಕೊಪ್ಪ	2404
65.	ನವೋದಯ ಯೂತ್ ಕ್ಲಬ್	ಕಿತ್ತೂರ	3195
66.	ಶ್ರೀ.ಮಾರುತಿ ಯುವಕ ಮಂಡಳ	ಉದಿಕೇರಿ	2725
67.	ಶ್ರೀ.ಮಡಿವಾಳೇಶ್ವರ ಸಾಂಸ್ಕೃತಿಕ ಸಂಘ	ನೇಗಿನಹಾಳ	2985
68.	ಜೈಹನಮಾನ್ ಯುವಕ ಮಂಡಳ	ವಕ್ಕುಂದ	3177
69.	ಪಾರ್ವತಿ ಯುವತಿ ಮಂಡಳಿ	ಕಿತ್ತೂರು	1581
70.	ಶ್ರೀ.ಬಸವೇಶ್ವರ ಯುವಕ ಮಂಡಳ	ಮರಿಕಟ್ಟಿ	2391
71.	ಬಸವೇಶ್ವರ ಯುವಕ ಮಂಡಳ	ಮಲ್ಲಾಪೂರ ಕೆಎನ್	1275
72.	ಶ್ರೀ.ಗುರುಬಸವೇಶ್ವರ ಯುವಕ ಮಂಡಳ	ಹಿರೇನಂಗಿಹಳ್ಳಿ	2696
73.	ಜಕಲ್ಮೇಶ್ವರ ಯುವಕ ಮಂಡಳ	ಸಾಣಿಕೊಪ್ಪ	2744
74.	ಶ್ರೀ.ರಾಮಲಿಂಗೇಶ್ವರ ಯುವಕ ಮಂಡಳ	ಆವಿಗೋಳ	2772

75.	ಶ್ರೀ. ಬಸವೇಶ್ವರ ಸಾಂಸ್ಕೃತಿಕ ಸೇವಾ ಯುವಕ ಮಂಡಳ	ಕೊಳದೂರ	2902
76.	ಶ್ರೀ. ಶೂರಸಂಗೊಳ್ಳಿರಾಯಣ್ಣ ಯುವಕ ಮಂಡಳ	ಬೇವಿನಕೊಪ್ಪ	3020
77.	ಮಲ್ಲಿಕಾರ್ಜುನ ಯುವಕ ಮಂಡಳ	ಬೇವಿನಕೊಪ್ಪ	3021
78.	ಶ್ರೀ. ಗಜಾನನ ಸಾಂಸ್ಕೃತಿಕ ಮತ್ತು ಕ್ರೀಡಾ ಹವ್ಯಾಸಿ ಮಂಡಳ	ಬೆಳವಡಿ ಯರಜಾಲ	3176
79.	ಶ್ರೀ. ನೇತಾಜಿ ಸಾಂಸ್ಕೃತಿಕ ಹಾಗೂ ಕ್ರೀಡಾ ಮಂಡಳಿ	ಬೆಳವಡಿ	-
80.	ಶ್ರೀ. ಶಿವಾನಂದ ಯುವಕ ಮಂಡಳಿ	ಗೋವನಕೊಪ್ಪ	1977
81.	ಶ್ರೀ. ಸಿದ್ದರೂಡ ಯುವಕ ಮಂಡಳ	ಬೈಲಹೊಂಗಲ	5783
82.	ಬಾಲಗಜಾನನ ಯುವಕ ಮಂಡಳ	ಹನಬರಹಟ್ಟಿ	3280
83.	ಸ್ವಾಮಿ ವಿವೇಕಾನಂದ ಯುವಕ ಮಂಡಳ	ಬೈಲಹೊಂಗಲ	6018
84.	ಅಂಬೇಡ್ಕರ್ ಯುವಕ ಮಂಡಳ	ಉಡಿಕೇರಿ	6092
85.	ನೇತಾಜಿ ಸುಭಾಸ್‌ಚಂದ್ರ ಬೋಸ್ ಯುವಕ ಮಂಡಳ	ಚಲಬಾಂವಿ	3052
86.	ಶ್ರೀ. ದುರ್ಗಾದೇವಿ ಯುವಕ ಸಂಘ	ಹೊಸಕೋಟಿ	5676
87.	ಶ್ರೀ. ಬಸವೇಶ್ವರ ಯುವಕ ಮಂಡಳ	-	6040
88.	ಗ್ರಾಮದೇವತಾ ಯುವಕ ಮಂಡಳ	ಬಸರಿಕೋಡ	6114
89.	ಶ್ರೀ. ಬಸವೇಶ್ವರ ಯುವಕ ಮಂಡಳ	ದಾಸ್ತಿಕೊಪ್ಪ	6115
90.	ಶ್ರೀ. ಶಿವಶಕ್ತಿ ಯುವಕ ಸಂಘ	ತಲ. ಶೀಗಿಹಳ್ಳಿ	6233
91.	ಜಾಗೃತಿ ಯುವಕ ಸಂಘ	ದೇವರಶೀಗಿಹಳ್ಳಿ	6247

92.	ಶ್ರೀ.ಗಜಾನನ ಯುವಕ ಮಂಡಳ	ಮರೀಕಟ್ಟಿ	6248
93.	ಕನಕದಾಸ ಯುವಕ ಸಂಘ	ವಣ್ಣೂರ	6250
94.	ಶ್ರೀ.ವಾಲ್ಮೀಕಿ ಯುವಕ ಸಂಘ	ಬೈಲಹೊಂಗಲ	6250
95.	ಶ್ರೀ.ವೀರಭದ್ರೇಶ್ವರ ಯುವಕ ಸಂಘ	ಅಪರಾಗಿ	6280
96.	ವಾಲ್ಮೀಕಿ ಯುವಕ ಮಂಡಳ	ವಣ್ಣೂರ	6281
97.	ಗಾಂಧಿ ಯುವಕ ಮಂಡಳ	ಬಸರಿಖೋಡ	6398
98.	ಶ್ರೀ.ಮಲಪ್ರಭಾ ಯುವಕ ಸಂಘ	ಹುಣಶೀಕಟ್ಟಿ	6479
99.	ನವಚೇತನ ಯುವಕ ಸಂಘ	ಹಿರೇನಂದಿಹಳ್ಳಿ	6480
100.	ಮಹರ್ಷಿ ವಾಲ್ಮೀಕಿ ಯುವಕ ಸಂಘ	ಕೊಳದೂರ	6406
101.	ಶ್ರೀ.ಛತ್ರಪತಿ ಶಿವಾಜಿ ಯುವಕ ಸಂಘ	ಕಾರಗೊಳ್ಳಿ	6356
102.	ರಾಣಿಸುಗರ ಯುವಕ ಮಂಡಳ	ಸುಗರ್‌ಫ್ಯಾಕ್ಟರಿ ಎಂಕೆ ಹುಬ್ಬಳ್ಳಿ	6850
103.	ಸ್ವಾಮಿ ವಿವೇಕಾನಂದ ಯುವಕ ಸಂಘ	ತಿಗಡೊಳ್ಳಿ	6506
104.	ಶ್ರೀ.ಗ್ರಾಮದೇವಿ ಯುವಕ ಸಂಘ	ದೇಶನೂರ	-
105.	ಶ್ರೀ.ಚನ್ನಬಸವೇಶ್ವರ ಯುವಕ ಮಂಡಳ	ಹುಣಸಿಕಟ್ಟಿ	6524
106.	ನವಭಾರತ ಯುವಕ ಮಂಡಳ	ಚನ್ನಮ್ಮ ಕಿತ್ತೂರು	6593
107.	ಅಕ್ಕಮಸಾದೇವಿ ಯುವತಿ ಮಂಡಳಿ	ನೇಸರಗಿ	6610
108.	ಶ್ರೀ.ಚನ್ನವೀರಜೇಂದ್ರ ಯುವಕ ಮಂಡಳ	ನೇಸರಗಿ	6611
109.	ಶ್ರೀ.ಬಸವೇಶ್ವರ ಯುವಕ ಮಂಡಳ	ಸೋಮನಕಟ್ಟಿ	6620
110.	ಶ್ರೀ.ಚನ್ನವಿಶಬೇಂದ್ರ ಯುವಕ ಮಂಡಳ	ಸಂಪಗಾವ	6632
111.	ಡಾ.ಬಿ.ಆರ್.ಅಂಬೇಡ್‌ಕರ್ ಯುವಕ ಮಂಡಳ	ಸಂಗೊಳ್ಳಿ	6642

112.	ಜಗಜ್ಯೋತಿ ಬಸವೇಶ್ವರ ಯುವಕ ಮಂಡಳ	ಬೈಲಹೊಂಗಲ	6643
113.	ವಿಶ್ವಜ್ಯೋತಿ ಯುವಕ ಮಂಡಳ	ಕರಡಿಗುದ್ದಿ	6647
114.	ಬಸವೇಶ್ವರ ಕ್ರೀಡಾ ಯುವಕ ಮಂಡಳ	ಎಂಕೆ ಹುಬ್ಬಳ್ಳಿ	6651
115.	ಗಜಾನನ ಹವ್ಯಾಸಿ ಯುವಕ ಮಂಡಳ	-ಸದರ-	6655
116.	ಬೇರದೇಶ ಯುವಕ ಮಂಡಳ	ಬಿದರಗಡ್ಡಿ	6664
117.	ಸ್ವಾಮಿ ವಿವೇಕಾನಂದ ಯುವಕ ಮಂಡಳ	ಸುತಗಟ್ಟಿ	6680
118.	ಇಂದಿರಾ ನಗರ ಯುವಕ ಮಂಡಳ	ಬೈಲಹೊಂಗಲ	6714
119.	ಬನಶಂಕರಿ ದೇವಿ ಯುವಕ ಮಂಡಳ	ದೇಶನೂರ	6727
120.	ಗುರು ಮಡಿವಾಳೇಶ್ವರ ಯುವಕ ಮಂಡಳ	ಹಿರೇಮೇಳ	6763
121.	ಬಸವೇಶ್ವರ ಯುವಕ ಮಂಡಳ	ಚ.ಕಿತ್ತೂರು	6764
122.	ಬಿ.ಆರ್.ಅಂಬೇಡ್‌ಕರ್ ಯುವಕ ಮಂಡಳಿ	ಬೈಲಹೊಂಗಲ	6765
123.	ಕಲಮೇಶ್ವರ ಯುವಕ ಮಂಡಳ	ಹಳಿನಾಗಲಾಪೂರ	6766
124.	ಬಸವೇಶ್ವರ ಯುವಕ ಮಂಡಳ ಬೂಡರಕಟ್ಟಿ		6767

ಅನುಬಂಧ-2

ಸವದತ್ತಿ ತಾಲ್ಲೂಕಿನಲ್ಲಿ ನೊಂದಣಿಯಾಗಿರುವ ಯುವಕ ಸಂಘಗಳ ಪಟ್ಟಿ.

ಅನಂ	ಸಂಘದ ಹೆಸರು	ಗ್ರಾಮ	ನೋಂದಣಿ ಸಂಖ್ಯೆ
1.	ಬಸವೇಶ್ವರ ಯುವಕ ಮಂಡಳ	ಕರೀಕಟ್ಟಿ	1028
2.	ಸಿದ್ದೇಶ್ವರ ಯುವಕ ಮಂಡಳ	ಶಿರಸಂಗಿ	1029
3.	ಬಸವೇಶ್ವರ ಯುವಕ ಮಂಡಳ	ಬನಿದೋಣಿ	1030
4.	ಜೈ ಕರ್ನಾಟಕ ಯುವಕ ಮಂಡಳ	ಬೆನಕಟ್ಟಿ	1032
5.	ಬಸವೇಶ್ವರ ಯುವಕ ಮಂಡಳ		
6.	ತರುಣ ಯುವಕ ಮಂಡಳ	ಯಕ್ಕೇರಿ	1037
7.	ಸಂಗಮೇಶ್ವರ ಯುವಕ ಮಂಡಳ	ಶಿರಡಿ	1035
8.	ಯುವಕ ರೈತ ಸಂಘ	ಶಿಂಧೋಗಿ	1038
9.	ಕಾಡಸಿದ್ದೇಶ್ವರ ಯವಕ ಮಂಡಳಿ	ಸವದತ್ತಿ	1053
10.	ವೀರಭದ್ರೇಶ್ವರ ಯುವಕ ಮಂಡಳ	ಹಿ.ಉಳ್ಳಿಗೇರಿ	1059
11.	ಬಸವೇಶ್ವರ ಯುವಕ ಮಂಡಳಿ	ತಲ್ಲೂರ	1060
12.	ಬಸವೇಶ್ವರ ಯುವಕ ಮಂಡಳ	ಜಾಲಿಕಟ್ಟಿ	1061
13.	ತರುಣ ರೈತ ಸಂಘ	ಹೊಸೂರ	1062
14.	ಸಿದ್ದೇಶ್ವರ ಯವಕ ಮಂಡಳ	ಚಳಕಿ	1092
15.	ಬಸವೇಶ್ವರ ಯುವಕ ಮಂಡಳ	ಬಂಗಾರಹಳ್ಳಿ	1100
16.	ಬರಂತೇಶ್ವರ ಯೂತ್ ಕ್ಲಬ್	ಗೊಪನಿಕೊಪ್ಪ	1209
17.	ಬಸವೇಶ್ವರ ಯುವಕ ಮಂಡಳ	ಉಟ್ನಾಳ	

18.	ರೈತ ಯುವಕ ಮಂಗಳ	ಮುರಗೋಡ	1300
19.	ಪರಶುರಾಮ ಯುವಕ ಮಂಡಳ	ಉಗರಗೋಳ	1298
20.	ನೆಹರು ಯುವಕ ಮಂಡಳ	ರುದ್ರಾಪೂರ	1295
21.	ಬಸವೇಶ್ವರ ಯುವಕ ಮಂಡಳ	ಇನಾಮಹೊಂಗಲವೂ	1301
22.	ಸಂಗಮೇಶ್ವರ ಯುವಕ ಮಂಡಳ	ಅಚಮಟ್ಟಿ	1207
23.	ಮಹಾಂತೇಶ ಯುವಕ ಮಂಡಳ	ಕುರುಬಗಟ್ಟಿ	1209
24.	ಸಂಗಮೇಶ್ವರ ಯುವಕ ಮಂಡಳ	ಹಿಟ್ಟಣಗಿ	1752
25.	ಮಾರುತಿ ಯುವಕ ಮಂಡಳ	ಬಸರಗಿ	1793
26.	ಮಹಾಂತೇಶ ಯುವಕ ಮಂಡಳ	ಸತ್ತಿಗೇರಿ	1913
27.	ಡಾ.ಅಂಬೇಡ್ಕರ್ ಯುವಕ ಮಂಡಳ	ಮುನವಳ್ಳಿ	2409
28.	ಡಾ.ಅಂಬೇಡ್ಕರ್ ಯುವಕ ಮಂಡಳ	ಸವದತ್ತಿ	2379
29.	ಹನುಮಾನ್ ಯುವಕ ಮಂಡಳ	ಹಲ್ಯಾಪೂರ	2479
30.	ವೆಂಗಟೇಶ್ವರ ಯುವಕ ಮಂಡಳ	ಯಲ್ಲಮ್ಮ ತಾಂಡ	3001
31.	ಶ್ರೀ.ಮಾರುತಿ ಯುವಕ ಮಂಡಳ	ಜಕಬಾಳ	3002
32.	ಬಸವೇಶ್ವರ ಯುವಕ ಮಂಡಳ	ಸವದತ್ತಿ	1960
33.	ವಿಜಯ ಯುವಕ ಮಂಡಳ	ಯರಗಟ್ಟಿ	3067
34.	ಸುಭಾಶ್‌ಚಂದ್ರ ಯುವಕ ಮಂಡಳ	ಹೂಲಿ	
35.	ವೆಂಕಟೇಶ್ವರ ಯುವಕ ಮಂಡಳ	ಕಾರ್ಲಿಕಟ್ಟಿ ತಾಂಡ	3020
36.	ಶ್ರೀ.ಕಲ್ಮೇಶ್ವರ ಯುವಕ ಮಂಡಳ	ಹಿರೂರ	3168
37.	ಶ್ರೀ.ಕಾಳಿಕಾ ಕುಂಬಾರ ಯುವಕ ಮಂಡಳ	ಸವದತ್ತಿ	2611
38.	ಶ್ರೀ.ಬಸವೇಶ್ವರ ಯುವಕ ಮಂಡಳ	ಮಾಟಲಾಳ್ಳಿ	2611

39.	ರಾಮ ಲಿಂಗೇಶ್ವರ ಯುವಕ ಮಂಡಳ	ಯಂಡ್ರಾವಿ	2684
40.	ಶ್ರೀ.ಸ್ವಾಮಿ ವಿವೇಕಾನಂದ ಯುವಕ ಮಂಡಳ	ಅರ್ಲಕಟ್ಟಿ ಕೆ ಎಂ	2708
41.	ಶ್ರೀ.ಗುರುಸಂಗಮೇಶ್ವರ ಯುವಕ ಮಂಡಳ	ಹೂಲಿ	2728
42.	ಮಾರುತಿ ಯುವಕ ಮಂಡಳಿ	ಹಿ ಉಳ್ಳಿಗೇರಿ	2727
43.	ಸಿದ್ದೇಶ್ವರ ಯುವಕ ಮಂಡಳ	ಶ್ರೀ ರಂಗಪೂರ	2760
44.	ಶ್ರೀ.ಮಾರುತಿ ಯುವಕ ಮಂಡಳ	ಆರ್ಟ್‌ಗಲ್	2761
45.	ಯೂತ್ ಸ್ಪಾರ್ ಅಸೋಸಿಯೇಶನ್	ಯರಗಟ್ಟಿ	2769
46.	ಶ್ರೀ.ಗಜಾನನ ಯುವಕ ಮಂಡಳಿ	ಶಿವಾಪೂರ	2741
47.	ಶ್ರೀ.ಬಸವೇಶ್ವರ ಯುವಕ ಮಂಡಳ	ಚಿಕ್ಕುಂಟಿ	1099
48.	ಜೈ ಕರ್ನಾಟಕ ಯುವಕ ಮಂಡಳ	ಮುಸವಳ್ಳಿ	2787
49.	ಅಂಬೇಡ್ಕರ್ ಯುವಕ ಮಂಡಳ	ಕರದಾಳ	1306
50.	ರೈತ ಯುವಕ ಸಂಘ	ಕರದಾಳ	1306
51.	ವೆಂಕಟೇಶ್ವರ ಯುವಕ ಮಂಡಳ	ರುದ್ರಾಪೂರ ತಾಂಡೆ	1309
50.	ನವಾಭಾರತ ಯುವಕ ಮಂಡಳ	ಮುರಗೋಡ	5997
51.	ಶ್ರೀ ಬಸವೇಶ್ವರ ಯುವಕ ಮಂಡಳ	ಬೂದನೂರ	5680
52.	ಶ್ರೀ ವೀರಭದೇಶ್ವರ ಯು ಮಂ	ಸೂಪ್ಪಡ್ಡ	5700
53.	ಶ್ರೀ ಜಗಜ್ಯೋತಿ ಯು ಮಂ	ರುದ್ರಾಪೂರ	5701
54.	ಶ್ರೀಮಾಡವಾಳೇಶ್ವರ ಯು ಮಂ	ದುಂಡನಕೊಪ್ಪ	5723
55.	ಶ್ರೀ ಬಾಲಗಜಾನನ ಯು ಮಂ	ಬಡ್ಲಿ	3487
56.	ಶ್ರೀ ಮಡಿವಾಳೇಶ್ವರ ಯು ಮಂ	ದುಂಡನ ಕೊಪ್ಪ	5723
57.	ಗ್ರಾಮದೇವಿ ಗಜಾನನ ಯು ಮಂ	ಮುರಗೋಡ	5723

58.	ಶ್ರೀ ಭಗವಾನ ಮಹಾವೀರ ಯು ಮಂ	ಸವದತ್ತಿ	5743
59.	ಶ್ರೀ ವಾಲ್ಮೀಕಿ ಯು ಮಂ	ಸೋಮಪೂರ	5747
60.	ಶ್ರೀ ಕಲ್ಮೇಶ್ವರ ಯು ಮಂ	ಹೂಲಿಕಟ್ಟೆ	2298
61.	ಶ್ರೀ ಆಡವಿಸಿದ್ದೇಶ್ವರ ಯು ಮಂ	ಯರಝರ್ವಿ	5750
62.	ನೇತಾಜಿ ಯು ಮಂ	ಸೊಪ್ಪಡ್ಲ	5751
63.	ಶ್ರೀ ಬಸವೇಶ್ವರ ಯು ಮಂ	ಹಲಕಿ	5788
64.	ಶ್ರೀ ಕೃಷ್ಣಿ ಯು ಮಂ	ಬೂಡಿಗೊಪ್ಪ	5773
65.	ಶ್ರೀ ಗಜಾನನ ಯು ಮಂ	ಗುರ್ಲಹೊಸೂರು	5865
66.	ಶ್ರೀ ಮಹರ್ಷಿ ಯು ಮಂ	ಚಚಡಿ	5865
67.	ಶ್ರೀ ಸೋಮು ಯು ಮಂ	ಅಸುಂಡಿ	5912
68.	ನಾಗರ ಯುವಕ ಮಂಡಳ	ಸವದತ್ತಿ	5921
69.	ಶ್ರೀ ವೀರಭದ್ರೇಶ್ವರ ಯು ಮಂ	ಸವದತ್ತಿ	5597
70.	ಶ್ರೀ ಗುರು ಮಹಾಂತೇಶ್ವರ ಯು ಮಂ	ರೈನಾಪೂರ	5953
71.	ಶ್ರೀ ವೀರಭದ್ರೇಶ್ವರ ಯು ಮಂ	ಅಸುಂಡಿ	5954
72.	ಶ್ರೀ ಗುರು ಮಹರ್ಷಿ ವಾಲ್ಮೀಕಿ	ಯರಝರ್ವಿ	5958
73.	ಶ್ರೀ ವೀರಭದ್ರೇಶ್ವರ ಯು ಮಂ	ಸವದತ್ತಿ	5985
74.	ಶ್ರೀ ಛತ್ರಪತಿ ಶಿವಾಜಿ ಯು ಮಂ	ಸವದತ್ತಿ	2945
75.	ಶ್ರೀ ಬಸವೇಶ್ವರ ಯು ಮಂ	ಹಿಟ್ಟಣಗಿ	3070
76.	ಕರಿಯಮ್ಮಾದೇವಿ ಯು ಮಂ	ಸವದತ್ತಿ	5976
77.	ಕರ್ನಾಟಕ ಸಾಂಸ್ಕೃತಿಕ ಹಾಗೂ ಕ್ರೀಡಾ	ಉಗರಗೊಳ	5977
78.	ಮಹಾತ್ಮಾ ಗಾಂಧಿ ಯು ಮಂ	ದಢೇರಕೊಪ್ಪ	5978

79.	ಜೈ ಕರ್ನಾಟಕ ಯು ಮಂ	ಗುರ್ಲಹೊಸೂರ	5994
80.	ಶ್ರೀ ಮರ್ಲಿಕಾರ್ಜುನ ಯು ಮಂ	ರೈನಾಪುರ	5995
81.	ವೀರಭದ್ರೇಶ್ವರ ಯು.ಮಂ	ಸೊಪ್ಪಡ್ಲ	6017
82.	ಕರಿಯಮ್ಮಾ ಯು ಮಂ	ಶಿರಸಂಗಿ	1351
83.	ಮಲ್ಲಿಕಾರ್ಜುನ ಯು ಮಂ	ಸವದತ್ತಿ	1364
84.	ಶಿವಶಕ್ತಿ ಯು ಮಂ	ಹಾರೊಗೊಪ್ಪ	6085
85.	ಕಲ್ಮೇಶ್ವರ ಯು ಮಂ	ಚಿಕ್ಕುಂಬಿ	6107
86.	ಗಜಾನನ ಯು ಮಂ	ಸವದತ್ತಿ	6096
87.	ಶೂರ ಸಂಗೊಳ್ಳಿ ಯು ಮಂ	ಮುರಗೋಡ	6093
88.	ವಾಲ್ಮೀಕಿ ಯು ಮಂ	ಗುಡಮಕೇರಿ	6117
89.	ಛತ್ರಪತಿ ಶಿವಾಜಿ	ಗುರ್ಲಹೊಸೂರ	6161
90.	ಭಾರತರತ್ನ ಅಂಬೇಡ್ಕರ್ ಯು ಮಂ	ಹೂಲಿ	6173
91.	ನೆಹರು ಯು ಮಂ	ಜೀವಾಪೂರ	6256
92.	ನವ ಶಕ್ತಿ ಯು ಮಂ	ಹಿರೇಕುಂಬಿ	6267
93.	ಸಂಗ್ರಾಮ ಸುಧಾರಣಾ	ಹಲಕಿ	6267
94.	ಶ್ರೀ ಲಿಂಗರಾಜ ಯುಮಂ	ಶಿರಸಂಗಿ	6268
95.	ಪರಮಾತೇಶ್ವರ ಯು ಮಂ	ಗುರ್ಲಹೊಸೂರು	6288
96.	ಶ್ರೀ ವಾಲ್ಮೀಕಿ ಯುವಕ ಮಂಡಳ	ರಾಮಪೂರ ಸೈಟ್	6270
97.	ಕಲ್ಮೇಶ್ವರ ಯುವಕ ಮಂಡಳ	ಕರೀಕಟ್ಟಿ	6277
98.	ಶ್ರೀ ವಾಲ್ಮೀಕಿ ಯುವಕ ಮಂಡಳ	ಮುರಗೋಡ	6278
99.	ಶ್ರೀ ಅಕ್ಷರಪ್ರಭಾ ಯುವಕ ಮಂಡಳ	ಶಿರಸಂಗಿ	6284

100.	ಶ್ರೀ ಪವಾಡ ಸಿದ್ದೇಶ್ವರ ಯುವಕ ಮಂಡಳ	ಹಿರೇಕುಂದ	6289
101.	ಶ್ರೀ ಕನಕದಾಸ ಯುವಕ ಮಂಡಳ	ಸವದತ್ತಿ	3090
102.	ಶ್ರೀ ಡಾ: ಅಂಬೇಡ್ಕ್ರ ಯುವಕ ಮಂಡಳ	ಹಂಟನಾಳ	2843
103.	ನವಭಾರತಿ ಯುವಕ ಮಂಡಳ	ಹಿರೇಕುಂಟೆ	6308
104.	ಶ್ರೀಶಾರದ ಯುವಕ ಮಂಡಳ	ಅರ್ಟಗಲ್	6314
105.	ಶ್ರೀ ಕ್ರಾಂತಿವೀರ ಸಂಗೊಳ್ಳಿ	ಹೂಲಿ	6315
106.	ಶ್ರೀ ಸಂಘರ್ಷ ಸ್ಪೋರ್ಟ್ಸ ಯು.ಕ್ಲಬ್	ಸವದತ್ತಿ	6318
107.	ಶ್ರೀ ಕಲ್ಮೇಶ್ವರ ಯುವಕ ಮಂಡಳ	ಕಲ್ಲಾಪೂರ	6258
108.	ಶ್ರೀ ಸಿದ್ದಲಿಂಗೇಶ್ವರ ಯು.ಮಂ	ಅಸುಂಡಿ	6339
109.	ಶ್ರೀ ಯುವ ಗಜಾನನ ಯು.ಮಂಡಳ	ಹೊಸೂರ	6340
110.	ಶ್ರೀ ವರುಣ ಯುವಕ ಮಂಡಳ	ಗುರ್ಲಹೊಸೂರ	6341
111.	ಶ್ರೀ ಸ್ವಾಮಿ ವಿವೇಕಾನಂದ ಯು.ಮಂ	ಜಾಲಿಕಟ್ಟಿ	6352
112.	ಡಾ: ಅಂಬೇಡ್ಕರ ಯು.ಮಂ	ಯರಗಟ್ಟಿ	
113.	ಮಹರ್ಷಿ ವಾಲ್ಮೀಕಿ ಯು.ಮ	ರಾಮಾಪೂರ ಸೈಟ	6255
114.	ಚಾಲಲೀಲಾ ಸಂಗಮೇಶ್ವರ ಯು.ಮ	ಸಸರಗಿ	1793
115.	ಗಜಾನನ ಯುವಕ ಮಂಡಳ	ಕುರುವಿನಕೊಪ್ಪ	2709
116.	ಜ.ಕಲ್ಮೇಶ್ವರ ಯುವಕ ಮಂ	ಚುಳಕಿ	6366
117.	ಶ್ರೀ ಹನುಮಾನ್ ಯು.ಮ	ಗುಡಮಕೇರಿ	6376
118.	ವೀರಸಿಂಧೂರ ಲಕ್ಷ್ಮಣ ಯು.ಮಂ	ಹಂಚಿನಾಳ	6375
119.	ಗುರುಬಸವೇಶ್ವರ ಯು.ಮ	ಮಲ್ಲೂರ	6382
120.	ನೂತನ ಗೆಳೆಯರ ಬಳಗ	ಮುನವಳ್ಳಿ	6397

121.	ಗುರು ಬೀರೇಶ್ವರ ಯು.ಮ	ಅಸುಂಡಿ	6401
122.	ಸ.ಸ.ಮಾಧವಾನಂದ	ಮಂಟನೂರ	6478
123.	ಕನಕದಾಸ ಯುವಕ ಮಂಡಳ	ಆಲದಕಟ್ಟಿ	6481
124.	ನೆಹರು ಯುವಕ ಮಂಡಳ	ಹಿರೇಕೊಪ್ಪ	6485
125.	ಕರಿಯಮ್ಮಾದೇವಿ ಸಂಘ	ಯಕ್ಕೇರಿ	6486
126.	ಸಿದ್ದಲೀಂಗೇಶ್ವರ ಯು.ಮ	ಸವದತ್ತಿ	6487
127.	ವೀರಭದ್ರೇಶ್ವರ ಕೃಷಿ ಯು.ಮ	ಚುಳಕಿ	6488
128.	ಸಿದ್ದೇಶ್ವರ ಯು.ಮಂ	ಗೊರವನಕೊಳ್ಳ	6492
129.	ಬೀರೇಶ್ವರ ಯು.ಮ	ಇನಾಂ- ಗೋವನಕೊಪ್ಪ	3171
130.	ಬಸವೇಶ್ವರ ಯು.ಮಂ	ಹರಳಕಟ್ಟಿ	6502
131.	ಶ್ರೀ ಹದಕಟ್ಟ ಬಸವೇಶ್ವರ ಯು.ಮ	ಹೊಸೂರ	6503
132.	ವಿದ್ಯಾನಗರ ಯು.ಮ	ಅಸುಂಡಿ	6319
133.	ಶ್ರೀ ಕೃಷ್ಣ ಯು.ಮ	ಸವದತ್ತಿ	6520
134.	ಸಮಾಜ ಸೇವಾ ಸಂಘ	ಇಂಚಲ	6518
135.	ಶ್ರೀ ಗುರು ಬಾಲಲೀಲಾ ಸಂಗಮೇಶ್ವರ	ಹರಳಕಟ್ಟಿ	6544
136.	ಶ್ರೀ ಕನಕದಾಸ ಯು.ಮ	ಕಾತ್ರಾಳ	6547
137.	ಡಾ: ಅಂಬೇಡ್ಕರ ಯುವಕ ಮಂಡಳ	ಮರಕುಂಟಿ	6560
138.	ಸುಭಾಶ್ಚಂದ್ರ ಭೋಸ್ ಯು.ಮ	ಹಂಚಿನಾಳ	2950
139.	ಶ್ರೀ ರಾಮಲಿಂಗೇಶ್ವರ ಯು.ಮ	ಸತ್ತಿಗೇರಿ	2986
140.	ಸುಭಾಸಚಂದ್ರ ಬೋಸ್ ಯುವಕ ಮಂಡಳ	ಸತ್ತಿಗೇರಿ	6576

141.	ಶ್ರೀ ವಾಲ್ಮೀಕಿ ಯು.ಮ	ಜೀತಾಳ ಕಡಬಿ	6577
142.	ಶ್ರೀ ಮಹಾಯೋಗಿ ವೇಮನ ಯು.ಮ	ಯರಗಟ್ಟಿ	6594
143.	ಶ್ರೀ ಶ್ರೀ ಲಕ್ಷ್ಮೀದೇವರ ಯುವಕ ಮಂ	ಬೊಡಕಡಬಿ	6595
145.	ಶ್ರೀ ಮಹಾತೇಶ್ವರ ಯು.ಮ	ಮಾಂಡೋರ	6581
146.	ಸಮಾಜ ಸೇವಾ ಯು.ಮ	ಇಂಚಲ	6518
147.	ಶ್ರೀ ಬಸವೇಶ್ವರ ಯು.ಮ	ಸುತಗಟ್ಟಿ	6608
148.	ಶ್ರೀ ವಿರಭದ್ರೇಶ್ವರ ಯು.ಮ	ಇಂಚಲ	6641
149.	ನವಚೇತನ ಯು.ಮ	ಸುಗ್ಗಾನಟ್ಟಿ	6686
150.	ಶ್ರೀದುರ್ಗಾದೇವಿ ಯು.ಮ		6685
151.	ಯುವಕ ವಾಲ್ಮೀಕಿ ಯು.ಮ	ಹೂಲಿ	6696
152.	ಶ್ರೀ ಪಂಚಾಲಿಂಗೇಶ್ವರ ಯು.ಮ	ಮುನವಳ್ಳಿ	6697
153.	ಶ್ರೀ ಮರುಳ ಸಿದ್ದೇಶ್ವರ ಯು.ಮ	ಹೂಲಿ	6698
154.	ಶ್ರೀ ಶಿವಾನಂತ ಸ್ವಾಮಿ ಯು.ಮ	ಬನ್ನಿರೋಣ	6703
155.	ಶ್ರೀ ಮಾರುತೇಶ್ವರ ಯು.ಮ	ಇನಾಂಹೊಂಗಲ	6710
156.	ನೇತಾಜಿ ಯು.ಮ	ಕರೀಕಟ್ಟಿ	6711
157.	ಸಂಸ್ಕೃತಿ ಯುವಕ ಮಂಡಳ	ಬನಿರೋಣ	6706
158.	ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ	ಹಂಚಿನಾಳ	6732
159.	ಬಸವೇಶ್ವರ ಯು.ಮ.ಅಸೂಂಡಿ	ಅಸುಂಡಿ	1367
160.	ಬಸವೇಶ್ವರ ಯು.ಮ ಮುತವಾಡ	ಮುತವಾಡ	1515
161.	ಮಾರುತಿ ಯು.ಮ	ಏಣಗಿ	1993
162.	ಅಂಬೇಡ್ಕರ ಯು.ಮ	ಮುನವಳ್ಳಿ	6518

163.	ಕಲ್ಮೇಶ್ವರ ಯು.ಮ	ಹರ್ಲಾಪೂರ	6581
164.	ಬಜಾರ ಯು.ಮ	ಬಡ್ಲಿತರಾಡ	2489
165.	ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ	ದಡೇರಕೊಪ್ಪ	6581
166.	ಜೈಕರ್ನಾಟಕ ಯು.ಮ	ಹೊಸೂರ	3096
167.	ಸ್ವಾಮಿ ವಿವೇಕಾನಂದ ಯು.ಮ		3114
168.	ಶ್ರೀ ಜನಜ್ಯೋತಿ ಬಸವೇಶ್ವರ ಯು.ಮ		2623
169.	ಕ್ರಾಂತಿವೀರ ಸಂಗೊಳ್ಳಿ ರಾಯಣ ಮಂ	ದಢೇರಕೊಪ್ಪ	
170.	ಜೈ ಕರ್ನಾಟಕ ಯು.ಮ	ಮುನವಳ್ಳಿ	2787
171.	ಸಂತೋಶ ಯು.ಮ	ಹಂಚಿನಾಳ.	3944
172.	ಮಾರುತಿ ಯು.ಮ	ಮಜನೂರ್	1305
173.	ಶ್ರೀ ವಿಜಯ ಮಹಾಂತೇಶ್ವರ ಯು.ಮ	ಸೊಪ್ಪಡ್ಲ	3492
174.	ಶ್ರೀ ಬಸವೇಶ್ವರ ಯು.ಮ	ಮರಕುಂಬಿ	3556
175.	ಜಾಗೃತಿ ಯು.ಮ	ಯರಗಟ್ಟಿ	5653
176.	ಮಹಾಂತೇಶ ಯು.ಮ	ಕಟಮಳ್ಳಿ ತಾಂಡ	1392
177.	ವೀರೇಶ್ವರ ಯು.ಮ	ಉಗರಗೋಳ	5669
178.	ನವಭಾರತ ಯು.ಮ	ಮುರಗೋಡ	5697
179.	ನವಜೀವನ ಯು.ಮ	ಮುರಗೋಡ	3116
180.	ವಾಲ್ಮೀಕಿ ಯುವ.ಮಂಡಳ	ಗುಡುಮಕೆರಿ	
181.	ಬಂಜಾರ ಯು.ಮ	ಕಾರ್ಲಿಕಟ್ಟಿ ತಾಂಡ	
182.	ಸ್ವಾಮಿ ವಿವೇಕಾನಂದ ಯು.ಮ	ವಣುದಾಲಿಕಾಲ್	
183.	ಯುವಕ ಮಂಡಳ	ಮುರುಗೋಡ್	

184.	ಸಿದ್ದೇಶ್ವರ ಯುವತಿ ಮಂಡಳ	ಚುಲಕಿ	
185.	ರಾಣಿ ಚೆನ್ನಮ್ಮ ಯುವತಿ ಮಂಡಳ	ಯರಗಟ್ಟಿ	3068
186.	ಕಸ್ತೂರಿಬಾ ಯುವತಿ ಮಂಡಳ	ಹೊಸೂರ	2446
187.	ಜಾಗೃತಿ ಯುವತಿ ಮಂಡಳ	ಇನಾಂಹೊಂಗಲ	2462
188.	ವೀರಭದ್ರೇಶ್ವರ ಯುವತಿ ಮಂಡಳ	ಸೂಪ್ಪಣ	6017
189.	ಲಕ್ಷ್ಮಿದೇವಿ ಯುವತಿ ಮಂಡಳ	ಹೂಲಿ	4981
190.	ಯುವತಿ ಮಂಡಳ	ಮುರಗೋಡ	
191.	ಯುವತಿ ಮಂಡಳ	ಮೊನವಳ್ಳಿ	
192.	ಮಲಪ್ರಭಾ ಯುವತಿ ಮಂಡಳ	ಸವಿಲುತೀರ್ಥ	6723
193.	ಯುವತಿ ಮಂಡಳ	ಬೆಟಸೂರು	

ಬೈಲಹೊಂಗಲ ನಗರದಲ್ಲಿರುವ ಸಂಗೊಳ್ಳಿ ರಾಯಣ್ಣನ ಮೂರ್ತಿಯ ಸುತ್ತಲೂ ಅಭಿವೃದ್ಧಿ.

2891:(3880)

ಶ್ರೀ ಮಹಾಂತೇಶ ಎಸ್.ಕೌಜಲಗಿ (ಬೈಲಹೊಂಗಲ) ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಗೊಳ್ಳಿ ರಾಯಣ್ಣನ ಮೂರ್ತಿಯ ಸುತ್ತಲು ಅಭಿವೃದ್ಧಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದ್ದಿತು?

ಆ) ಈ ಹಣದಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಧರಿಸಲಾಗಿದೆ?

ಇ) ಬೈಲಹೊಂಗಲ ನಗರದಲ್ಲಿರುವ ಸಂಗೊಳ್ಳಿ ರಾಯಣ್ಣನ ಮೂರ್ತಿಯ ಸುತ್ತಲೂ ಹೊನಲು ಬೆಳಕು ಯೋಜನೆ ಹಾಗೂ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀಮತಿ.ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ರೂ.5.00 ಲಕ್ಷಗಳು

ಆ) ಜಿಲ್ಲಾ ಮಟ್ಟದ ಸಮಿತಿಯ ತೀರ್ಮಾನದಂತೆ ಈ ಕೆಳಕಂಡ ಕಾಮಗಾರಿಗಳನ್ನು ತೆಗೆದುಕೊಳ್ಳಲು ತೀರ್ಮಾನಿಸಲಾಗಿದೆ.

1. ಸಂಗೋಳ್ಳಿರಾಯಣ್ಣನ ಪ್ರತಿಮೆ ಸ್ಥಾಪನೆ.

2. ಹಾಗೂ ಸುತ್ತ ಮುತ್ತಲು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದು?

ಇ) ಇತ್ತೀಚೆಗೆ ಜಿಲ್ಲಾಮಟ್ಟದ ಸಮಿತಿಯನ್ನು ರಚಿಸಿದ್ದು ಸಮಿತಿಯ ಶಿಫಾರಸ್ಸಿನಂತೆ ಅಗತ್ಯವಿರುವ ಹಣವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಮೈಸೂರು ನಗರದಲ್ಲಿ ಮಹಿಳಾ ವಿದ್ಯಾರ್ಥಿಗಳಿಗೆ ಸ್ವಯಂ ಉದ್ಯೋಗ

2892 (3938)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಸ್ವಯಂ ಉದ್ಯೋಗ ಚಟುವಟಿಕೆ ಕೈಗೊಳ್ಳುವ ಸಲುವಾಗಿ ಮಹಿಳಾ ವಿದ್ಯಾರ್ಥಿಗಳಿಗೆ ಮಹಿಳಾ ಸರ್ಕಾರಿ ಐ.ಟಿ.ಐ. ಅವಶ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ, 1998-99ನೇ ಸಾಲಿನಲ್ಲಿ ಮಹಿಳಾ ಸರ್ಕಾರಿ ಐ.ಟಿ.ಐ ಪ್ರಾರಂಭಿಸುವ ಬಗ್ಗೆ ಸರ್ಕಾರದವರು ಕೈಕೊಂಡಿರುವ ಕ್ರಮವೇನು?

ಶ್ರೀ ಬಿ.ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಉದ್ಯೋಗ ವಿನಿಮಯ ಕಛೇರಿಯ ಹುದ್ದೆಗಳ ನೇಮಕಾತಿ

2893:(3939)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕಛೇರಿಗಳ ಸಂಖ್ಯೆ ಎಷ್ಟು; ಈ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು; ಇವುಗಳ ಕಾರ್ಯ ನಿರ್ವಹಣೆಗೆ ತಗಲುವ ವೆಚ್ಚವೆಷ್ಟು?

ಆ) ಎಲ್ಲಾ ಇಲಾಖೆಗಳ ಹುದ್ದೆಗಳ ನೇಮಕಾತಿಯನ್ನು ಉದ್ಯೋಗ ವಿನಿಮಯ ಕಚೇರಿಯ ಮೂಲಕವೇ ಮಾಡಲಾಗುತ್ತಿದೆಯೇ?

ಇ) ಕೇಂದ್ರ ಸರ್ಕಾರ ಇತ್ತೀಚೆಗೆ ನೇಮಕಾತಿ ಮಾಡುವಲ್ಲಿ ಹೊರಡಿಸಿರುವ ಆದೇಶವೇನು. ಈ ಆದೇಶ ಪ್ರಕಾರ ರಾಜ್ಯಗಳ ಯಾವುದೇ ಇಲಾಖೆಯಲ್ಲಿ ಯಾವುದೇ ಹುದ್ದೆಗೆ ನೇಮಕಾತಿ ಮಾಡಬೇಕಾದಲ್ಲಿ ಉದ್ಯೋಗ ವಿನಿಮಯ ಜೇಷ್ಠತಾ ಪಟ್ಟಿ ಜೊತೆಗೆ ಬಹಿರಂಗವಾಗಿ ವೃತ್ತ ಪತ್ರಿಕೆಸುದ್ದಿ ಮಾಧ್ಯಮ ಪ್ರಕಟಣಾ ಫಲಕಗಳಲ್ಲಿ ಪ್ರಕಟಿಸುವುದೆಂಬುದು ನಿಜವೇ?

ಈ) ಜೇಷ್ಠತೆಯ ಅನ್ವಯ ಲಕ್ಷಾಂತರ ನಿರುದ್ಯೋಗಿ ನೊಂದಣಿದಾರರು ಉದ್ಯೋಗವಿಲ್ಲದೆ ಚಿಂತೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಉ) ಹಾಗಿದ್ದಲ್ಲಿ ಉದ್ಯೋಗ ವಿನಿಮಯ ಕಛೇರಿಗಳ ಪಾತ್ರವೇನು ಈ ವಿಷಯದ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಬಿ.ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು):

ಅ) ಉದ್ಯೋಗ ವಿನಿಮಯ ಕಛೇರಿಗಳ ಸಂಖ್ಯೆ - 34

ಸಿಬ್ಬಂದಿ ಸಂಖ್ಯೆ - 480

1997-98ನೇ ಸಾಲಿನ ವೆಚ್ಚ ರೂ. 361.00 ಲಕ್ಷಗಳು

ಆ) ಇಲ್ಲ.

ಇ) ಕೇಂದ್ರ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ಸಂಖ್ಯೆ : 14024:2:96 - ಇಎಸ್‌ಟಿಟಿ (ಡಿ) ದಿನಾಂಕ : 18.5.1998ರ ಅಧಿಕೃತ ಜ್ಞಾಪನದಲ್ಲಿ ನೀಡಲಾಗಿರುವ ಸೂಚನೆಯನ್ವಯ ಕೇಂದ್ರ ಸರ್ಕಾರವು ಖಾಲಿ ಹುದ್ದೆಗಳನ್ನು (ಕೇಂದ್ರ ಲೋಕಸೇವಾ ಆಯೋಗ ಹಾಗೂ ಸಿಬ್ಬಂದಿ ನೇಮಕಾತಿ ಆಯೋಗದ ಮೂಲಕ ಭರ್ತಿ ಮಾಡುವ ಹುದ್ದೆಗಳನ್ನು ಹೊರತುಪಡಿಸಿ) ಸಂಬಂಧಿಸಿದ ಉದ್ಯೋಗ ವಿನಿಮಯ ಕಛೇರಿಗಳಿಗೆ ಅಧಿಸೂಚಿಸುವುದರ ಜೊತೆಗೆ ''ಎಂಪ್ಲಾಯ್‌ಮೆಂಟ್ ನ್ಯೂಸ್'' ಪತ್ರಿಕೆಯಲ್ಲಿ ಪ್ರಕಟಪಡಿಸುವುದಲ್ಲದೆ ಆಯಾ ಕಛೇರಿಯ ಸೂಚನಾ ಫಲಕದಲ್ಲಿ ಸಹ ಮಾಹಿತಿಗಾಗಿ ಪ್ರಕಟಿಸಿ, ಇವುಗಳಿಗೆ ಪ್ರತಿಕ್ರಿಯಿಸಿ ಬಂದಂತಹ ಎಲ್ಲಾ ಅಭ್ಯರ್ಥಿಗಳ ಅರ್ಜಿಗಳನ್ನು ಪರಿಗಣಿಸಬೇಕಾಗಿರುತ್ತದೆ. ಈ ಸೂಚನೆ ರಾಜ್ಯ ಸರ್ಕಾರದ ಹುದ್ದೆಗಳಿಗೂ ಅನ್ವಯಿಸುತ್ತದೆ.

ಈ) ಬಂದಿದೆ.

ಉ) 1959ರ ಉದ್ಯೋಗ ವಿನಿಮಯ ಕೇಂದ್ರಗಳ (ಖಾಲಿ ಹುದ್ದೆಗಳ ಕಡ್ಡಾಯ ಅಧಿಸೂಚನೆ) ಅಧಿನಿಯಮದ ಅನ್ವಯ ಅಧಿಸೂಚಿತವಾಗುವ ಸರ್ಕಾರಿ ವಲಯದ ಹುದ್ದೆಗಳಿಗೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಿಂದ ಜಾರಿಯಲ್ಲಿರುವ ಕಾರ್ಯ ವಿಧಾನಗಳ ರೀತ್ಯ ಅರ್ಹತೆ ಹಾಗೂ ನೋಂದಣಿ ಜೇಷ್ಠತೆ ಆಧಾರ ಅರ್ಹ ಅಭ್ಯರ್ಥಿಗಳ ಪುರಸ್ಕರಣಾ ಕಾರ್ಯ ಎಂದಿನಂತೆ ಮುಂದುವರೆದಿದೆ.

ಅಧಿಸೂಚಿತ ಹುದ್ದೆಗಳ ಭರ್ತಿ ಕಾರ್ಯದಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳ ಪಾತ್ರವೇನೂ ಇರುವುದಿಲ್ಲ.

ದಾವಣಗೆರೆ ನಗರದಲ್ಲಿ ಲೋಕಪಯೋಗಿ ಇಲಾಖೆಯ ವಿಭಾಗೀಯ ಕಛೇರಿ ಪಾರ್ರಂಭಿಸುವುದು

2894 (4017)

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ದಾವಣಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಾವಣಗೆರೆ ನಗರದಲ್ಲಿ ಲೋಕೋಪಯೋಗಿ ಇಲಾಖೆಯ ವಿಭಾಗೀಯ ಕಛೇರಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ, ಅದನ್ನು ಯಾವಾಗ ಮಂಜೂರ್ಮಾಡಿ ಪ್ರಾರಂಭಿಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಹೌದು

ಆ) ಸದ್ಯದಲ್ಲಿಯೇ ಪ್ರಾರಂಭಿಸಲಾಗುವುದು.

ದಾವಣಗೆರೆ ಕ್ಷೇತ್ರಕ್ಕೆ ನಬಾರ್ಡ್ ಸಹಾಯದಿಂದ ಕೈಗೊಳ್ಳಲಾದ ಕಾಮಗಾರಿಗಳು.

2895:(4018)

ಶ್ರೀ ಎಸ್.ಎನ್.ಮಲ್ಲಿಕಾರ್ಜುನ (ದಾವಣಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಬಾರ್ಡ್ ಸಹಾಯದಿಂದ ಕೈಗೊಳ್ಳಲಾದ ಕಾಮಗಾರಿಗಳಾವುವು?

ಆ) ಕಳೆದ ನಾಲ್ಕು ವರ್ಷಗಳಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು? (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು)

ಇ) ದಾವಣಗೆರೆ ವಿಧಾನ ಸಭಾ ಕ್ಷೇತ್ರದಲ್ಲಿ ನಬಾರ್ಡ್ ನೆರವಿನಿಂದ ಕೈಗೊಂಡಿರುವ ಕಾಮಗಾರಿಗಳು ಯಾವುವು? ಹಾಗೂ ಸರ್ಕಾರದ ಮುಂದೆ ಇರುವ ಪ್ರಸ್ತಾವನೆಗಳು ಎಷ್ಟು? (ವಿವರ ನೀಡುವುದು)

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಡಿ ರಸ್ತೆ ಮತ್ತು ಸೇತುವೆ

ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಅ) ಲೋಕೋಪಯೋಗಿ ಇಲಾಖೆಯಡಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ 96-97 97-98 ಹಾಗೂ 98-99 ಸಾಲಿನಲ್ಲಿ ಮಂಜೂರಾತಿ ದೊರೆತಿದ್ದು, ಸದರಿ ಕಾಮಗಾರಿಗಳ ಕ್ಷೇತ್ರವಾರು ಸಂಕ್ಷಿಪ್ತ ವಿವರಗಳನ್ನು ಅನಬಂಧ 'ಅ'ನಲ್ಲಿ ನೀಡಿದೆ. (ಪ್ರಶ್ನೆ ಸಂಖ್ಯೆ 4029ಕ್ಕೆ ನೀಡಿದೆ)

ಇ) ದಾವಣಗೆರೆ ವಿಧಾನ ಸಭಾ ಕ್ಷೇತ್ರದಲ್ಲಿ ದಾವಣಗೆರೆ ಶಾಂತಿಸಾಗರ ರಸ್ತೆಯು ಭಾಗಶಃ ಆರ್.ಐ.ಡಿ.ಎಫ್-2 ರಡಿ ಮಂಜೂರಾಗಿದೆ. ಹಾಗೂ ಆರ್.ಐ.ಡಿ.ಎಫ್-4 ರಡಿ ಸರ್ಕಾರವು 35.00 ಲಕ್ಷ ರೂ.ಗಳ ಮೊತ್ತದಲ್ಲಿ ದಾವಣಗೆರೆ ಮಲ್ಲಗೊಂಡನ ಹಳ್ಳಿ ರಸ್ತೆಯ ಒಂದು ಕಾಮಗಾರಿಯನ್ನು ಗುರುತಿಸಿದೆ.

ದಾವಣಗೆರೆಯಲ್ಲಿ ಜಿಲ್ಲಾ ನ್ಯಾಯಲಯ ಪ್ರಾರಂಭ.

2896:(4019)

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ದಾವಣಗೆರೆ): ಮಾನ್ಯ ಕಾನೂನು ಸಂಸದೀಯ ವ್ಯವಹಾರ ಶಾಸನ ರಚನೆ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆ ಜಿಲ್ಲಾ ನ್ಯಾಯಾಲಯವಿಲ್ಲದೆ ದಾವಣಗೆರೆ ಜಿಲ್ಲಾ ಸೇರಿದ ಹರಪನಹಳ್ಳಿ ತಾಲ್ಲೂಕಿನ ಜನರು ಬಳ್ಳಾರಿಗೆ ಚೆನ್ನಗಿರಿ ಹೊನ್ನಾಳಿ ತಾಲ್ಲೂಕಿನ ಜನರು ಶಿವಮೊಗ್ಗಕ್ಕೆ ದಾವಣಗೆರೆ ಜಗಳೂರು ಮತ್ತು ಹರಿಹರ ತಾಲ್ಲೂಕಿನ ಜನರು ಚಿತ್ರದುರ್ಗಕ್ಕೆ ನ್ಯಾಯಾಲಯ ಕೆಲಸಗಳಿಗಾಗಿ ಹೋಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಅಲ್ಲಿ ಜಿಲ್ಲಾ ನ್ಯಾಯಾಲಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಇ) ಯಾವ ಯಾವ ನ್ಯಾಯಾಲಯಗಳನ್ನು ಪ್ರಾರಂಭಿಸಲಾಗುವುದು? (ವಿವರವಾಗಿ ತಿಳಿಸುವುದು)

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಸಚಿವರು):

ಅ) ಹೌದು.

ಆ) ದಾವಣಗೆರೆ ಜಿಲ್ಲೆಯೂ ಸೇರಿದಂತೆ (ಎಲ್ಲಾ 7 ಹೊಸ ಜಿಲ್ಲೆಗಳಿಗೆ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಗಳನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಶೀಘ್ರ ಪರಿಶೀಲನೆಯಲ್ಲಿದೆ. ಈ ನ್ಯಾಯಾಲಯಗಳಿಗೆ ಹುದ್ದೆಗಳನ್ನು ಸೃಜಿಸುವುದು ಒಳಗೊಂಡಂತೆ ಕಟ್ಟಡಗಳನ್ನು ಗುರ್ತಿಸುವುದು ಹಾಗೂ ನ್ಯಾಯಾಲಯಗಳನ್ನು ಸ್ಥಾಪಿಸಲು ಅವಶ್ಯವಾದ ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಇ) ಹೊಸದಾಗಿ ಸೃಜಿಸಲಾಗಿರುವ ಏಳು ಹೊಸ ಜಿಲ್ಲೆಗಳಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವನ್ನು ಮಾತ್ರ ಸ್ಥಾಪಿಸಲಾಗುವುದು.

ದಾವಣಗೆರೆ ಜಿಲ್ಲೆಯಲ್ಲಿರುವ ಲೋಕೋಪಯೋಗಿ ರಸ್ತೆಗಳ ಅಭಿವೃದ್ಧಿ.

2897:(3950)

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ದಾವಣಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆ ಜಿಲ್ಲೆಯಲ್ಲಿರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಸಂಖ್ಯೆ ಎಷ್ಟು (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು)

ಆ) ಈ ಜಿಲ್ಲೆಗೆ ಲೋಕೊಪಯೋಗಿ ಇಲಾಖೆಯಿಂದ ರಸ್ತೆ ಅಭಿವೃದ್ಧಿಗಾಗಿ ಕಳೆದ 4 ವರ್ಷಗಳಲ್ಲಿ ಬಿಡುಗಡೆಯಾದ ಹಣವೆಷ್ಟು? (ನೂತನ ದಾವಣಗೆರೆ ಜಿಲ್ಲೆಗೆ ಸೇರಿರುವ ತಾಲ್ಲೂಕುಗಳಿಗೆ ಈ ಹಿಂದಿನ ಜಿಲ್ಲೆಗಳಿಂದ ಬಿಡುಗಡೆಯಾಗಿರುವ ಹಣದ ವಿವರ ಒದಗಿಸುವುದು)

ಇ) ಲೋಕೋಪಯೋಗಿ ಇಲಾಖೆಯಿಂದ ಹಣ ಬಿಡುಗಡೆಯಾಗದೆ ದಾವಣಗೆರೆ ವಿಧಾನ ಸಭಾ ಕ್ಷೇತ್ರದಲ್ಲಿ ರಸ್ತೆ ಪೂರ್ತಿ ಹಾಳಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ದಾವಣಗೆರೆ ವಿಧಾನ ಸಭಾ ಕ್ಷೇತ್ರದ ಲೋಕೋಪಯೋಗಿ ಇಲಾಖೆ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡುವುದು ಹಾಗೂ ಯಾವಾಗ ರಸ್ತೆ ಅಭಿವೃದ್ಧಿ ಕಾರ್ಯವನ್ನು ಪೂರ್ಣಗೊಳಿಸುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):

ಅ) ದಾವಣಗೆರೆ ಜಿಲ್ಲೆಯಲ್ಲಿರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳ

ಸಂಖ್ಯೆ ರಾಜ್ಯ ಹೆದ್ದಾರಿ-2.

ವಿಧಾನ ಸಭಾ ಕ್ಷೇತ್ರವಾರು ವಿವರ ಇಂತಿದೆ.

ವಿಧಾನ ಸಭಾ ಕ್ಷೇತ್ರ	ರಾಜ್ಯ ಹೆದ್ದಾರಿ (ಸಂಖ್ಯೆ)	ರಾಜ್ಯ ಹೆದ್ದಾರಿ	ಜಿಲ್ಲಾ ಮುಖ್ಯ ರಸ್ತೆ
		(ಕಿ.ಮಿ)	
1. ದಾವಣಗೆರೆ	1	8ಕಿಮಿ	1.90 ಕಿಮಿ
2. ಮಾಯಕೊಂಡ	-	24.60	123.00
3. ಹರಿಹರ	1	37.60	101.60
4. ಜಗಳೂರು	-	-	69.00
	2	70.20	402.60

ಜಿಲ್ಲಾ ಮುಖ್ಯ ರಸ್ತೆ ಎಲ್ಲಾ ತ್ಹಾಲೂಕಿನಲ್ಲಿ ಕ್ಷೇತ್ರದಲ್ಲಿ ಬರುವುದರಿಂದ ಸಂಖ್ಯೆ ನೀಡಲಾಗುವುದಿಲ್ಲ.

ಆ)

ವರ್ಷ	1995-96	96-97	97-98	98-99
	(ಲಕ್ಷ ರೂಪಾಯಿಗಳಲ್ಲಿ)			
ಯೋಜನೆ	122.00	128.50	158.72	42.75
ಯೋಜನೇತರ	58.85	58.85	74.39	74.39
	189.85	187.35	233.11	117.14

ಇ) ವಾರ್ಷಿಕ ದುರಸ್ತಿ ನಿರ್ವಹಣೆಗಾಗಿ ಹಣ ಬಿಡುಗಡೆ ಲೋಕೋಪಯೋಗಿ ಇಲಾಖೆಯಿಂದ ಆಗುತ್ತಿದೆ. ಆದರೆ ಇತ್ತೀಚಿನ ಭಾರಿ ಮಳೆಯಿಂದಾಗಿ ರಸ್ತೆಗಳು ಹಾಳಾಗಿರುತ್ತವೆ.

ಈ) ದಾವಣಗೆರೆ ವಿಧಾನಸಭಾ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯಿಂದ ರಾಜ್ಯ ಹೆದ್ದಾರಿಗಾಗಿ 14.04 ಲಕ್ಷ ಹಾಗೂ ಜಿಲ್ಲಾ ಮುಖ್ಯ ರಸ್ತೆಗಾಗಿ 60.30 ಲಕ್ಷದಂತೆ ವಾರ್ಷಿಕ ದುರಸ್ತಿ ಮತ್ತು ನಿರ್ವಹಣೆ ಅನುದಾನ ಬಿಡುಗಡೆ ಮಾಡುತ್ತಿದ್ದು ಈಗಾಗಲೇ ರಸ್ತೆ ಅಭಿವೃದ್ದಿ ಕಾರ್ಯವನ್ನು ಕೈಗೊಳ್ಳಲಾಗಿದ್ದು, ಅನುದಾನದ ಲಭ್ಯತೆಯ ಮೇರೆಗೆ ಪೂರ್ಣಗೊಳಿಸಲಾಗುವುದು.

ಬೆಂಗಳೂರು-ಹೊನ್ನಾವರ ರಸ್ತೆ ಅಭಿವೃದ್ದಿ.

2898;(3925)

ಶ್ರೀ ಬಿ.ನಂಜಾಮರಿ (ತಿಪಟೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಹೊನ್ನಾವರ ರಸ್ತೆ ಮಳೆಯ ಅತಿವೃಷ್ಟಿಯಿಂದ ವಾಹನಗಳ ಸಂಚಾರಕ್ಕೆ ಅನಾನುಕೂಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಈ ರಸ್ತೆಯನ್ನು ದುರಸ್ತಿ ಮಾಡುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಹಲವೆಡೆ ತೊಂದರೆ ಆಗಿರುವುದು ಗಮನಕ್ಕೆ ಬಂದಿದೆ.

ಆ) ಸದರಿ ರಸ್ತೆಯ ವಾರ್ಷಿಕ ಸಾಮಾನ್ಯ ದುರಸ್ತಿ ಅನುದಾನದಲ್ಲಿ ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ ಹಾನಿಗೊಳಗಾದ ರಸ್ತೆಯನ್ನು ತುರ್ತು ದುರಸ್ತಿ ಮಾಡಲಾಗುತ್ತಿದೆ.

ತಿಪಟೂರು ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳ ರಸ್ತೆಗಳ ದುರಸ್ತಿ.

2899:(3925)

ಶ್ರೀ ಬಿ.ನಂಜಾಮರಿ (ತಿಪಟೂರು) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ತಿಪಟೂರು ತಾಲ್ಲೂಕಿನ ಮಳೆಯ ಅತೀ ವೃಷ್ಟಿಯಿಂದ ಗ್ರಾಮಾಂತರ

ಪ್ರದೇಶದಲ್ಲಿರುವ ಎಲ್ಲಾ ರಸ್ತೆಗಳು ಹಾಳಾಗಿದ್ದು ಸಂಚಾರಕ್ಕೆ ತುಂಬಾ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ. ಹಾಗಿದ್ದಲ್ಲಿ ಅಲ್ಲಿನ ರಸ್ತೆಗಳನ್ನು ದುರಸ್ತಿ ಗೊಳಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ. ಲೋಕೋಪಯೋಗಿ ಇಲಾಖೆಗೆ ಬರುವ ರಸ್ತೆಗಳು ಹಲವಡೆ ಮಳೆಗೆ ಹಾಳಾಗಿರುವುದು ಗಮನಕ್ಕೆ ಬಂದಿದೆ.

ಆ. ವಾಹನಗಳ ಸಂಚಾರಕ್ಕೆ ಅಡಚಣೆಯಾಗದಂತೆ ರಸ್ತೆಗಳ ದುರಸ್ತಿಗೆ ತುರ್ತು ಕ್ರಮ ತೆಗೆದುಕೊಳ್ಳಲಾಗಿದೆ.

ಇ.ಎಸ್.ಐ.ಯೋಜನೆಯಡಿಯಲ್ಲಿ ಬರುವ ಕಾರ್ಮಿಕರಿಗೆ ವೈದ್ಯಕೀಯ ಸೌಲಭ್ಯ.

2900:(3919)

ಶ್ರೀ ಡಿ.ಆರ್.ಪಾಟೀಲ (ಗದಗ್) ಮಾನ್ಯ ಕಾರ್ಮಿಕ ರಾಜ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಐ.ಎಸ್.ಐ. ಯೋಜನೆಯಡಿಯಲ್ಲಿ ಬರುವ ಕಾರ್ಮಿಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) ಈ ಕಾರ್ಮಿಕರ ವೈದ್ಯಕೀಯ ಸೌಲಭ್ಯಕ್ಕಾಗಿ ವೆಚ್ಚವಾಗುವ ಒಟ್ಟು ಮೊತ್ತ ಎಷ್ಟು;

ಇ) ಈ ಕಾರ್ಮಿಕರ ಸೌಲಭ್ಯಕ್ಕಾಗಿ ಇರುವ ಆಸ್ಪತ್ರೆಗಳೆಷ್ಟು; ಮೀಸಲಾಗಿರುವ ಹಾಸಿಗೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಈ) ಈ ಕಾರ್ಮಿಕರ ವಿಮೆಗಾಗಿ ಮಾಡಲಾಗುವ ಒಟ್ಟು ಮೊತ್ತ ಎಷ್ಟು;

ಉ) ಈ ಕಾರ್ಮಿಕರ ಇತರೇ ಸೌಲಭ್ಯಗಳಿಗಾಗಿ ಮಾಡಲಾಗುವ ಒಟ್ಟು ವೆಚ್ಚ ಎಷ್ಟು?

ಶ್ರೀ ಬಿ.ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು):

ಅ)7,34,600 ವಿಮಾದಾರರು. (ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ

ಒದಗಿಸಿದೆ)

ಆ) 1997-98ನೇ ಸಾಲಿನ ವೆಚ್ಚ ರೂ. 30.65 ಕೋಟಿಗಳು.

ಇ) 07 ಪೂರ್ಣಕಾಲಿಕ ಆಸ್ಪತ್ರೆಗಳು.

03 ಅನುಬಂಧ ಆಸ್ಪತ್ರೆಗಳು.

131 ಪೂರ್ಣಕಾಲಿಕ ಕಾರಾವಿ ಚಿಕಿತ್ಸಾಲಯಗಳು ಮತ್ತು 12 ಕಾರ್ಮಿಕ ಸೌಲಭ್ಯದ ಚಿಕಿತ್ಸಾಲಯಗಳು.

600 ಹಾಸಿಗೆಗಳನ್ನು ಇತರೆ ಆಸ್ಪತ್ರೆಗಳಲ್ಲಿ ಕಾಯ್ದಿರಿಸಲಾಗಿದೆ.

(ಜಿಲ್ಲಾವಾರು ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಿದೆ)

ಈ) ಈ ಕಾರ್ಮಿಕರ ವಿಮೆಗಾಗಿ ಹಣವನ್ನು ಖರ್ಚು ಮಾಡಲಾಗುತ್ತಿಲ್ಲ.

ಉ) 1997-98ನೇ ಸಾಲನಲ್ಲಿ ರೂ. 10.31 ಕೋಟಿಗಳು.

ಅನುಬಂಧ- 1

ಜಿಲ್ಲಾವಾರು ವಿಮಾದಾರರ ವಿವರ.

ಕ್ರ.ಸಂ.	ಜಿಲ್ಲೆ	ವಿಮಾದಾರರ ಸಂಖ್ಯೆ
1.	ಬೆಂಗಳೂರು	5,38,900
2.	ದಾವಣಗೆರೆ	52,735
3.	ಮೈಸೂರು	36,957
4.	ಮಂಗಳೂರು (ದಕ್ಷಿಣ ಕನ್ನಡ)	23,100
5.	ಧಾರವಾಡ	19,050
6.	ಗುಲ್ಬರ್ಗಾ	13,750
7.	ಬೆಳಗಾಂ	11,732
8.	ತುಮಕೂರು	8,200
9.	ಉಡುಪಿ	6,600
10.	ಗದಗ	5,250
11.	ಮಂಡ್ಯ	3,671
12.	ಶಿವಮೊಗ್ಗ	3,650
13.	ಬಳ್ಳಾರಿ	3,129
14.	ಕೋಲಾರ	2,700
15.	ಚಿತ್ರದುರ್ಗ	1,580
16.	ಹಾಸನ	1,450
17.	ಬಜಾಪುರ	850
18.	ಬಾಗಲಕೋಟೆ	571
19.	ರಾಯಚೂರು	518
20.	ಚಾಮರಾಜನಗರ	207
	ಒಟ್ಟು	7,34,600

ಅನುಬಂಧ-2

(ವಿಮಾದಾರರಿಗೆ ಕಾಯ್ದಿರಿಸಲಾದ ಹಾಸಿಗೆಗಳ ಜಿಲ್ಲಾವಾರು ವಿವರ)

ಜಿಲ್ಲೆ	ಸರ್ಕಾರಿ: ಅನುಬಂಧ: ಕಾರ್ಮಿಕ ಸೌಲಭ್ಯದ ಆಸ್ಪತ್ರೆಯಲ್ಲಿ ಕಾಯಿರಿಸಿದ ಹಾಸಿಗೆ ಸಂಖ್ಯೆ:
ಬೆಂಗಳೂರು	280
ಬೆಳಗಾಂ	15
ಬಳ್ಳಾರಿ	18
ಬಿಜಾಪುರ	05
ಬಾಗಲಕೋಟೆ	04
ಚಿತ್ರದುರ್ಗ	06
ದಾವಣಗೆರೆ	39
ಧಾರವಾಡ	29
ಗದಗ	12
ಗುಲ್ಬರ್ಗಾ	20
ಹಾಸನ	08
ಕೋಲಾರ	32
ಮೈಸೂರು	45
ಚಾಮರಾಜನಗರ	04
ಮಂಡ್ಯ	03
ರಾಯಚೂರು	09
ಶಿವಮೊಗ್ಗ	04
ದಕ್ಷಿಣ ಕನ್ನಡ	45
ಉಡುಪಿ	08
ಉತ್ತರಕನ್ನಡ	02
ತುಮಕೂರು	04
	600

ರಾಜ್ಯದಲ್ಲಿ ಖಾಲಿ ಇರುವ ಪಶುವೈದ್ಯಾಧಿಕಾರಿ ಹುದ್ದೆಗಳು.

2901:(3952)

ಶ್ರೀ ಪಿ.ಹೆಚ್.ಪೂಜಾರ್ (ಬಾಗಲಕೋಟೆ) ಮಾನ್ಯ ಪಶುಸಂಗೊಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿ ಇರುವ ಪಶುವೈದ್ಯಾಧಿಕಾರಿ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಬಿ.ನಿಂಗಯ್ಯ (ಪಶುಸಂಗೊಪನಾ ರಾಜ್ಯ ಸಚಿವರು):

ಅ) 363.

ಆ) ಕರ್ನಾಟಕ ಲೋಕ ಸೇವಾ ಆಯೋಗದಿಂದ 195 ಅಭ್ಯರ್ಥಿಗಳ ಆಯ್ಕೆ ಪಟ್ಟಿ ಸ್ವೀಕೃತಗೊಂಡಿದ್ದು ಸದರಿ ಅಭ್ಯರ್ಥಿಗಳ ಪೋಲೀಸ್ ವರದಿಯನ್ನು ಹಾಗೂ ದೇಹಧಾರ್ಢ್ಯ ಧೃಢೀಕರಣ ಪತ್ರವನ್ನು ಪಡೆಯಲು ಸಂಬಂಧಿಸಿದ ಅಧಿಕಾರಿಗಳಿಗೆ ಕಳುಹಿಸಲಾಗಿದೆ. ಅವುಗಳು ಬಂದ ನಂತರ ನೇಮಕಾತಿ ಆದೇಶ ಹೊರಡಿಸಲಾಗುವುದು.

ಅರಣ್ಯ ಪ್ರದೇಶದಲ್ಲಿ ಹಿಂದುಳಿದ ರೈತರಿಗೆ ಭೂಮಂಜೂರಾತಿ.

2902:(3980)

ಶ್ರೀ ಕೆ.ಪ್ರವಾಪಚಂದ್ರ ಶೆಟ್ಟಿ (ಕುಂದಾಪುರ) ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1978ರ ಪೂರ್ವ ವಾಸ್ತವ್ಯವಿರುವ ರಕ್ಷಿತ ಅರಣ್ಯ ಪ್ರದೇಶದಲ್ಲಿ ಕೃಷಿ ಮಾಡಿ ವಾಸ್ತವ್ಯವಿರುವ ಆರ್ಥಿಕವಾಗಿ ಹಿಂದುಳಿದ ರೈತರಿಗೆ ಭೂ ಮಂಜೂರಾತಿ ಮಾಡಲಾಗುವುದೆ?

ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇಂತಹ ಎಷ್ಟು ಪ್ರಕರಣಗಳು ತನಿಖೆಗೆ ಬಾಕಿ ಇದೆ? (ಹೆಸರು ಮತ್ತು ಸಂಪೂರ್ಣ ವಿಳಾಸ, ಗ್ರಾಮ ಹಾಗೂ ತಾಲ್ಲೂಕು ತಿಳಿಸುವುದು)

ಶ್ರೀ ಡಿ.ಮಂಜುನಾಥ (ಅರಣ್ಯ ಸಚಿವರು):

ಅ) ಹೌದು, ಕರ್ನಾಟಕ ರಾಜ್ಯದಲ್ಲಿ ದಿ:27-4-78ರ ಪೂರ್ವದಲ್ಲಿ ಅರಣ್ಯ ಪ್ರದೇಶದ ಅತಿಕ್ರಮಣ ಆಗಿರುವ ಬಗ್ಗೆ ಕೆಲವು ಷರತ್ತಿಗೊಳಪಟ್ಟು ಸಕ್ರಮಗೊಳಿಸಲು ಈಗಾಗಲೇ ಕೇಂದ್ರ ಸರ್ಕಾರವು ತನ್ನ ಅನುಮೋದನೆಯನ್ನು ನೀಡಿರುತ್ತದೆ. ಇದರಂತೆ, ರಾಜ್ಯ ಸರ್ಕಾರ ದಿನಾಂಕ 5-5-97ರಲ್ಲಿ ಹಲವು ನಿಬಂಧನೆಗಳನ್ನು ಪೂರೈಸುವ ಷರತ್ತುಗಳನ್ನು ವಿಧಿಸಿ, ಸಕ್ರಮಗೊಳಿಸಿ, ಅರ್ಹ ಅತಿಕ್ರಮಣದಾರರಿಗೆ ಪಟ್ಟಾ ನೀಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಿರುತ್ತಾರೆ. ಅದರಂತೆ ಸೂಕ್ತಕ್ರಮ ಕೈಗೊಳ್ಳಲಾಗುವುದು.

ಆ) ಸರ್ಕಾರದ ಆದೇಶ ದಿನಾಂಕ 5-5-97 ರಲ್ಲಿ ಷರತ್ತಿಗೊಳಪಟ್ಟು ಸಕ್ರಮಗೊಳಿಸಲು ನೀಡಿರುವ ಆದೇಶದನ್ವಯ ಒಟ್ಟು ಮಂಗಳೂರು ಜಿಲ್ಲೆಯಲ್ಲಿ 188 ಹಾಗೂ ಉಡುಪಿ ಜಿಲ್ಲೆಯಲ್ಲಿ 428 ಪ್ರಕರಣಗಳು ತನಿಖೆಗೆ ಬಾಕಿ ಇವೆ. (ಗ್ರಾಮವಾರು ವಿವರಗಳಿಗೆ ಪಟ್ಟಿ ಲಗತ್ತಿಸಿದೆ)

ದಿನಾಂಕ 27-4-1978ರ ಮೊದಲು ಮಂಗಳೂರು ವಿಭಾಗದ ಮೀಸಲು ಅರಣ್ಯ ಪ್ರದೇಶದಲ್ಲಿ ಅತಿಕ್ರಮಣ ನೋಡಿಕೊಂಡಿರುವವರ ಹಾಗೂ ಸಕ್ರಮಗೊಳಿಸಬೇಕಾದ ಜಮೀನಿನ ವಿವರ ತೋರಿಸುವ ತಖ್ತೆ.

ಕ್ರ. ಸಂ.	ಅತಿಕ್ರಮಣದಾರರ ಹೆಸರು ಮತ್ತು ವಿಳಾಸ		ಅತಿಕ್ರಮಿಸಿರುವ ವಿಸ್ತೀರ್ಣ (ಹೆ.ಗಳಲ್ಲಿ)	ಸಕ್ರಮಗೊಳಿಸ ಬೇಕಾದ ವಿಸ್ತೀರ್ಣ	ಹೆಚ್ಚುವರಿ ಪ್ರದೇಶ	ಮೀಸಲು ಅರಣ್ಯದ ಹೆಸರು
1	2		3	4	5	6
ಶ್ರೀಯುತರಾದ:						
1.	**ಬೆಳ್ತಂಗಡಿ ವಲಯ**					
1.	ಸೋಮಣ್ಣ ಗೌಡ, ಕಡಿರುದ್ಯಾವರ ಗ್ರಾಮ		1.05	1.05	-	ಚಾರ್ಮಾಡಿ-ಕನಪ್ಪಾ ಮೀಸಲು ಅರಣ್ಯ ಬ್ಲಾಕ್-111
2.	ಕುಶಾಲಪ್ಪ ಗೌಡ	,,	029	0.29	-	--ಅದೇ--
3.	ಬಾಬು ಗೌಡ	,,	0.54	0.54	-	--ಅದೇ--
4.	ವೆಂಕಮ್ಮ	,,	0.32	0.32	-	--ಅದೇ--
5.	ಶಾಂತಪ್ಪ ಗೌಡ	,,	0.64	0.64	-	--ಅದೇ--
6.	ಐತ ನಲಿಕೆ	,,	0.63	0.63	-	--ಅದೇ--
7.	ಕಮಲ	,,	0.57	0.57	-	--ಅದೇ--

8.	ತಮ್ಮಯ್ಯ ಗೌಡ	''	1.68	1.21	0.47	--ಅದೇ--
9.	ಗೋವಿಂದ ನ್ಯಾಕ್	''	0.56	0.56	-	--ಅದೇ--
10.	ನಾರಾಯಣ ನ್ಯಾಕ್	''	1.00	1.00	-	--ಅದೇ--
11.	ನಾರಾಯಣ ಮಲೆಕುಡಿಯ	''	0.89	0.89	-	--ಅದೇ--
12.	ಚೀಕು ನ್ಯಾಕ್	''	1.00	0.65	0.35	--ಅದೇ--
13.	ಗುಮ್ಮ ಗೌಡ	''	1.68	1.21	0.47	--ಅದೇ--
14.	ಕುಂದಮೇರ	''	0.76	0.76	-	--ಅದೇ--
15.	ಬಾಬು ಪೂಜಾರಿ	''	0.65	0.65	-	--ಅದೇ--
16.	ರಾಮಯ್ಯ ಗೌಡ	''	0.48	0.48	-	--ಅದೇ--
17.	ಧರ್ಣಪ್ಪ ಗೌಡ	''	0.08	0.08	-	--ಅದೇ--
18.	ಪ್ರೇಮ, ನೆರಿಯಾ ಗ್ರಾಮ	''	0.40	0.40	-	ಚಾರ್ಮಾಡಿ-ಕನಪಾಡಿ ಮೀಸಲು ಅರಣ್ಯ
19.	ಎಂ.ಬಿ.ಜೋರ್ಜ್	''	0.62	0.62	-	--ಅದೇ--
20.	ಜೊಸೆಫ್ ಯಾನೆ ಜೋನ್	''	0.44	0.44	-	--ಅದೇ--

21.	ಎಂ.ಜಿ.ಅಂತೋನಿ, ನೆರಿಯಾ ಗ್ರಾಮ		0.85	0.85	-	ಚಾರ್ಮಾಡಿ ಕನಪ್ಪಾಡಿ ಮೀಸಲು ಅರಣ್ಯ
22.	ಕೆಂ.ಎಂ.ಮಾಧವ	''	0.60	0.60	-	--ಅದೇ--
23.	ಕೆ.ವಿ.ಮಾದಪ್ಪನ್	''	0.76	0.76	-	--ಅದೇ--
24.	ಡಿ.ಆರ್.ಚಾಕೋ,	''	1.30	1.21	0.09	--ಅದೇ--
25.	ಪಿ.ಜಿ.ಜೋಸೆಫ್	''	0.96	0.96	-	--ಅದೇ--
26.	ಉಮ್ಮಣ್ಣ ರಾಣ್ಯ,	''	0.64	0.64	-	--ಅದೇ--
27.	ಸಿ.ಡಿ.ಅಂತೋಣಿ	''	0.19	0.19	-	--ಅದೇ--
28.	ಕೆ.ಪಿ.ಬಾಬು	''	0.66	0.66	-	--ಅದೇ--
29.	ಎಂ.ಜೆ.ದೇವಸಿ	''	0.53	0.53	-	--ಅದೇ--
30.	ಕೆ.ವಿ.ರಾಜನ್,	''	0.57	0.57	-	--ಅದೇ--
31.	ಗೊಂಬ ಗೌಡ	''	0.79	0.64	0.15	--ಅದೇ--
32.	ಪುಟ್ಟ ಗೌಡ	''	0.50	0.40	0.10	--ಅದೇ--
33.	ಸುಂದರ ಗೌಡ, ಕದಿರುದ್ಯಾವರ ಗ್ರಾಮ		0.81	0.81	-	--ಅದೇ--

34.	ವಿ.ಜೆ.ಚಾಕೋ ನರಿಯಾ ಗ್ರಾಮ	1.10	1.10	-	--ಅದೇ--
35.	ಕೆ.ಎಂ.ಚೋಮಿ, ''	0.53	0.53	-	--ಅದೇ--
36.	ಸಂಚೀವ ಆಚಾರಿ, ಕಡಿರುದ್ಯಾವರ ಗ್ರಾಮ	0.16	0.16	-	--ಅದೇ--
37.	ಸುಂದರ ನ್ಯಾಕ್, ನರಿಯಾ ಗ್ರಾಮ	0.32	0.32	-	ಮುಂಡಾಜೆ ಕಾಪು ಮೀಸಲು ಅರಣ್ಯದ ಪರ ಸ್ಥಳ.
		25.55	23.92	1.63	
2.	**ಉಪ್ಪಿನಂಗಡಿ ವಲಯ:**				
38.	ಕಮಲ, ಶಿಶಿಲ ಗ್ರಾಮ	1.21	1.21	-	ಮಿಯಾರ್ ಮೀಸಲು ಅರಣ್ಯ
39.	ನಾರಾಯಣ ಗೌಡ ''	1.21	1.21	-	--ಅದೇ--
40.	ಮುತ್ತಮ್ಮ, ''	1.60	0.39	-	--ಅದೇ--
41.	ಮೋನಪ್ಪ ಪೂಜಾರಿ ''	1.21	1.21	-	--ಅದೇ--
42.	ಧರ್ಮಪ್ಪ ಪೂಜಾರಿ ''	1.21	1.21	-	--ಅದೇ--
43.	ಶೀನಪ್ಪ ಪೂಜಾರಿ ''	1.01	1.01	-	--ಅದೇ--
44.	ಜಯರಾಮಗೌಡ, ಶಿಶಿಲ ಗ್ರಾಮ	0.80	0.80	-	ಮಿಯಾರ್ ಮೀಸಲು ಅರಣ್ಯ

45.	ಚನ್ನಪ್ಪ ಪೂಜಾರಿ	''	1.21	1.21	-	--ಅದೇ--
46.	ಕೃಷ್ಣಪ್ಪ ಪೂಜಾರಿ	''	1.01	1.01	-	--ಅದೇ--
47.	ಪದ್ಮಯ್ಯ ಪೂಜಾರಿ	''	0.73	0.73	-	--ಅದೇ--
48.	ಪರಮೇಶ್ವರ ಗೌಡ ಹಾಗೂ ದೊಡ್ಡಣ್ಣ ಗೌಡ		1.62	1.21	0.41	--ಅದೇ--
49.	ದೇವಪ್ಪ ಗೌಡ	''	1.21	1.21	-	--ಅದೇ--
50.	ಬೈರೇ ಗೌಡ	''	1.01	1.01	-	--ಅದೇ--
51.	ಕುಂಞಣ್ಣ ಗೌಡ	''	1.56	1.21	0.35	--ಅದೇ--
			16.60	15.45	1.15	
3.	ಸುಬ್ರಹ್ಮಣ್ಯ ವಲಯ:					
52.	ರಾಮಕುಟ್ಟಿ ಶಿರಿಬಾಗಿಲು ಗ್ರಾಮ		0.08	0.08	-	ಕೊಂಬಾರು ಮೀಸಲು ಅರಣ್ಯ
53.	ಶಿವನಾಂದ ವೈದ್ಯ	''	0.23	0.23	-	--ಅದೇ--
			0.31	0.31		

4.	**ಪಂಜ ವಲಯ:**				
54.	ಚಂದ್ರಹಾಸ ಮಾರ್ಲ, ಮಲ್ಪ ಗ್ರಾಮ	0.08	0.08	-	ವಣ್ಣೂರು ಮೀಸಲು ಅರಣ್ಯ
55.	ಬಾಮು ಗೌಡ, ಕುಂತೂರು ಗ್ರಾಮ	0.85	0.85	-	ಕುಂತೂರು ಮೀಸಲು ಅರಣ್ಯ ಬಫರ್ ಸ್ಥಳ
56.	ಅಬ್ರಹಾಂ ,,	0.71	0.71	-	--ಅದೇ--
57.	ಥೋಮಸ್ ,,	0.58	0.58	-	--ಅದೇ--
58.	ಮಾಯಿಲಪ್ಪ, ,,	0.79	0,79	-	--ಅದೇ--
59.	ಮಥಾಯಿ, ,,	1.34	1.21	0.13	--ಅದೇ--
60.	ಹೊನ್ನಪ್ಪ ಗೌಡ, ಕಡಬ ಗ್ರಾಮ	1.86	1.21	0.65	--ಅದೇ--
61.	ಹೊನ್ನಪ್ಪ, ಕುಂತೂರು ಗ್ರಾಮ	1.65	1.21	0.44	--ಅದೇ--
62.	ಪದ್ಮಯ್ಯ ಗೌಡ, ಕಡಬ ಗ್ರಾಮ	1.36	1.21	0.17	--ಅದೇ--
63.	ಕುಶಾಲಪ್ಪ ಗೌಡ, ಕಡಬ ಗ್ರಾಮ	0.45	0.45	-	ಕುಂತೂರು ಮೀಸಲು ಅರಣ್ಯದ ಬಫರ್ ಸ್ಥಳ
64.	ರಾಮಣ್ಣ ಗೌಡ ,,	0.55	0.55	-	--ಅದೇ--

65.	ಐತಪ್ಪ ನ್ಯಾಕ್,	''	2.25	1.21	1.04	--ಅದೇ--
66.	ಸೋಮ ನ್ಯಾಕ್	''	1.82	1.21	0.61	--ಅದೇ--
67.	ಕರಿಯ ಮೇರ, ಬಲ್ಯ ಗ್ರಾಮ		0.43	0.43	-	--ಅದೇ--
68.	ತನಿಯ ಮೇರ, ಕಡಬಿ ಗ್ರಾಮ		0.87	0.87	-	--ಅದೇ--
69.	ಕೆ.ಆರ್.ಪದ್ಮನಾಭ	''	0.55	0.55	-	--ಅದೇ--
70.	ಕೊರಗ ನ್ಯಾಕ್,	''	1.11	1.11	-	--ಅದೇ--
71.	ಕುಂಞಮೇರ	''	1.11	1.11	-	--ಅದೇ--
72.	ಕುಕ್ಕಪ್ಪ ಗೌಡ, ಬಲ್ಯ ಗ್ರಾಮ		0.78	0.78	-	ಪಡ್ನೂರು ಮೀಸಲು ಅರಣ್ಯ ಬಫರ್ ಪ್ರದೇಶ
73.	ಚೋಮ ಮೇರ, ಕಡಬ ಗ್ರಾಮ		0.14	0.14	-	ಕುಂತೂರು ಮೀಸಲು ಅರಣ್ಯ ಬಫರ್ ಪ್ರದೇಶ
74.	ಶೇಷಪ್ಪ ನ್ಯಾಕ್	''	0.91	0.91	-	--ಅದೇ--
75.	ಪದ್ಮಯ್ಯ ನ್ಯಾಕ್	''	1.82	1.21	0.61	--ಅದೇ--
76.	ಕಂಞಣ್ಣ ಗೌಡ,	''	1.42	1.21	0.21	--ಅದೇ--

77.	ನೀಲಕಂಠ, ನೂಚಿಬಾಳ್ತಿಲ ಗ್ರಾಮ	1.28	1.21	0.07	ನೂಚಿಬಾಳ್ತಿಲ ಸರ್ವೇಯ್ಡ್ ಬ್ಲಾಕ್
78.	ಕುಂಞಂಬು "	1.34	1.21	0.13	--ಅದೇ--
79.	ಜಾಕೋ "	0.95	0.95	-	--ಅದೇ--
80.	ಹುಕ್ರ "	1.15	1.15	-	--ಅದೇ--
81.	ಜೋಯಿ "	2.11	1.21	0.90	--ಅದೇ--
82.	ಪಾಪಚ್ಚನ್ "	1.54	1.21	0.33	--ಅದೇ--
83.	ಕಮಲಾಕ್ಷಿ "	0.85	0.85	-	--ಅದೇ--
84.	ಶಿವಕುಟ್ಟಿ "	1.68	1.21	0.47	--ಅದೇ--
85.	ವಿಲಿಯಮ್ಮ, ಕುಂತೂರು ಗ್ರಾಮ	0.48	0.48	-	ಕುಂತೂರು ಮೀಸಲು ಅರಣ್ಯ ಬಫರ್ ಸ್ಥಳ
86.	ಕೃಷ್ಣಪ್ಪ ಗೌಡ, ನೂಜಿಬಾಳ್ತಿಲ ಗ್ರಾಮ	2.55	1.21	1.34	ನೂಜಿಬಾಳ್ತಿಲ ಸರ್ವೆಡ್ ಬ್ಲಾಕ್
87.	ಕೊರಗಪ್ಪ ಗೌಡ "	3.79	1.21	2.58	--ಅದೇ--
88.	ಒಡ್ಯಪ್ಪ ಗೌಡ, ನೂಜಿಬಾಳ್ತಿಲ ಗ್ರಾಮ	1.92	1.21	0.74	ನೂಜಿಬಾಳ್ತಿಲ ಸರ್ವೇಯ್ಡ್ ಬ್ಲಾಕ್

89.	ರಾಘವನ್	''	1.01	1.01	-	--ಅದೇ--
90.	ಶಂಕರ ಭಟ್, ಪೆರಾಜೆ ಗ್ರಾಮ		2.20	1.21	0.99	ಪಡ್ನೂರು ಮೀಸಲು ಅರಣ್ಯ ಬಫರ್ ಸ್ಥಳ
91.	ಮಾಧವ ಭಟ್	''	1.52	1.21	0.31	--ಅದೇ--
92.	ಲಕ್ಷ್ಮಣ ಗೌಡ,	''	0.36	0.36	-	--ಅದೇ--
93.	ತಿಮ್ಮಪ್ಪ ಗೌಡ, ನೆಲ್ಯಾಡಿ ಗ್ರಾಮ		0.56	0.56	-	--ಅದೇ--
94.	ಶ್ರೀ ಜೋಯಿ,	''	0.60	0.60	-	ಸುವರ್ಮಲೆ ಮೀಸಲು ಅರಣ್ಯದ ಬಫರ್ ಸ್ಥಳ
95.	ಶೇಷಪ್ಪ ಗೌಡ,	''	0.70	0.70	-	--ಅದೇ--
96.	ತಿಮ್ಮಪ್ಪ ಕುಂಬಾರ್	''	0.80	0.80	-	--ಅದೇ--
97.	ಟಿ.ಸಿ.ಜೋನ್,	''	0.97	0.97	-	--ಅದೇ--
98.	ಪಿ.ಪಿ.ಚಾಕೋ,	''	1.44	1.21	0.23	--ಅದೇ--
99.	ಶ್ರೀ ಚಾಂಡಿ	''	0.51	0.51	-	--ಅದೇ--

100. ಮೊನಮ್ಮ	''	0.81	0.81	-	ಪಡ್ನೂರು ಮೀಸಲು ಅರಣ್ಯದ ಭಫರ್‌ಸ್ಥಳ
101. ಪೊಡಿಯ ಗೌಡ, ಬಲ್ಯಗ್ರಾಮ		1.00	1.00	-	--ಅದೇ--
102. ಕೊರಗಪ್ಪ	''	0.64	0.64	-	ಕುಂತೂರು ಮೀಸಲು ಅರಣ್ಯದ ಭಫರ್ ಸ್ಥಳ
103. ಎಲ್ಯಣ್ಣ ಗೌಡ, ನೆಲ್ಯಾಡಿ ಗ್ರಾಮ		0.60	0.60	-	--ಅದೇ--
104. ಇಸ್ಮಾಯಿಲ್, ಬಲ್ಯಗ್ರಾಮ		0.96	0.96	-	ಪಡ್ನೂರು ಮೀಸಲು ಅರಣ್ಯದ ಬಫರ್ ಸ್ಥಳ
105. ಕೊರಗಪ್ಪ ಮಲೆಕುಡಿಯ	''	0.57	0.57	-	ಕುಂತೂರು ಮೀಸಲು ಅರಣ್ಯದ ಬಫರ್ ಸ್ಥಳ
106. ತನಿಯ ಮೇರ, ಬಲ್ಯಗ್ರಾಮ		0.97	0.97	-	ಪಚ್ನೂರು ಮೀಸಲು ಅರಣ್ಯದ ಬಫರ್ ಸ್ಥಳ
107. ಬೈರ ಮೇರ	''	0.72	0.72	-	--ಅದೇ--
108. ಬಾಬು ಮೇರ	''	1.20	1.20	-	--ಅದೇ--

109. ನೋಣಯ್ಯ ಮಲೆಕುಡಿಯ	''	0.74	0.74	-	ಕುಂತೂರು ಮೀಸಲು ಅರಣ್ಯದ ಬಫರ್ ಸ್ಥಳ
110. ಕುಂಞಣ್ಣ ಗೌಡ	''	0.19	0.19	-	ಪಡ್ನೂರು ಮೀಸಲು ಅರಣ್ಯದ ಬಫರ್ ಸ್ಥಳ
111. ಹುಕ್ರಪ್ಪ ಪರವ, ಇಚ್ಲಂಪಾಡಿ ಗ್ರಾಮ		0.30	0.30	-	--ಅದೇ--
112. ಅಣ್ಣು ಮಲೆಕುಡಿಯ, ಅಲಂಕಾರು ಗ್ರಾಮ		0.71	0.71	-	ಸುವರ್‌ಮಲೆ ಮೀಸಲು ಅರಣ್ಯದ ಬಫರ್ ಸ್ಥಳ
113. ಮಾಧವ ನಾಯರ್, ಕೊಕ್ಕಾಲು ಗ್ರಾಮ		1.04	1.04	-	--ಅದೇ--
114. ಕೆ.ಜೊಸೆಫ್,	''	1.40	1.21	0.19	--ಅದೇ--
115. ಎಲ್ಯಣ್ಣ ಗೌಡ, ಎಡಮಂಗಲ ಗ್ರಾಮ		0.22	0.22	-	ಎಣ್ಮೂರು ಮೀಸಲು ಅರಣ್ಯದ ಬಫರ್ ಸ್ಥಳ
116. ಕೃಷ್ಣಪ್ಪ ನಾಯಕ್,	''	1.21	1.21	-	--ಅದೇ--
117. ಮಹಾಲಿಂಗ ನ್ಯಾಕ್,	''	0.20	0.20	-	--ಅದೇ--
118. ಬಬು ನ್ಯಾಕ್,	''	0.27	0.27	-	--ಅದೇ--

119. ಸೀತಮ್ಮ	''	0.34	0.34	-	--ಅದೇ--
120. ಕೆ.ದುಗ್ಗಣ್ಣ ಗೌಡ,	''	0.59	0.59	-	--ಅದೇ--
121. ದಾಮೋದರ ಗೌಡ,	''	1.03	1.03	-	--ಅದೇ--
122. ದಾಮೋದರ ನ್ಯಾಕ್	''	0.32	0.32	-	--ಅದೇ--
123. ಲಿಂಗಪ್ಪ ಗೌಡ	''	0.51	0.51	-	--ಅದೇ--
124. ಹೊನ್ನಪ್ಪ ಗೌಡ	''	0.32	0.32	-	--ಅದೇ--
125. ಹುಕ್ರಪ್ಪ ಗೌಡ	''	0.47	047	-	--ಅದೇ--
126. ವೀರಮ್ಮ	''	0.89	0.89	-	--ಅದೇ--
127. ಮೀನಾಕ್ಷಿ	''	1.07	1.07	-	--ಅದೇ--
128. ಲೀಲಾವತಿ	''	0.63	0.63	-	--ಅದೇ--
129. ಶಿವಪ್ಪ ಗೌಡ,	''	0.73	0.73	-	--ಅದೇ--
130. ಶೇಷಪ್ಪ ನ್ಯಾಕ್	''	0.22	0.22	-	--ಅದೇ--
131. ಪದ್ಮಯ್ಯ ನ್ಯಾಕ್	''	0.28	0.28	-	--ಅದೇ--
132. ಜಾಣು ನ್ಯಾಕ್	''	0.57	0.57	-	--ಅದೇ--

133. ಕೃಷ್ಣ ಮೇಸ್ತ್ರಿ	''	0.28	0.28	-	--ಅದೇ--
134. ಬಾಳಪ್ಪ ನ್ಯಾಕ್ ಎಣ್ಣೂರು ಗ್ರಾಮ		0.37	0.37	-	--ಅದೇ--
135. ಇಬ್ರಾಹಿಂ		0.25	0.25	-	--ಅದೇ--
136. ಬೋರ	''	0.99	0.99	-	--ಅದೇ--
137. ಅಕ್ಕು	''	0.30	0.30	-	--ಅದೇ--
138. ಬಾಲಕೃಷ್ಣ	''	0.16	0.16	-	--ಅದೇ--
139. ಲಿಂಗಪ್ಪ ಗೌಡ, ಎಡಮಂಗಲ ಗ್ರಾಮ		0.36	0.36	-	--ಅದೇ--
140. ಚಂದ್ರಹಾಸ ಮಾರ್ಲ, ಬಲ್ಯಗ್ರಾಮ		0.20	0.20	-	--ಅದೇ--
141. ಪ್ಯೊದೀನ್, ಕೆನ್ಯಾ ಗ್ರಾಮ		0.06	0.06	-	ಎಣ್ಮೂರು ಮೀಸಲು ಅರಣ್ಯದ ಭಫರ್ ಸ್ಥಳ
142. ಪದೋಳಿ, ದೋಲ್ವಾಡಿ ಗ್ರಾಮ		0.02	0.02	-	ದೋಳ್ವಾಡಿ ಮೀಸಲು ಅರಣ್ಯದ ಬಫರ್ ಸ್ಥಳ
143. ಬಾಬು	''	0.02	0.02	-	--ಅದೇ--
144. ಕೊರಗ	''	0.02	0.02	-	--ಅದೇ--

145. ಮೊಡಂಕಿಲ	''	0.02	0.02	-	--ಅದೇ--
146. ಗುರುವ	''	0.02	0.02	-	--ಅದೇ--
147. ಜೋಗಿ	''	0.02	0.02	-	--ಅದೇ--
148. ನಕ್ಕುರ	''	0.02	0.02	-	--ಅದೇ--
149. ಕೊರಪೊಳು,	''	0.02	0.02	-	--ಅದೇ--
150. ಉಕ್ರ	''	0.02	0.02	-	--ಅದೇ--
151. ಚಲ್ಲ	''	0.02	0.02	-	--ಅದೇ--
152. ವಕೀರ,	''	0.02	0.02	-	--ಅದೇ--
153. ಬೀತ್ರು	''	0.02	0.02	-	--ಅದೇ--
154. ಮುದರ	''	0.02	0.02	-	--ಅದೇ--
155. ಪೀರು	''	0.02	0.02	-	--ಅದೇ--
156. ಮಂಜ	''	0.02	0.02	-	--ಅದೇ--
157. ಚೋಮು	''	0.02	0.02	-	--ಅದೇ--
158. ಮಾದಿರು	''	0.02	0.02	-	--ಅದೇ--

159. ಕೊರಗ	''	0.02	0.02	-	--ಅದೇ--
160. ಕುಕ್ಕ	''	0.02	0.02	-	--ಅದೇ--
161. ಕರಿಯ	''	0.02	0.02	-	--ಅದೇ--
162. ಚೆನ್ನ ಅಜಿಲ, ಎಡಮಂಗಲ ಗ್ರಾಮ		0.04	0.04	-	ದೋಲ್ಪಾಡಿ ಮೀಸಲು ಅರಣ್ಯದ ಬಫರ್ ಸ್ಥಳ
163. ಸಾಂತಪ್ಪ ಗೌಡ	''	0.53	0.53	-	--ಅದೇ--
164. ಲಿಂಗಪ್ಪ ಗೌಡ	''	0.40	0.40	-	--ಅದೇ--
165. ಚೆನ್ನಣ್ಣ ಗೌಡ	''	0.62	0.62	-	--ಅದೇ--
166. ದೇಜಪ್ಪ ಗೌಡ	''	1.10	1.10	-	--ಅದೇ--
167. ಜಾನಕಿ	''	0.16	0.16	-	--ಅದೇ--
168. ರಾಘವ ಪೂಜಾರಿ,	''	0.32	0.32	-	--ಅದೇ--
169. ಸುಂದರಿ	''	0.44	0.44	-	--ಅದೇ--
170. ಶಾಂತಪ್ಪ ಗೌಡ,	''	0.97	0.97	-	--ಅದೇ--
171. ಪಕೀರಪ್ಪ ಗೌಡ,	''	1.00	1.00	-	--ಅದೇ--

172. ಹೂವಮ್ಮ	''	0.97	0.97	-	--ಅದೇ--
173. ನಾರಾಯಣ ಆಚಾರಿ		0.35	0.35	-	--ಅದೇ--
174. ಚೋಮು, ದೋಲ್ವಾಡಿ ಗ್ರಾಮ		0.17	0.17	-	ದೋಲ್ವಾಡಿ ಮಿಸಲು ಅರಣ್ಯದ ಬಫರ್ ಸ್ಥಳ
175. ಚೋಮ ಹರಿಜನ	''	0.25	0.25	-	--ಅದೇ--
176. ಮುದ್ದ	''	0.20	0.20	-	--ಅದೇ--
177. ಕೊಂಗ	''	0.28	0.28	-	--ಅದೇ--
